ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 13

ಮಾರ್ಚ್ 27, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com



'ವಿಕಿಲೀಕ್ಸ್' ಮಾಹಿತಿ ಸ್ಫೋಟ :



ಅಮೆರಿಕಾದ ಅಡಿಯಾಳಾಗಲು ಭಾರತದ ಹೆಬ್ಬಯಕೆ



ಜನರ ಪ್ರಶ್ನೆಗಳತ್ತ ಕುರುಡು :

ಬಿಜೆಪಿ ಸರ್ಕಾರದ ವಿರುದ್ಧ ಒಂದು ಜನಾಂದೋಲನ



ಯುಪಿಎ 'ಹಸಿರು ಕ್ರಾಂತಿ' : ಬಾಯುಪಚಾರದ ಬೊಗಳೆ'

ಸಂದರ್ಶನದಲ್ಲಿ ಖ್ಯಾತ ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್



ಬಿಜೆಪಿಯಲ್ಲೀಗ ಮರು ಬಂಡಾಯ

ಯಾವ ಟೀವಿ ಯಾರ ಕೈಗೆ ? ಯಾವ ಪೇಪರ್ ಯಾರ ಮುಡಿಗೆ ?

ವಿದ್ಯಾರ್ಥಿನಿಯರ ರಾಜ್ಯಮಟ್ಟದ ಸಮಾವೇಶ

ಅಡ್ಡಗೋಡೆಗಳನ್ನೊಡೆದು ಸಮಾನತೆಯ ಸಮಾಜ ಕಟ್ಟಬೇಕಿದೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವದ ಸಂದರ್ಭದಲ್ಲಿಯೂ ಇಂದಿಗೂ ಸಹ ಸಮಾಜದಲ್ಲಿ ಮಹಿಳೆಯರು ಅದರಲ್ಲಿಯೂ ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾರ್ಥಿನಿಯರು ಅನುಭವಿಸುತ್ತಿರುವ ಶೋಷಣೆ, ದಬ್ಬಾಳಿಕೆ, ಅಸಮಾನತೆಗಳನ್ನು ವಿರೋಧಿಸಿ ಸಮಾನತೆಯ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ವಿದ್ಯಾರ್ಥಿನಿಯರ 5ನೇ ರಾಜ್ಯ ಸಮಾವೇಶವನ್ನು 05, 06 ಮಾರ್ಚ್ 2010 ಎರಡು ದಿನಗಳ ಕಾಲ ಹಾಸನದಲ್ಲಿ ನಡೆಸಲಾಯಿತು. ಈ ಕುರಿತು ಒಂದು ವರದಿ.

ವರದಿ : ಸೌಮ್ಯ

ವಿದ್ಯಾರ್ಥಿನಿಯರ 5ನೇ ರಾಜ್ಯ ಸಮಾವೇಶವನ್ನು ಸಮಾವೇಶವನ್ನು ಉದ್ಘಾಟಿಸಿ ಡಾ|| ಬಿ.ಟಿ. ಲಲಿತಾ ನಾಯ್ಕ ರವರು ಮಾತನಾಡುತ್ತಾ ಜಾಗತೀಕರಣದ ಪ್ರಭಾವದಿಂದ ಶಿಕ್ಷಣ ಖಾಸಗೀಕರಣಗೊಳ್ಳುತ್ತಿದ್ದು. ಬಡ, ಮಧ್ಯಮ ವರ್ಗದ ಜನತೆಗೆ ಶಿಕ್ಷಣ ಕೈಗೆಟುಕದಂತಾಗಿದೆ. ಅದರಲ್ಲಿ ಶತ ಶತಮಾನಗಳಿಂದ ಶೋಷಣೆಯ ಸುಳಿಗೆ ಸಿಕ್ಕ ಹೆಣ್ಣು ಮಕ್ಕಳು ಇಂದಿಗೂ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸಮಾನತೆ, ಸ್ವಾತಂತ್ರ, ಸಮಾಜವಾದದ ಹಿನ್ನೆಲೆಯಲ್ಲಿ ಜಾತಿ, ಲಿಂಗ ಬೇಧವನ್ನು ಹೋಗಲಾಡಿಸಿ ಶಿಕ್ಷಣ ಸಾರ್ವತ್ರೀಕರಣವಾದಾಗ ಮಾತ್ರ ಶಿಕ್ಷಣಕ್ಕೊಂದು ಅರ್ಥ ಬರುತ್ತದೆ. ಇಂದು ಹೆಣ್ಣು ಮಕ್ಕಳು ತಮ್ಮ ಶೋಷಣೆಯ ಗೋಡೆಗಳನ್ನೊಡೆದು ಸಮಾನತೆಯ ಸಮಾಜಕ್ಕಾಗಿ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ, ಸ್ವಾವಾಲಂಬನೆಯ ಬದುಕಿಗಾಗಿ ಸಂಘಟಿತ ಹೋರಾಟವನ್ನು ಮಾಡಬೇಕಾಗಿದೆ ಎಂದು ಕರೆ ನೀಡಿದರು.

ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಸಾಹಿತಿಗಳು ಹಾಗೂ ವಕೀಲರೂ ಆದ ಭಾನು ಮುಷ್ತಾಕ್‌ರವರು ಮಾತನಾಡುತ್ತಾ, ಇಂದು ಮಹಿಳೆಯರು ಅನೇಕ ದೌರ್ಜನ್ಯಗಳಿಗೆ ಒಳಗಾಗಿ ಶೋಷಣೆಗೆ ಗುರಿಯಾಗಿದ್ದಾಳೆ. ಹಾಗಾಗಿ ಮಹಿಳಾ ಪರವಾದ ಕಾನೂನುಗಳು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಿದೆ ಎಂದರು.

ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಾದ ಡಾ|| ಆರ್.ಎನ್. ರಂಗಲಕ್ಷ್ಮಿ ಇವರು ಮಾತನಾಡುತ್ತಾ, ಹೆಣ್ಣನ್ನು ತಾಯಿಯಾಗಿ, ಹೆಂಡತಿಯಾಗಿ ಸ್ವೀಕರಿಸುವ ಈ ಸಮಾಜ ಮಗಳಾಗಿ ಏಕೆ ಬೇಡ ಎನ್ನುತ್ತದೆ ಎಂದು ವಿಮರ್ಶಿಸಿದರು.

ಮತ್ತೊಬ್ಬ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಹೆಣ್ಣು ಭ್ರೂಣ ಹತ್ಯೆ ಮತ್ತು ಮಹಿಳೆಯರ ಪರಾವಲಂಬಿ ಬದುಕು ಹಾಗೂ ಶೋಷಣೆಗೆ ಆಸ್ತಿಯ ಮೇಲಿನ ಹಕ್ಕನ್ನು ಮಹಿಳೆಗೆ ನಿರಾಕರಿಸುತ್ತಿರುವುದೇ ಮೂಲ ಕಾರಣವಾಗಿದೆ. ಮಹಿಳೆಯ ಶೋಷಣೆ ಹಾಗೂ ಅವರ ಸಮಸ್ಯೆಗಳ ನಿವಾರಣೆಗೆ ಉತ್ತಮ ಶಿಕ್ಷಣ ಹಾಗೂ ಮಹಿಳೆ ತಾನು ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಅವಶ್ಯಕತೆಯಿದೆ. ಇಂತಹ ಪರಿಸ್ಥಿತಿ ನಿರ್ಮಾಣವಾಗಬೇಕಾದರೆ ಪುರಾತನ ಪಾಳೇಗಾರಿಕೆ ಮೌಲ್ಯಗಳ ವಿರುದ್ಧ ಮಹಿಳಾ ಪರ ಸಂಘಟಿತ ಹೋರಾಟದಿಂದ ಮಾತ್ರ ಸಾಧ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಹೆಚ್.ಆರ್. ನವೀನ್ ಕುಮಾರ್ ವಹಿಸಿದ್ದರು. ವೇದಿಕೆಯ ಮೇಲೆ ವಿದ್ಯಾರ್ಥಿನಿಯರ ಉಪಸಮಿತಿ ರಾಜ್ಯ ಸಂಚಾಲಕರಾದ ಸೌಮ್ಯ, ಲೇಖಕರಾದ ರೂಪಾ ಹಾಸನ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಅನಂತ್ ನಾಯ್ಕ್, ಕ್ರಿಯಾ ಪ್ರಕಾಶನದ ವ್ಯವಸ್ಥಾಪಕರಾದ ಚಂದ್ರಶೇಖರ್.ಜಿ. ಉಪಸ್ಥಿತರಿದ್ದರು. ಎಸ್.ಎಫ್.ಐ. ಮುಖಂಡರಾದ ದಿವ್ಯಾ ಸ್ವಾಗತಿಸಿದರು. ಪೃಥ್ವಿ.ಎಂ.ಜಿ. ನಿರೂಪಿಸಿದರು. ವಾಸುದೇವ ವಂದಿಸಿದರು.

ಕ್ರಿಯಾ ಪ್ರಕಾಶನ ಪ್ರಕಟಿಸಿರುವ ಪಾರ್ವತಿ ಮೆನನ್ ರಚಿಸಿಸುವ 'ಅಡ್ಡಗೋಡೆಗಳನ್ನೊಡೆದು ಮುನ್ನಡೆದ 12 ಜನ ಮಹಿಳೆಯರ ಕಥೆಗಳು' ಎನ್ನುವ ಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು.

ಉದ್ಘಾಟನಾ ಸಮಾರಂಭಕ್ಕಿಂತ ಮೊದಲು ಸರ್ಕಾರಿ ಮಹಿಳಾ ಕಾಲೇಜಿನಿಂದ ವಿದ್ಯಾರ್ಥಿನಿಯರ ಆಕರ್ಷಕ ಮೆರವಣಿಗೆ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಮಾವೇಶಗೊಂಡಿತು.

ಸಾಮಾಜಿಕ ಕಟ್ಟುಪಾಡುಗಳು ಮತ್ತು ಮಹಿಳೆ ಎಂಬ ಗೋಷ್ಠಿಯಲ್ಲಿ ಗುಲ್ಬರ್ಗಾದ ಪ್ರಾಧ್ಯಾಪಕರಾದ ಡಾ|| ಮೀನಾಕ್ಷಿ ಬಾಳಿರವರು ವಿಷಯ ಮಂಡಿಸಿದರು.



ಸಮಾವೇಶಕ್ಕೆ ಮುನ್ನ ವಿದ್ಯಾರ್ಥಿನಿಯರ ಮುನ್ನಡೆ - ಮೆರವಣಿಗೆ

ಯುವತಿಯರ ಪರಿಸ್ಥಿತಿ ಮತ್ತು ಸವಾಲುಗಳು ಎಂಬ ವಿಷಯ ಮಂಡನೆಯನ್ನು ಜೆ.ಎಂ.ಎಸ್., ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ವಿಮಲಾ ರವರು ಮಾಡಿದರು.

ಸಮಾವೇಶದಲ್ಲಿ ಕರಡು ವರದಿಯನ್ನು ವಿದ್ಯಾರ್ಥಿನಿಯರ ಉಪಸಮಿತಿ ರಾಜ್ಯ ಸಂಚಾಲಕರಾದ ಸೌಮ್ಯರವರು ಮಂಡಿಸಿದರು. 13 ಜಿಲ್ಲೆಗಳಿಂದ ಭಾಗವಹಿಸಿದ್ದ ಪ್ರತಿನಿಧಿಗಳು ವರದಿ ಮೇಲೆ ಚರ್ಚಿಸಿದರು. ಪ್ರತಿನಿಧಿಗಳ ಅಭಿಪ್ರಾಯದ ಆಧಾರದಲ್ಲಿ ವರದಿಯನ್ನು ಸಮಾವೇಶ ಅಂಗೀಕರಿಸಿತು.

ಸಂಘಟಿತ ನೆಲೆಯಲ್ಲಿ ಸಮಾನತೆಗಾಗಿ ಹೋರಾಡಬೇಕಿದೆ

ನಮ್ಮ ಸಮಾಜದಲ್ಲಿರುವ ಪುರುಷ ಪ್ರಧಾನ ಮೌಲ್ಯಗಳ ವಿರುದ್ಧ, ಮಹಿಳಾ ಶೋಷಣೆ ವಿರುದ್ಧ, ಸಮಾನ ಅವಕಾಶಗಳಿಗಾಗಿ ಮಹಿಳೆಯರು, ವಿದ್ಯಾರ್ಥಿನಿಯರು ಸಂಘಟಿತ ನೆಲೆಯಲ್ಲಿ ಹೋರಾಟ ನಡೆಸಬೇಕಿದೆ ಎಂದು ಸಾಹಿತಿ ರೂಪ ಹಾಸನ ಕರೆನೀಡಿದರು.

ರಾಜ್ಯಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಪ್ರಸ್ತುತ ಸಂದರ್ಭದಲ್ಲಿ ನೀಡುತ್ತಿರುವ ಶಿಕ್ಷಣದಲ್ಲಿ ಪಾಳೇಗಾರಿ, ಪುರುಷ ಪ್ರಧಾನ ವ್ಯವಸ್ಥೆಯ ಕೊಳಕು ಮೌಲ್ಯಗಳು, ಮಹಿಳೆ ಪುರುಷರಿಗೆ ಅಧೀನವಾಗಿರಬೇಕು, ಅವಲಂಭಿಯಾಗಿರಬೇಕೆನ್ನುವ ವಿಚಾರಗಳನ್ನೆ ಕಲಿಸಲಾಗುತ್ತಿದೆ. ಸತಿಪದ್ಧತಿ, ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ, ಮಹಿಳೆಯರು ಶೌರ್ಯವಂತರ ಸ್ವತ್ತು ಎಂದು ಬೋಧಿಸುತ್ತಿದ್ದ ಮನುಸ್ಮೃತಿ ಸಿದ್ಧಾಂತ ಜೀವವಿರೋಧಿಯಾಗಿದೆ ಎಂದು ಗೊತ್ತಿದ್ದರೂ ಅದನ್ನೇ ಬೇರೆ ರೀತಿಯಲ್ಲಿ ಪಠ್ಯಪುಸ್ತಕಗಳಲ್ಲಿ ಹೇಳಲಾಗುತ್ತಿದೆ. ವೈಚಾರಿಕ, ವೈಜ್ಞಾನಿಕತೆಗೆ ತೆರೆದುಕೊಳ್ಳದ ಧರ್ಮ ಸಿದ್ಧಾಂತ ಪ್ರಗತಿ ವಿರೋಧಿಯಾಗುತ್ತವೆ. ಅಂತಹ ನಿಲುವುಗಳನ್ನು ಹಿಮ್ಮೆಟ್ಟಿಸಬೇಕು ಎಂದರು.

ಮನೋರಂಜನೆ ಮತ್ತು ಜಾಹಿರಾತುಗಳ ಮೂಲಕ ಸಮೂಹ ಮಾಧ್ಯಮಗಳು ಮಹಿಳೆಯರ ಮತ್ತು ಯುವತಿಯರ ದೇಹವನ್ನು ಪ್ರದರ್ಶಿಸಿ ಸೌಂದರ್ಯವನ್ನು ಮಾರಾಟದ ಸರಕನ್ನಾಗಿಸಿ ಲಾಭ ಮಾಡಿ ಕೊಳ್ಳುತ್ತಿರುವ ಕಂಪನಿಗಳು ಯುವತಿಯರನ್ನು ಶೋಷಿಸುತ್ತಿವೆ. ಶಿಕ್ಷಣ, ಉದ್ಯೋಗ ಹಾಗು ಸಮಾನತೆಗಾಗಿ ಮಹಿಳಾ ಶೋಷಣೆ ವಿರುದ್ಧ ಎಲ್ಲರೂ ಸಂಘಟಿತರಾಗಿ ಹೋರಾಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್ ಮಾತನಾಡಿದರು.

ಎಸ್.ಎಫ್.ಐ ರಾಜ್ಯ ಅಧ್ಯಕ್ಷರಾದ ನವೀನ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಅಖಿಲ ಕರ್ನಾಟಕ ಸರ್ಕಾರಿ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ಬಿ.ಜೆ.ಚಂದ್ರು, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಅನಂತನಾಯ್ಕ್ ,ಎಸ್.ಎಫ್.ಐ ವಿದ್ಯಾರ್ಥಿನಿಯರ ಉಪಸಮಿತಿ ರಾಜ್ಯ ಸಂಚಾಲಕಿ ಸೌಮ್ಯ, ಡಿವೈಎಫ್ ಐ ಜಿಲ್ಲಾ ಕಾರ್ಯದರ್ಶಿ ಶಾವಲ್ ಹಮೀದ್, ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಅಹಮದ್, ಎಸ್.ಎಫ್.ಐ. ಜಿಲ್ಲಾಧ್ಯಕ್ಷ ಪೃಥ್ವಿ ವೇದಿಕೆಯಲ್ಲಿದ್ದರು, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ವಾಸುದೇವ್ ನಿರೂಪಿಸಿದರು. ದಿವ್ಯ ಎ.ಎಲ್. ವಂದಿಸಿದರು.

ಸಮಾವೇಶ ಕೈಗೊಂಡ ನಿರ್ಣಯಗಳು

- ರಾಜ್ಯಾದ್ಯಂತ ಶಿಕ್ಷಣ- ಉದ್ಯೋಗ- ಸ್ವಾವಲಂಬಿ ಬದುಕಿಗಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವ ಕಾರ್ಯಕ್ರಮಗಳನ್ನು ನಡೆಸಲು ಸಮಾವೇಶದಲ್ಲಿ ನಿರ್ಣಯಿಸಲಾಯಿತು.
- ಸುಪ್ರಿಂ ಕೋರ್ಟ್ ನಿರ್ದೇಶನದಂತೆ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ಎಲ್ಲಾ ಶಾಲಾ, ಕಾಲೇಜುಗಳಲ್ಲಿ ರಚಿಸಲು ಒತ್ತಾಯಿಸಲಾಯಿತು.
- ಪದವಿ ಹಂತದವರೆಗೆ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡಬೇಕು ಮತ್ತು ಶುಲ್ಕ ಏರಿಕೆಯನ್ನು ಕೈ ಬಿಡಬೇಕು.
- ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿನಿಯರಿಗೆ ಹಾಸ್ಟೇಲ್ ಸೌಲಭ್ಯವನ್ನು ನೀಡಬೇಕು, ಹಾಸ್ಟೇಲ್‌ಗಳಿಗೆ ಮೂಲ ಸೌಕರ್ಯಗಳನ್ನು ನೀಡಬೇಕು.
- ಲೋಕಸಭೆಯಲ್ಲಿ ಶೇ 33 ರಷ್ಟು ಮಹಿಳಾ ಪ್ರಾತಿನಿಧ್ಯ ನೀಡಬೇಕು.

ವಿದ್ಯಾರ್ಥಿನಿಯರ ರಾಜ್ಯ ಉಪಸಮಿತಿ ಆಯ್ಕೆ

ಸಂಚಾಲಕರು- ಸೌಮ್ಯ,
ಸಹಸಂಚಾಲಕರು-ರೇಖಾ (ರಾಯಚೂರು),
ಜ್ಯೋತಿ (ದಾರವಾಡ),
ರೇಣುಕಾ (ಹಾವೇರಿ),
ದಿವ್ಯಾ (ಹಾಸನ)
ಇವರನ್ನೊಳಗೊಂಡ ಒಟ್ಟಾರೆ 22 ಜನ ಸದಸ್ಯರ ಉಪಸಮಿತಿಯನ್ನು ಸಮಾವೇಶ ಚುನಾಯಿಸಿತು.

ಸಂಪಾದಕೀಯ

ಕನ್ನಡ ಹೆಸರಿನಲ್ಲೊಂದು ರಾಜಕೀಯ ಜಾತ್ರೆ

ಮೂರು ದಿನಗಳ ವಿಶ್ವಕನ್ನಡ ಸಮ್ಮೇಳನ (ಮಾರ್ಚ್ 11 ರಿಂದ 13) ಬೆಳಗಾಂನಲ್ಲಿ ಅದ್ದೂರಿಯಾಗಿಯೇ ಸಮಾರೋಪಗೊಂಡಿದೆ. ಈ ಸಮ್ಮೇಳನಕ್ಕೆ ನಾಡಿನ ಜನತೆಯಿಂದ ದೊರೆತ ಅಪೂರ್ವ ಸ್ಪಂದನವು ನಾಡು, ನುಡಿ, ಸಂಸ್ಕೃತಿ ಬಗೆಗಿನ ಭಾವನಾತ್ಮಕ ಸಂಬಂಧವನ್ನು, ಅಭಿಮಾನವನ್ನು ತೋರಿಸುತ್ತದೆ. ಅಷ್ಟು ಮಾತ್ರವಲ್ಲ ಇಂತಹ 'ವಿಶ್ವ' ಮೇಳಗಳಲ್ಲಿ ಬದುಕು ಭವಿಷ್ಯದ ಕುರಿತಂತೆ ಕನಿಷ್ಟ ಕಾಳಜಿಯಿರಬೇಕೆಂಬ ಅಪಾರ ನಿರೀಕ್ಷೆ ಜನರಿಗಿರುವುದನ್ನು ಪ್ರತಿಧ್ವನಿಸಿದೆ. ಈ ನೆಲೆಯಲ್ಲಿಯೇ ಸಮ್ಮೇಳನದ ಯಶಸ್ಸು, ವೈಫಲ್ಯಗಳನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ.

26 ವರ್ಷಗಳ ನಂತರ (1985) ನಡೆದ ಈ ವಿಶ್ವಕನ್ನಡ ಸಮ್ಮೇಳನದಲ್ಲಿ ಸಾವಿರಾರು ಕಲಾವಿದರು, ಚಿಂತಕರು, ನಾಡಿನ ಪ್ರಗತಿಗೆ ಕೊಡುಗೆ ನೀಡಿದ ಹಲವರು ಭಾಗವಹಿಸಿ ಅರ್ಥವಂತಿಕೆ ತಂದಿರುವುದು ನಿಜ. ಸುಮಾರು 20 ಕ್ಕೂ ಹೆಚ್ಚು ವಿಚಾರಗೋಷ್ಠಿಗಳು ನಡೆದಿವೆ. ಚಿಂತನ ಮಂಥನಗಳಾಗಿವೆ. ಲಕ್ಷಾಂತರ ಜನರೂ ಭಾಗವಹಿಸಿದ್ದಾರೆ. ಆದರೆ ಈ ಎಲ್ಲಾ ಕಲಾಪಗಳಲ್ಲಿ ಹೊರಹೊಮ್ಮಿದ ಸತ್ವವೇನು? ಇಡೀ ಸಮ್ಮೇಳನ ಇಂದು ಕನ್ನಡ, ಕರ್ನಾಟಕ, ಜನತೆ ಎದುರಿಸುವ ಗಂಭೀರ ಸವಾಲುಗಳೇನು? ಅವುಗಳನ್ನು ಎದುರಿಸುವ ಬಗೆಯೆಂತು? ಪ್ರಾಂತ್ಯ, ದೇಶ ಹಾಗೂ ವಿಶ್ವವ್ಯಾಪ್ತಿಯಲ್ಲಿ ಸರ್ಕಾರ, ಜನತೆ ವಿವಿಧ ಸಮುದಾಯಗಳ ಕೊಡುಗೆ ಏನೇನು? ಎನ್ನುವಂತಹ ಪ್ರಶ್ನೆಗಳನ್ನು ಎತ್ತುವಲ್ಲಿ ಪರಿಹಾರ ಸೂಚಿಸುವ ಕಾಳಜಿಯ ಸಂದೇಶವನ್ನಾದರೂ ಹೊರಡಿಸುವಲ್ಲಿ ಈ ಸಮ್ಮೇಳನ ವಿಫಲವಾಗಿದೆ.

ಸಮ್ಮೇಳನ ಉದ್ಘಾಟಿಸಿದ ವಿವಾದಗಳ ಕೇಂದ್ರ ನಾರಾಯಣಮೂರ್ತಿಯವರ ಭಾಷಣ ಸಾರ, ಕನ್ನಡ ಉಚ್ಚಾರ ಕೇಶವ ಶಿಲ್ಪಕ್ಕೇ ಪ್ರೀತಿ, ಜನರನ್ನು ಸೆಳೆದುಕೊಂಡಿದ್ದ ಐಶ್ವರ್ಯ ರೈ ಮಾತು ಆಡಿದರೆ ಮುತ್ತು ಉದುರಿತೇನೋ ಎಂಬಂತಹ ಚೌಕಾಶಿತನ, ನಿಷ್ಕಾಳಜಿ, ಅನಿವಾಸಿ ಕನ್ನಡಿಗರ ಭಾಷಾಪ್ರೇಮ ಬಂಡವಾಳ ಹೂಡಿಕೆಯ ಪ್ರೀತಿ, ಮುಖ್ಯಮಂತ್ರಿ ಇತರೆ ಸಚಿವ, ಸ್ವಯಂ ಸೇವಕರ ಮೆರೆದಾಟ, ಕಲಾವಿದರ ಪರದಾಟಗಳು.... ಗಮನ ಸೆಳೆದ ಸಂಗತಿಗಳಷ್ಟೆ.

ಗೋಷ್ಠಿ, ಗಣ್ಯರ ಭಾಷಣಗಳಲ್ಲಿ ಅಭಿವೃದ್ಧಿಯ ಮಾತುಗಳೇನೋ ಕೇಳಿಬಂದರೂ ಅದರ ಸ್ವರೂಪ ಮುಖ್ಯವಾಗಿ ಕರ್ನಾಟಕ ಜನತೆಯ ಬದುಕು ಕೇಂದ್ರಿತ ಅಭಿವ್ಯಕ್ತಿಯಾಗಲಿಲ್ಲ. ಈಗಲೂ ಕರ್ನಾಟಕದ ಕೃಷಿ ದಿಕ್ಕೆಟ್ಟು ದಿವಾಳಿಯೆದ್ದು ಹೋಗಿದೆ. ನಿತ್ಯವೂ ರೈತರ ಆತ್ಮಹತ್ಯೆ ಸರಣಿಯೇ ಅದರ ಮಾನದಂಡ. ಇನ್ನು ಉತ್ಪಾದನೆ ಆಧರಿತವಾದ ಕೈಗಾರಿಕಾ ಬೆಳವಣಿಗೆ ಸ್ಥಗಿತವಾಗಿದೆ, ಹಿನ್ನಡೆಯಲ್ಲಿದೆ. ವಿಶ್ವದ ನಕಾಶೆಯಲ್ಲಿ ಖ್ಯಾತಿ ತಂದಿತ್ತ ಸಾರ್ವಜನಿಕ ವಲಯದ ಮೂಲಭೂತ ಉದ್ದಿಮೆಗಳು ಮಣ್ಣುಪಾಲಾಗುತ್ತಿವೆ. ಈ ಬೆಳವಣಿಗೆಗಳೇ ಕರ್ನಾಟಕದಲ್ಲಿ ಉದ್ಯೋಗ ನಾಶಕ್ಕೆ, ವಲಸೆ, ಅತಂತ್ರ ದಯನೀಯ ಬದುಕು ದಯಪಾಲಿಸಲು ಕಾರಣವಾಗಿದೆ. ಐ.ಟಿ., ಬಿ.ಟಿ.ಯಂತಹ ಕೆಲವು ಸೇವಾ ವಲಯಗಳಲ್ಲಿ ಒಂದಿಷ್ಟು ಉದ್ಯೋಗ ಹೆಚ್ಚಿನ ಸಂಬಳವೆಂದು ಸೃಷ್ಟಿಯಾದರೂ ಅದೇನಿದ್ದರೂ ನೀರ ಮೇಲಣ ಗುಳ್ಳೆ, ಜಾಗತೀಕರಣದ ಪರಿಣಾಮವಾಗಿ ಕನ್ನಡ ಭಾಷೆ, ಸಂಸ್ಕೃತಿಗೆ ಒದಗಿರುವ ಆಪತ್ತು. ಬೆದರಿಕೆಗಳನ್ನು ಗಮನಿಸದಿರಲು ಸಾಧ್ಯವೇ? ಶಿಕ್ಷಣದ ವ್ಯಾಪಾರೀಕರಣ, ಸಾರ್ವತ್ರೀಕರಣಗೊಳ್ಳದೇ ಇರುವುದರಿಂದಾಗಿ ಶೇ.65 ರಷ್ಟು ಜನತೆ ಅಕ್ಷರ ಕಲಿಕೆಯಿಂದಲೇ ವಂಚಿತರು. ಪರಿಣಾಮ ಅವರ ಸಾಮಾಜಿಕ, ಸಾಂಸ್ಕೃತಿಕ ಅರಿವಿನ ವಿಸ್ತರಣೆಯನ್ನೇ ಅದು ನಿರ್ಬಂಧಿಸಿದೆ. ಹೋಗಲಿ, ಅಭಿವೃದ್ಧಿಯ ಬಗೆಗಾಗಲಿ ಇಲ್ಲಿ ಚರ್ಚೆಯಾಯಿತೆ? ಕರ್ನಾಟಕದ ಜನತೆ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಮಸ್ಯೆಗಳ ಬಗ್ಗೆ ಚರ್ಚಿಸದೇ ಹೋದ ಸಮ್ಮೇಳನ ಯಶಸ್ವಿಯಾಗುವುದಾದರೂ ಹೇಗೆ? ಸಾಹಿತ್ಯ ಸಮ್ಮೇಳನಕ್ಕೂ, ವಿಶ್ವಕನ್ನಡ ಸಮ್ಮೇಳನಕ್ಕೂ ವ್ಯತ್ಯಾಸವನ್ನೇ ಸರ್ಕಾರ ಪರಿಗಣಿಸಿಲ್ಲ. ಹೀಗಾಗಿ ಸರ್ಕಾರವು ಸಮ್ಮೇಳನವನ್ನು ಒಂದು ಮನೋರಂಜನಾ ಜಾತ್ರೆಯನ್ನಾಗಿಸಿದೆ.

ಈ ಸಮ್ಮೇಳನವನ್ನು ಆಯೋಜಿಸುವಾಗಲೇ ಸರ್ಕಾರಕ್ಕೆ ಒಂದು ನಿರ್ದಿಷ್ಟಜಾಜೆಂಡಾವಿರುವುದು ಕಾಣುತ್ತದೆ. ಮರಾಠಿ, ಕನ್ನಡ ಭಾಷಿಕರೇ ಅಧಿಕವಿರುವ ಇಲ್ಲಿ ಬಿಜೆಪಿ ತನ್ನ ನೆಲೆಯನ್ನು ಕನ್ನಡ ಭಾಷಿಕರ ನಡುವೆ, ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ಕ್ರೋಢೀಕರಿಸಿಕೊಳ್ಳಲು ಆ ಮೂಲಕ ರಾಜ್ಯದಾದ್ಯಂತ ತಾನು ಕನ್ನಡ ಪರವೆಂದು ಪ್ರಭಾವಿಸಲು ಬಯಸಿತ್ತು.

ಇನ್ನು ಈಗಾಗಲೇ ದುರಾಡಳಿತ, ಹಗರಣ, ಭಾರೀ ಭ್ರಷ್ಟಾಚಾರ,ಒಳಜಗಳಗಳಿಂದ ತತ್ತರಿಸುತ್ತಿರುವ, ಬಿಜೆಪಿಯು ನೆಲಕಚ್ಚಿರುವ ತನ್ನ ಸರ್ಕಾರದ ಮಾನಗೇಡಿ ಮುಖವನ್ನು ಉಳಿಸಿಕೊಳ್ಳಲು ಜನರ ಗಮನ ಅಬ್ಬರದಲ್ಲಿ ಕಳೆದುಹೋಗುವಂತೆ ಮಾಡುವ ರಾಜಕೀಯ ಕಾರ್ಯಸೂಚಿಯಿಂದಲೇ ಈ ಸಮ್ಮೇಳಣ ಆಯೋಜಿತವಾಗಿತ್ತು. ಈ ಸಮ್ಮೇಳನದ ಸರ್ವ ನಿಯಂತ್ರಣ 'ಸಂಘ'ದ ಸ್ವಯಂ ಸೇವಕರಿಂದಲೇ ನಡೆದಿತ್ತು. ಈ ಅರ್ಥದಲ್ಲಿ ಸದ್ಯಕ್ಕೆ ಬಿಜೆಪಿಗೆ ಒಂದಿಷ್ಟು ಲಾಭ ಸಿಕ್ಕಿದೆ ಕೂಡ. ಆದರೆ ಬದುಕಿನ ಕ್ರೂರ ವಾಸ್ತವದೆದುರು ಇದೆಲ್ಲಾ ಬಯಲಾಗಲಿದೆ ಎಂಬುದೂ ಸತ್ಯ.


ಈ ಸಮ್ಮೇಳನದ 'ಯಶಸ್ಸಿ'ನಿಂದ ಉತ್ತೇಜಿತರಾದ ಮುಖ್ಯಮಂತ್ರಿ ಯಡಿಯೂರಪ್ಪನವರು 5 ವರ್ಷಗಳಿಗೊಮ್ಮೆ ಇಂತಹ ಸಮ್ಮೇಳನ ನಡೆಸುವುದಾಗಿಯೂ ಇದರ ನೆನಪಲ್ಲಿ ಲಾಲ್‌ಬಾಗ್ ಮಾದರಿ ಉದ್ಯಾನವನ, ಭುವನೇಶ್ವರಿ ಪ್ರತಿ ಸ್ಥಾಪನೆ ಇತ್ಯಾದಿ ಘೋಷಿಸಿರುವುದೂ ಅರ್ಥಹೀನ. ಯಾಕೆಂದರೆ ಅಲ್ಲಿ ಹೊರಬರಬೇಕಿದ್ದ ಘೋಷಣೆ ಕನ್ನಡ, ನಾಡು ನುಡಿಗಳ ಕುರಿತಾಗಿ ಇರಬೇಕಿತ್ತು. 'ಸರ್ಕಾರದ ಕನ್ನಡಪರ ಕಾಳಜಿ ಕೇವಲ ಉತ್ಸವಗಳಲ್ಲಿ ಕೊನೆಗೊಂಡರೆ ಭಾಷೆ, ಸಾಹಿತ್ಯ, ಸಂಸ್ಕೃತಿ ಮುನ್ನಡೆಯಲಾರದು' ಎಂಬ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರ ಮಾತು ಕೇಳಿಸಿಕೊಳ್ಳಲಾದರೂ ಈ ಸರ್ಕಾರ ಸಿದ್ಧವಿದೆಯೇ? ಇಲ್ಲವೆಂದಾದರೆ ಅಂತಹ ಹಿರಿಯರನ್ನು ಆಹ್ವಾನಿಸಿದ್ದಾದರೂ ಏಕೆ?


ಉಪಚುನಾವಣೆಯ ಮತ್ತೊಂದು ಸರಣಿ

ಕರ್ನಾಟಕದಲ್ಲೀಗ ಉಪ ಚುನಾವಣೆಯ ತಾಲೀಮು. ಬಿಜೆಪಿಯ 'ಆಪರೇಷನ್ ಕಮಲ' ಎಂಬ ಅನೈತಿಕ, ಪಕ್ಷಾಂತರದ ಪ್ರಹಸನದ ಪರಿಣಾಮ ಮತ್ತೆ ಮತ್ತೆ ಚುನಾವಣೆಗಳನ್ನು ಜನತೆ ಕಾಣುವಂತಾಗಿದೆ. ಅದರ ಪರಿಣಾಮ ಈ ಸುತ್ತಿನ ಮತ್ತೊಂದು ಕಂತು. ಜಗಳೂರು, ಚನ್ನಪಟ್ಟಣ, ಬಂಗಾರಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆಗಳು ಏಪ್ರಿಲ್ 9 ರಂದು ಮತದಾನ.

'ಆಪರೇಷನ್ 'ಕಮಲ'ದ ಗುಂಡಿಯಿಂದ

ಹಿಂದೆ 2010 ರ ಅಕ್ಟೋಬರ್ ತಿಂಗಳಲ್ಲಿ ಬಿಜೆಪಿಯೊಳಗೆ ಭುಗಿಲೆದ್ದ ಭಿನ್ನಮತ, ಶಾಸಕರ ಬಂಡಾಯದ ಸಂದರ್ಭದಲ್ಲಿ 16 ಶಾಸಕರು ಬಿಜೆಪಿಗೆ ಬೆಂಬಲವಿಲ್ಲವೆಂದು ರಾಜ್ಯಪಾಲರಿಗೆ ಪತ್ರ ನೀಡಿದ್ದರು. 5 ಪಕ್ಷೇತರರು ಬೆಂಬಲ ವಾಪಾಸು ಪಡೆದಿದ್ದರಿಂದ ಬಿಜೆಪಿಯ ಬಲ ಕುಸಿದು ರಾಜೀನಾಮೆ ಸಲ್ಲಿಸಬೇಕಾದ ಒಂದು ಸಂದರ್ಭವೂ ಉದ್ಭವಿಸಿತ್ತು. ಈ ಹೊತ್ತಿನಲ್ಲೇ ಬಿಜೆಪಿಯು ಒಂದು ಪ್ರತಿತಂತ್ರವಾಗಿ ವಿರೋಧಪಕ್ಷಗಳ ಬಲ ಶಾಸನಸಭೆಯಲ್ಲಿ ಕುಸಿಯುವಂತೆ ಮಾಡಲು ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಶಾಸಕರಿಗೆ ಗಾಳಹಾಕಿತ್ತು. ಅಧಿಕಾರ, ಹಣದ ಆಮಿಷವೊಡ್ಡಿ 'ಆಪರೇಷನ್ ಕಮಲ'ವೆಂಬ ಪಕ್ಷಾಂತರದ ಮಲಗುಂಡಿಗೆ ಅವರನ್ನು ಬೀಳಿಸಿಕೊಂಡಿತ್ತು. ತಾನೊಬ್ಬ ನಿಷ್ಠಾವಂತನೆಂದೇ ಹೇಳುತ್ತಲೇ ಜೆಡಿ(ಎಸ್) ತೊರೆದು ಶಾಸಕತ್ವಕ್ಕೆ ರಾಜೀನಾಮೆ ನೀಡಿದ ಚನ್ನಪಟ್ಟಣದ ಶಾಸಕ ಎಂ.ಎಸ್. ಅಶ್ವತ್, ಬಂಗಾರಪೇಟೆಯ ಕಾಂಗ್ರೆಸ್ ಶಾಸಕ ಎಂ.ನಾರಾಯಣಸ್ವಾಮಿ, ಮತ್ತು ಜಗಳೂರಿನ ಎಸ್.ವಿ.ರಾಮಚಂದ್ರರವರು ಬಿಜೆಪಿಗೆ ಸೇರಿದ್ದರು. ಹಲವು ಸುತ್ತಿನ ವ್ಯವಹಾರಗಳ ಬಳಿಕ ತೆರವಾದ ಈ ಸ್ಥಾನಗಳಿಗೆ ಈಗ ಮತ್ತೆ ಮತದಾನ.





ಇದೀಗ ಜನತೆಯ ವಿಶ್ವಾಸಕ್ಕೆ ದ್ರೋಹ ಬಗೆದು ಜನದ್ರೋಹಿ, ಲೂಟಿಕೋರ, ಕೋಮುವಾದಿ ಬಿಜೆಪಿಯನ್ನು ಬಲಗೊಳಿಸಲು ಮುಂದಾಗಿರುವ ಈ ವಂಚಕರನ್ನು ಏನು ಮಾಡಬೇಕು?. ಹೀಗಿದೆ ಜನರ ಮುಂದೆ ಗಂಭೀರ ರಾಜಕೀಯ ಸವಾಲು ಒಂದೆಡೆ ಪೀಡಕ ಬಿಜೆಪಿ ಮತ್ತೊಂದೆಡೆ ದೇಶವನ್ನು, ಜನತೆಯ ಮೇಲೆ ಸಂಕಷ್ಟಗಳ ಹೊರೆಯನ್ನು ಹೇರುತ್ತಿರುವ ಜನವಿರೋಧಿ, ಭ್ರಷ್ಟ ಕಾಂಗ್ರೆಸ್, ಈ ಎರಡೂ ರಾಜಕೀಯ ಪಕ್ಷಗಳನ್ನು ಸೋಲಿಸಬೇಕಾದ ಸವಾಲು ಎಲ್ಲರೆದುರಲ್ಲಿ ನಿಚ್ಚಳ, ಅಂದರೆ ಪರ್ಯಾಯವೇನು? ಈಗಂತೂ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಮತ್ತಿತರರು ಬಿರುಸಿನಲ್ಲಿದ್ದಾರೆ!

ಎತ್ತ, ಏನು?

ಹೀಗಿರುವಾಗಲೇ ಈ ಕ್ಷೇತ್ರಗಳಲ್ಲಿ ಯಾರು, ಎಲ್ಲಿ ಎತ್ತ ಎಂಬ ಚಿತ್ರಣ ಸ್ಪಷ್ಟವಾಗಬೇಕಿದೆ. ಹಾಗೆಯೇ ವಿವಿಧ ಪಕ್ಷಗಳ, ಶಕ್ತಿಗಳ ಬಲಾಬಲ, ಹಣಾಹಣಿ, ಆ ನಂತರವೇ ಯಾರನ್ನು ಬೆಂಬಲಿಸಬೇಕು ಎಂಬ ತೀರ್ಮಾನ ಸಾಧ್ಯ.

ಈಗಾಗಲೇ ಚುನಾವಣಾ ಪ್ರಕ್ರಿಯೆ ಆರಂಭಗೊಂಡಿವೆ. ನಾಮಪತ್ರ ಸಲ್ಲಿಕೆಗೂ ಚಾಲನೆ ಬಂದಿದೆ. ಜನರ ಮತ ಯಾರಿಗೆ? ಮುಂದಿನ ವಾರ ನಿರ್ಧರಿಸೋಣ.

* * *

ಮತ್ತೆ ಬಂಡಾಯದ ಬಿಸಿ

'ಯಡಿಯೂರಪ್ಪ ಭ್ರಷ್ಟ, ಭ್ರಷ್ಟಾಚಾರ ನಿಲ್ಲಿಸಿಲ್ಲ.'

'ಯಡಿಯೂರಪ್ಪ ಸ್ವಜನ ಪಕ್ಷಪಾತಿ'

'ಯಡಿಯೂರಪ್ಪ ಸರ್ವಾಧಿಕಾರಿ'

'ಯಡಿಯೂರಪ್ಪ ದುಂಡಾವರ್ತನೆ ಮಾಡುತ್ತಿದ್ದಾರೆ.'

'ಎಣೆಯಿಲ್ಲದ ಭೂಹಗರಣಗಳು
ಆದರೂ ಕೇಂದ್ರ ವರಿಷ್ಠರು ಮೌನ!'

'ಈ ಮೌನದಿಂದಾಗಿಯೇ, ವರಿಷ್ಟರೂ ಇದರಲ್ಲಿ ಪಾಲು ಪಡೆದಿದ್ದಾರೆ, ಆದ್ದರಿಂದಲೇ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ, ಎಂಬುದು ಜನರ ಆರೋಪ, ಹೀಗಾಗಿ ಪಕ್ಷಕ್ಕೆ, ಸರಕಾರಕ್ಕೆ ಯಡಿಯೂರಪ್ಪನವರಿಂದ ಕೆಟ್ಟ ಹೆಸರು....'

ಮತ್ತೊಂದು ಪ್ರಹಾರ

ಈ ಮಾತುಗಳ ಪ್ರವಾಹ ವಿರೋಧ ಪಕ್ಷದವರದ್ದಲ್ಲ. ಅಧಿಕಾರರೂಢ, ಶಿಸ್ತಿನ, ತತ್ವನಿಷ್ಠ ಬಿಜೆಪಿ ಪಕ್ಷದ ಶಾಸಕರು, ಸಚಿವರುಗಳೇ ಹೀಗೆ ಹೇಳಿದಾಗ ಏನಿರಬಹುದು? ನಿಮ್ಮ ಊಹೆ ಸರಿ! ಇದು ಯಡಿಯೂರಪ್ಪನವರ ವಿರುದ್ಧ ಹೂಡಿದ ಬಂಡಾಯವೇ. ಯಡ್ಡಿ, ತೊಲಗಲೇಬೇಕು. ಹೊಸ ಮುಖ್ಯಮಂತ್ರಿ ಬರಲೇಬೇಕು ಎಂಬುದು ಭಿನ್ನಮತೀಯರ ಆಗ್ರಹ. ಹೀಗಾಗಿಯೇ ಯಡ್ಡಿ ಇನ್ನೇನು ಗಟ್ಟಿಯಾಗಿಬಿಟ್ಟರು ಎಂದುಕೊಳ್ಳುವಾಗಲೇ ಅಭದ್ರತೆಯ ಆತಂಕ, ಭಿನ್ನಮತದ ಕತ್ತಿ ಪ್ರಹಾರ.

ಪುಟ 4 ಕ್ಕೆ

ಜಪಾನ್ ಮೇಲೆರಗಿದ ಅವಳಿ ಧಾಳಿಗಳು

ಭೂಕಂಪನ ಮತ್ತು ಸುನಾಮಿ ಹೊಡೆತ ಪರಮಾಣು ಸ್ಥಾವರಗಳು ಸ್ಫೋಟ

ಜಪಾನ್ ದೇಶಕ್ಕೆ ಅಪ್ಪಳಿಸಿರುವ ತೀವ್ರತರದ ಭೂಕಂಪ ಮತ್ತು ಅದರಿಂದುಂಟಾದ ಸುನಾಮಿ ಹೊಡೆತದಿಂದಾಗಿ ಸೆಂಡಾಲ್, ಇಬರಕಿ ನಗರಗಳ ಲಕ್ಷಾಂತರ ಮನೆ ಮಾಡುಗಳು ನೆಲಸಮಗೊಂಡಿವೆ. ಈ ಭೂಕಂಪನವು ಜಪಾನ್ ದೇಶದ ಭೂಭಾಗದ ಸುಮಾರು 200 ಕಿ.ಮೀ ದೂರದ ಸಾಗರ ಗರ್ಭದಲ್ಲಿ ತನ್ನ ಕೇಂದ್ರ ಹೊಂದಿತ್ತು. ಅದು ಅಲ್ಲಿನ ಪರಮಾಣು ವಿದ್ಯುತ್ ಸ್ಥಾವರಕ್ಕೆ ದೊಡ್ಡ ಹಾನಿಯುಂಟು ಮಾಡಿದೆ. ಜೆಟ್ ವೇಗದಲ್ಲಿ ಬಂದೆರಗಿದ ಸುನಾಮಿಗೆ ಪುಕುಶಿಮಾ ಡೈಚಿ ಎಂಬ ಪರಮಾಣು ವಿದ್ಯುತ್ ಸ್ಥಾವರದಲ್ಲಿ 6 ಸ್ಥಾವರಗಳ ಪೈಕಿ 2 ಸ್ಥಾವರಗಳು ಸಂಪೂರ್ಣ ಜಖಂಗೊಂಡು ಸ್ಫೋಟಗೊಂಡಿವೆ. ಇಂಥಹದೆ ಹಾನಿ ಹತ್ತಿರದಲ್ಲಿಯೇ ಇರುವ ಪುಕುಶಿಮಾ ಡೈನಿ ಎಂಬ ಮತ್ತೊಂದು ಪರಮಾಣು ವಿದ್ಯುತ್ ಸ್ಥಾವರಕ್ಕೂ ಉಂಟಾಗಿರಬಹುದೆಂಬ ಆತಂಕವುಂಟಾಗಿದೆ. ಸುಮಾರು 6 ಲಕ್ಷಕ್ಕೂ ಹೆಚ್ಚು ಜನತೆಯನ್ನು ಪರಮಾಣು ಸ್ಥಾವರ ವಲಯದಿಂದ ದೂರಕ್ಕೆ ಸ್ಥಳಾಂತರಗೊಳಿಸಲಾಗಿದೆ.



ಜಪಾನ್ ತನ್ನ ದೇಶದ ಮೂರನೇ ಒಂದು ಭಾಗ ಇಂಧನಕ್ಕಾಗಿ ಪರಮಾಣು ಶಕ್ತಿಯನ್ನು ಅವಲಂಬಿಸಿದೆ. ಅಲ್ಲಿ ಸುಮಾರು 50 ಪರಮಾಣು ವಿದ್ಯುತ್ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ. ಜಪಾನ್ ದೇಶ ಭೂಭಾಗ ಸಾಮಾನ್ಯವಾಗಿ ಹೆಚ್ಚಿನ ಭೂಕಂಪನಕ್ಕೊಳಗಾಗುವ ನೈಸರ್ಗಿಕ ಗುಣ ಹೊಂದಿದೆ.

ಭೂಕಂಪನ ಮತ್ತು ಸುನಾಮಿ:

ಭೂಮಿಯ ಒಡಲಲ್ಲಿ 70 ರಿಂದ 250 ಕಿ.ಮೀ ಉದ್ದವಿರುವ ಬೃಹತ್ ಉದ್ದನೆಯ ಭೂಭಾಗಗಳು ಪ್ಲೇಟುಗಳಂತೆ ಅಂದರೆ ತಟ್ಟೆಗಳಂತೆ ವರ್ಷಕ್ಕೆ ಅರ್ಧ ಗೇಣಿನಷ್ಟು ಚಲಿಸುತ್ತಿರುತ್ತವೆ. ಇಂತಹ ಭೂಮಿಯೊಡಲಿನ ಪ್ಲೇಟುಗಳು ಭೂಗರ್ಭದಲ್ಲಿ ಇಡೀ ಭೂಭಾಗವನ್ನೆಲ್ಲ ಆವರಿಸಿವೆ. ಇವುಗಳ ಚಲನೆಯಿಂದಾಗುವ ತೀವ್ರ ಏರುಪೇರುಗಳಿಂದ ಭೂಕಂಪನ ಉಂಟಾಗುತ್ತದೆ. ಸಾಗರ ಗರ್ಭದಲ್ಲಿ ಉಂಟಾಗುವ ಭೂಕಂಪನದಿಂದ ಬೃಹತ್ ಸ್ವರೂಪದ ಸಾಗರಲೆಗಳು ಘಂಟೆಗೆ 800 ಕಿ.ಮೀ ವೇಗದಲ್ಲಿ ಚಲಿಸಿ, ಸಮುದ್ರದಂಚಿನ ಪ್ರದೇಶಗಳ ಮೇಲೆ ಸುನಾಮಿಯಾಗಿ ಅಪ್ಪಳಿಸುತ್ತದೆ.

ಯುರೇನಿಯಂ ಎಂಬ ವಿಕಿರಣ ವಸ್ತುವಿನಿಂದ ಶಾಖ:

ಯುರೇನಿಯಂ ಎಂಬ ವಸ್ತುವು ಸದಾ ಶಕ್ತಿಶಾಲಿ ವಿಕಿರಣವನ್ನು ಹೊರಸೂಸುವ ಗುಣವನ್ನು ಪಡೆದಿದೆ. ಯುರೇನಿಯಂ ಮೂಲಧಾತುವಿನಲ್ಲಿ ಅದರ ಪರಮಾಣುಗಳು ಒಂದಕ್ಕೊಂದು ಅಂಟಿಕೊಂಡಂತೆ ಒಂದು ನಿರ್ದಿಷ್ಟ ಆಕಾರದಲ್ಲಿ ಬಂಧಿಸಲ್ಪಟ್ಟಿರುತ್ತವೆ. ಅವುಗಳ ಈ ಬಂಧಕ್ಕೆ ಅಗಾಧ ಶಕ್ತಿಯಿದೆ. ಯುರೇನಿಯಂ ಭಾರ ಪರಮಾಣುವಿನ ಕೇಂದ್ರೀಯ ಭಾಗವಾದ ನ್ಯೂಕ್ಲಿಯಸ್‌ನ್ನು ಎರಡು ಲಘು ಪರಮಾಣುಗಳಾಗಿ ವಿಭಜಿಸಿದಾಗ ಅತೀವ ಪ್ರಮಾಣದ ಶಕ್ತಿಯು ಬಿಡುಗಡೆಯಾಗುತ್ತದೆ. ಇದನ್ನು ಬೈಜಿಕ ವಿದಳನ (ನ್ಯೂಕ್ಲಿಯರ್ ಫಿಜ಼ನ್) ಎಂದು ಕರೆಯುತ್ತಾರೆ. ಯುರೇನಿಯಂನಂಥಹ ವಿಕಿರಣ ವಸ್ತುವನ್ನು ಭೂಮಿಯಿಂದ ಶೋಧಿಸಿ, ಸಂಗ್ರಹಿಸಿ, ಅದರ ಶುದ್ಧ ವಸ್ತುವನ್ನು ಇಂಧನದ ರಾಡುಗಳಾಗಿ ಬಳಸಲಾಗುತ್ತದೆ. ಈ ಯುರೇನಿಯಂ ಇಂಧನದ ರಾಡುಗಳ ಬೈಜಿಕ ವಿದಳನ ಕ್ರಿಯೆಯಲ್ಲಿ ಉಷ್ಣ ಬಿಡುಗಡೆಯಾಗುತ್ತದೆ. ಬೈಜಿಕ ವಿದಳನ ಕ್ರಿಯೆಯನ್ನು ಒಂದು ಬೇಕಾದ ಮಟ್ಟದಲ್ಲಿಯೇ ಇರಿಸಲು ನಿಯಂತ್ರಣ ರಾಡುಗಳನ್ನು ಬಳಸುತ್ತಾರೆ. ಇಷ್ಟೂ ವ್ಯವಸ್ಥೆಯನ್ನು ಒಂದು ದಪ್ಪನಾದ ಕಾಂಕ್ರೀಟ್ ಸ್ಥಾವರದೊಳಗೆ ಇರಿಸಲಾಗುತ್ತದೆ. ಹೀಗೆ ಬಿಡುಗಡೆಯಾಗುವ ಅಪಾರ ಪ್ರಮಾಣದ ಉಷ್ಣಶಕ್ತಿಯನ್ನು ನೀರನ್ನು ಕುದಿಸಿ, ಹಬೆಯಾಗಿಸಿ, ಆ ಹಬೆಯಿಂದ ಟರ್ಬೈನುಗಳನ್ನು ತಿರುಗಿಸಿ ವಿದ್ಯುತ್ ತಯಾರಿಸಲಾಗುತ್ತದೆ.



ಸುನಾಮಿ ಅಲೆಯಬ್ಬರದ ಹೊಡೆತಕ್ಕೆ ಸಿಲುಕಿದ ಪರಮಾಣು ಸ್ಥಾವರ ಕಾರ್ಯ ಮೊದಲಿಗೆ ಸ್ಥಗಿತಗೊಂಡಿತು. ಆದರೆ, ಬೈಜಿಕ ವಿದಳನ ಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಲು ಸಾಧ್ಯವಿಲ್ಲ. ಅಪಾರ ಪ್ರಮಾಣದ ಉಷ್ಣಶಕ್ತಿ ಹೊಂದಿರುವ ಸ್ಥಾವರಕ್ಕೆ ನಿರಂತರ ನೀರನ್ನು ಸರಬರಾಜು ಮಾಡಿ ನಿಧಾನಕ್ಕೆ ವಾರಗಳ ಕಾಲ ತಂಪಾಗಿಸಿ ಸ್ಥಗಿತಗೊಳಿಸಬೇಕು. ಪರಮಾಣು ಸ್ಥಾವರಕ್ಕೆ ನೀರು ಸರಬರಾಜು ಮಾಡುವ ಪಂಪುಗಳು ಬ್ಯಾಟರಿ ವೈಫಲ್ಯದಿಂದ ನಿಂತುಹೋದವು. ಬ್ಯಾಟರಿ ವೈಫಲ್ಯದ ಸಮಯದಲ್ಲಿ ಬಳಸಲು ಪರ್ಯಾಯವಾಗಿ ಸ್ಥಾವರದ ಹೊರಗಡೆ ಅಳವಡಿಸಿದ್ದ ಜನರೇಟರುಗಳು ಕೂಡ ಸುನಾಮಿ ಅಲೆಯಿಂದ ಕೆಟ್ಟುಹೋದವು. ನಂತರ ಸಮುದ್ರದಿಂದ ನೀರನ್ನು ಸರಬರಾಜು ಮಾಡಲು ಅಲ್ಲಿನ ಸಿಬ್ಬಂದಿ ಹೆಣಗಿದರು.

ನೀರು ಸರಬರಾಜು ಮಾಡಲು ವಿಫಲ ಯತ್ನ:

ಹೆಲಿಕಾಪ್ಟರುಗಳಿಂದ ನೀರು ಸಿಂಪಡಿಸಲು ಪ್ರಯತ್ನಿಸಿದ್ದು ವಿಕಿರಣದ ತೀವ್ರತೆಯಿಂದ ಯಶಸ್ವಿಯಾಗಲಿಲ್ಲ. ನೀರು ಸರಬರಾಜು ಮಾಡುವಲ್ಲಿ ಹೀಗೆ ವಿಫಲಗೊಂಡಲ್ಲಿ, ಪರಮಾಣು ಸ್ಥಾವರದೊಳಗಿರುವ ಇಂಧನದ ರಾಡುಗಳು ತೀವ್ರ ಉಷ್ಣತೆಯಿಂದ ಕರಗಿ ಪೂರ್ಣವಾಗಿ ವಾತಾವರಣ ಸೇರಿಬಿಡುವ ಅಪಾಯ ಎಲ್ಲರನ್ನೂ ಆತಂಕಕ್ಕೀಡುಮಾಡಿದೆ.

ಅತ್ಯಂತ ಅಪಾಯಕಾರಿಯಾದ ವಿಕಿರಣವು ವಾತಾವರಣಕ್ಕೆ ಬಿಡುಗಡೆಯಾಗಿದ್ದು, ಸುಮಾರು 200 ಕಿ.ಮೀ ದೂರದಲ್ಲಿರುವ ಟೋಕಿಯೋ ನಗರದವರೆಗೂ ತನ್ನ ವಿಕಿರಣ ಶಕ್ತಿಯನ್ನು ಚಾಚಿದೆ. ಆ ನಗರದಲ್ಲಿ ಈಗಾಗಲೇ ವಿಕಿರಣ ಮಟ್ಟ ಸಾಮಾನ್ಯಕ್ಕಿಂತ ಸುಮಾರು 10 ಪಟ್ಟು ಜಾಸ್ತಿಯಿದೆ ಎಂದು ದಾಖಲಾಗಿದೆ. ಈ ವಿಕಿರಣವು ಮನುಷ್ಯನ ದೇಹಕ್ಕೆ ತಗುಲಿದಲ್ಲಿ ಕ್ಯಾನ್ಸರ್ ಒಳಗೊಂಡಂತೆ ಹಲವಾರು ಪೀಳಿಗೆಯವರೆಗೆ ವರ್ಗಾಯಿಸುವ ಕಾಯಿಲೆಗಳು ಬರುತ್ತವೆ. ವಾತಾವರಣದ ಗಾಳಿ, ನೀರು, ಅಂತರ್ಜಲ, ಜೀವವೈವಿಧ್ಯತೆ ಕಲುಷಿತಗೊಂಡು ಅಳಿವಿನಂಚಿಗೆ ತಲುಪುತ್ತವೆ. ○

ಮತ್ತೆ ಬಂಡಾಯದ ಬಿಸಿ....

ಪುಟ 3 ರಿಂದ

ಮತ್ತೊಂದು ಸುತ್ತಿನ ಬಂಡಾಯದ ಆರಂಭದಲ್ಲಿ 15 ಶಾಸಕರು, ನಂತರ 20, ಈಗ ಇಂದಿಗೆ(ಮಾರ್ಚ್ 17ಕ್ಕೆ) ಬರೋಬ್ಬರಿ 57, ಈ ಸಂಖ್ಯೆ ಬೆಳೆಯುವುದೇ ಇಲ್ಲ ಎನ್ನಲಾಗದು.

ಯಡಿಯೂರಪ್ಪನವರ ಮಕ್ಕಳ 'ಪ್ರೇರಣಾ ಟ್ರಸ್ಟ್'ನ ಹಗರಣ ಹೊರಬರುತ್ತಿರುವಾಗಲೇ ಮುಖ್ಯಮಂತ್ರಿಯನ್ನು ಹೊರದೂಡುವ ಯತ್ನಗಳು ಚುರುಕುಗೊಳ್ಳುತ್ತಿವೆ. ಹಿಂದೆ ಶಾಸಕರನ್ನು ಸೆಳೆಯುವಾಗ ಆಶೆ ಹೆಚ್ಚಿಸಿದಂತೆ ಸಂಪುಟ ವಿಸ್ತರಣೆಯಾಗದೇ ಮಂತ್ರಿಗಿರಿ ವಂಚಿತರ ಕೋಪವೂ ಸೇರಿಕೊಂಡರೆ?

ಅತ್ತ ಮುಖ್ಯಮಂತ್ರಿ, ಅವರ ಕುಟುಂಬ ಭಾಗಿಯಾದ ಹಗರಣಗಳು ಮೊಕದ್ದಮೆ ದಾಖಲಿಸಲು ನ್ಯಾಯಾಲಯದಲ್ಲಿ ವಾದ ನಡೆದಿದೆ. ಒಂದು ವೇಳೆ ತ್ವರಿತವಾಗಿ ಕೇಸ್ ದಾಖಲಾದರೆ ಸಿ.ಎಂ.ಸಾಹೇಬರು ರಾಜೀನಾಮೆ ಕೊಡಲೇಬೇಕು. ಇವೆಲ್ಲಾ ಲೆಕ್ಕವಿಟ್ಟೇ ಭಿನ್ನಮತೀಯರು ಅಂತಿಮ ವ್ಯವಹಾರಕ್ಕೆ ಸಿದ್ಧತೆ ನಡೆಸಿದ್ದಾರೆ.

ಇನ್ನಾದರೂ ತೊಲಗಲಿ

ಇವೆಲ್ಲಾ ಲೆಕ್ಕಾಚಾರ ಬಂಡಾಯುಗಾರರಿಗೆ ಇಲ್ಲದಿಲ್ಲ. ಈಶ್ವರಪ್ಪ, ಅನಂತಕುಮಾರ್, ಶೆಟ್ಟರ್ ಜನಾರ್ಧನರೆಡ್ಡಿ ಕಂಪನಿ, ಕಟ್ಟಾ ಇತ್ಯಾದಿ. ಟೊಂಕಕಟ್ಟಿ ಕಣಕ್ಕಿಳಿದಿದ್ದಾರೆ. ಒಬ್ಬೊಬ್ಬರಿಗೂ ಒಂದೊಂದು ಸ್ವಹಿತದ ಅಜೆಂಡಾವಿದೆ. ಇದವರ ಬಂಡಾಯ ಯಡಿಯೂರಪ್ಪನವರ ಭ್ರಷ್ಟತೆ, ಆಡಳಿತ ವೈಖರಿ ಬಗೆಗಂತೂ ಖಂಡಿತ ಅಲ್ಲ. ಇಂತಹ ಸ್ವಾರ್ಥಿ 'ಎ 'ಬಿ' ಟೀಂ ಗಳಿಂದ ರಾಜ್ಯ ಉಳಿದೀತೇ?. ಅಕ್ರಮಗಳಿಂದಲೇ ಅಧಿಕಾರ ನಡೆಸುತ್ತಿರುವ' ಬಹುಮತ ಕಳೆದುಕೊಂಡಿರುವ ಬಿಜೆಪಿ ಇನ್ನಾದರೂ ರಾಜೀನಾಮೆ ಕೊಟ್ಟು ವಿಧಾನಸಭೆ ವಿಸರ್ಜಿಸಿ ತೊಲಗದೇ ಬೇರೆ ದಾರಿಯೇ ಇಲ್ಲ?

* * *

ಪ್ರತ್ಯೇಕ ರಾಜ್ಯ ಭ್ರಮೆ ಬಿತ್ತನೆಗೆ ತಡೆ

ಪ್ರತ್ಯೇಕ ಕೊಡಗು ರಾಜ್ಯ ರಚನೆಯಲ್ಲ ಎಂದು ಸ್ಪಷ್ಟವಾಗಿ ಹೇಳಿರುವ ಕೇಂದ್ರ ಸರ್ಕಾರದ ನಿರ್ಧಾರ ಸರಿಯಾಗಿದೆ. ಮಾತ್ರವಲ್ಲ ದೇಶದಲ್ಲಿ ರಾಜ್ಯಗಳ ಪುನರ್ವಿಂಗಡಣಾ ಆಯೋಗ ರಚಿಸುವ ಯಾವುದೇ ಹೊಸ ರಾಜ್ಯಗಳ ರಚನೆ ಬಗ್ಗೆ ಕೇಂದ್ರ ನಿರಾಕರಿಸಿದೆ ಕೂಡ. ದೇಶದ ಹಲವೆಡೆ ತಲೆಯೆತ್ತಿದ್ದ ಛಿದ್ರಕಾರಿ, ಪ್ರತ್ಯೇಕತಾವಾದಿ ಕೂಗುಗಳ ಚಳುವಳಿಗಳ ಪ್ರಭಾವದಿಂದ ಎನ್.ಯು. ನಾಚಪ್ಪನವರ ನೇತೃತ್ವದ ಕೊಡವ ನ್ಯಾಷನಲ್ ಫ್ರಂಟ್ ಸಂಘಟನೆ ಕರ್ನಾಟಕದಿಂದ ಕೊಡಗನ್ನು ಪ್ರತ್ಯೇಕಗೊಳಿಸುವಂತೆ ಆಗ್ರಹಿಸಿತ್ತು.

ಮೊದಲು ಕೊಡಗು ದೇಶ, ಆದಾಗದು ಎಂದಾಗ ಕೊಡಗು ರಾಜ್ಯ, ಮತ್ತೊಮ್ಮೆ ಕೊಡವ ಕೌನ್ಸಿಲ್ ಇತ್ಯಾದಿ ಬೇಡಿಕೆಗಳು ಕಾಲಕ್ಕನುಗುಣವಾಗಿ ತಮ್ಮ ಸ್ವರೂಪ ಬದಲಿಸಿದ್ದವು. ಇದನ್ನು ಸಿಪಿಐ(ಎಂ) ಮತ್ತಿತರೆ ಪ್ರಗತಿಪರ ಶಕ್ತಿಗಳು ಖಂಡತುಂಡವಾಗಿ ವಿರೋಧಿಸಿದ್ದವು. ಜನಾಂದೋಲನಕ್ಕೂ ಮುಂದಾಗಿದ್ದವು.

ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಆಶಯಕ್ಕೆ ಕೊಡಲಿಯೇಟು ನೀಡಿ, ಪ್ರತ್ಯೇಕತಾವಾದ ಬೆಳೆಸುವ ಇಂತಹ ಶಕ್ತಿಗಳ ಆಟಾಟೋಪವನ್ನು ಎದುರಿಸಲು ಕೇಂದ್ರಸರ್ಕಾರವೂ ಸಹ ಚಂಚಲತೆ ತೋರದೇ, ದೃಡವಾಗಿ ನಿಲ್ಲಬೇಕು. ಕೇಂದ್ರ ಇಂತಹ ನಿಲುವು ತೆಗೆದುಕೊಳ್ಳಲು ಪ್ರತ್ಯೇಕತಾವಾದೀ ಶಕ್ತಿಗಳ ಬಗ್ಗೆಯೂ ಜನತೆ ಅರ್ಥ ಮಾಡಿಕೊಂಡಿರುವುದು ಪ್ರಭಾವಿಸಿದೆಯೆಂಬುದೂ ಗಮನಾರ್ಹ. ಆದ್ದರಿಂದಲೇ ಹಂತಹಂತವಾಗಿ ಕೊಡವ ನ್ಯಾಷನಲ್ ಫ್ರಂಟ್ ಸಹ ಜನರಿಂದ ದೂರಗೊಂಡಿದೆ.

ಕೊಡಗಿನ ಸಮಸ್ಯೆಗಳಿಗೆ ಪ್ರಜಾಸತ್ತಾತ್ಮಕ ಹೋರಾಟ ಅಗತ್ಯ, ಅವು ರಾಜ್ಯದಲ್ಲಿ, ದೇಶದಲ್ಲಿನ ಒಟ್ಟು ಸಮಸ್ಯೆಗಳ ಭಾಗವಾಗಿದೆ. ಆದರೆ ಪ್ರತ್ಯೇಕ ರಾಜ್ಯ ರಚನೆಯಾದರೆ ಎಲ್ಲವೂ ಸಾಧ್ಯವೆಂಬ ಭ್ರಮೆ ಹಬ್ಬಿಸುವ ಪ್ರಯತ್ನಗಳನ್ನು ಪ್ರತ್ಯೇಕತಾ ವಿಭಜನಾ ಶಕ್ತಿಗಳು ಈಗಲಾದರೂ ಕೈಬಿಡಬೇಕು. ಜನ ಅದನ್ನು ಸೋಲಿಸಬೇಕು. ○

ಜನರ ಪ್ರಶ್ನೆಗಳಿಗೆ ಕುರುಡಾಗಿರುವ

ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಒಂದು ಜನಾಂದೋಲನ

ಲಜ್ಜೆಗೇಡಿ ಭ್ರಷ್ಟ ರಾಜ್ಯ ಬಿಜೆಪಿ ಸರ್ಕಾರ ಹಾಗೂ ಕೇಂದ್ರದ ಯುಪಿಎ ಸರ್ಕಾರಗಳ ಜನದ್ರೋಹಿ ನೀತಿಗಳ ವಿರುದ್ಧ ಆಂದೋಲನದ ಕರೆ ಇದು. ಲೇಖನದ ಮೊದಲ ಕಂತು....

■ **ನಿತ್ಯಾನಂದಸ್ವಾಮಿ**
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ಕರ್ನಾಟಕದ ಜನತೆಯ ಅತ್ಯಂತ ಹಿಂದುಳಿದ ಜಾತೀಯ, ಮತೀಯ ಪ್ರಜ್ಞೆಯನ್ನೇ ಬಂಡವಾಳ ಮಾಡಿಕೊಂಡಿರುವ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವು ಜನರ ಮನಸ್ಸುಗಳಲ್ಲಿರುವ ಭ್ರಮೆಗಳನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾ 5 ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಲು ಹೊಂಚುಹಾಕುತ್ತಿದೆ. ಕರ್ನಾಟಕ ಜನತೆಯ ರಾಜಕೀಯ ಪ್ರಜ್ಞೆ ಇಷ್ಟೊಂದು ಕೆಳಮಟ್ಟದಲ್ಲಿರಲು ಕರ್ನಾಟಕ ರಾಜ್ಯ ಸ್ಥಾಪನೆಯಾದಾಗಿನಿಂದ ಇಲ್ಲಿ ಅಧಿಕಾರ ನಡೆಸುತ್ತಾ ಬಂದಿರುವ ಕಾಂಗ್ರೆಸ್ ಮುಖವಾಡದ ಬಂಡವಾಳಶಾಹಿ ಭೂಮಾಲಿಕ ಶಕ್ತಿಗಳ ವರ್ಗ ಆಳ್ವಿಕೆಯೇ ಕಾರಣವಾಗಿದೆ. ಐದಾರು ದಶಕಗಳ ಈ ಆಳ್ವಿಕೆಯು ಈಗ ಅತ್ಯಂತ ಪ್ರತಿಗಾಮಿ ಪಕ್ಷವಾಗಿರುವ ಬಿಜೆಪಿಗೆ ಫಲವತ್ತಾದ ನೆಲವನ್ನು ಒದಗಿಸಿದೆ. ಒಮ್ಮೆ ಅಧಿಕಾರ ಸಿಕ್ಕಿದ್ದೇ ತಡ, ಜನರ ಅಂಧ ವಿಶ್ವಾಸದ ಪೂರ್ಣ ಲಾಭ ಪಡೆಯಲು ಬಿಜೆಪಿ ಸಜ್ಜಾಗಿದೆ.



ಹಳೆಯ ವಿಷ ಹೊಸ ಬಾಟಲಿಯಲ್ಲಿ

2011 -12ನೇ ಸಾಲಿನ ಬಜೆಟ್‌ನ್ನು ಎರಡು ಭಾಗ ಮಾಡಿ ಮೊದಲು ಭಾಗವನ್ನು ಕೃಷಿ ಬಜೆಟ್ ಎಂದು ಹಸಿರು ಮುಖಪುಟದೊಂದಿಗೆ ಪ್ರಕಟಿಸಿರುವುದು ಜನರ ಮನಸ್ಸುಗಳಲ್ಲಿರುವ ಭ್ರಮೆಗಳನ್ನು ಗಟ್ಟಿಗೊಳಿಸುವ ಯಡಿಯೂರಪ್ಪನವರ ಇನ್ನೊಂದು ಪ್ರಯತ್ನವಾಗಿದೆ. ಅಬ್ಬರದ ಪ್ರಚಾರ ದೊರಕಿಸಿ ವೈಭವೀಕರಿಸಲಾದ ಈ ಕೃಷಿ ಬಜೆಟ್‌ನಲ್ಲಿ ಹೊಸದೇನಿದೆ? ಅದೇ ವಿನಾಶಕಾರಿ ಉದಾರೀಕರಣದ ವಿಷ ಹೊಸ ಬಾಟಲಿಯಲ್ಲಿ!

ಯಡಿಯೂರಪ್ಪನವರು ಮಂಡಿಸಿರುವ ಕೃಷಿ ಬಜೆಟ್, ರೈತ ಪ್ರಧಾನ ನಮ್ಮ ವ್ಯವಸಾಯ ಪದ್ಧತಿಯನ್ನು ಅಂತ್ಯಗೊಳಿಸಿ ವ್ಯವಸಾಯ ರಂಗದ ಕಂಪನೀಕರಣಕ್ಕೆ ಹಾದಿ ಸುಗಮ ಮಾಡಲಿದೆ. ಇದೇ ಉದ್ದೇಶಕ್ಕೆ ಜೂನ್ ತಿಂಗಳಲ್ಲಿ "ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ" ವನ್ನು ಆಯೋಜಿಸಲಾಗುವುದೆಂದು ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಕೃಷಿ ವಲಯದಲ್ಲಿ ಬಂಡವಾಳ ಹೂಡಲು ವಿದೇಶಿ ಹೂಡಿಕೆದಾರರು ತುದಿಗಾಲ ಮೇಲೆ ನಿಂತಿದ್ದಾರೆಂದೂ, ಕೃಷಿ ವಲಯಕ್ಕೆ ವಿದೇಶಿ ಹೂಡಿಕೆದಾರರು ಆಗಮಿಸುವುದರಿಂದ ರೈತರಿಗೆ ನಮ್ಮ ವರ್ತಕರಿಂದ ಆಗುತ್ತಿರುವ ಅನ್ಯಾಯ ತಪ್ಪಲಿದೆ ಎಂದೂ ಅವರು ವಿಧಾನಸಭೆಯ ಆಚೆ ಹೇಳಿಕೊಂಡಿದ್ದಾರೆ. ಯಡಿಯೂರಪ್ಪನವರ ಈ ನೀತಿ 'ಬಾಣಲೆಯಲ್ಲಿ ಬೆಂದ ರೈತರನ್ನು ಬೆಂಕಿಗೆ ಹಾಕುವ' ಸ್ವರೂಪದ್ದಾಗಿದೆ. ಇದೇ ನವ ಉದಾರೀಕರಣದ ನೀತಿಯಿಂದ ಈಗಾಗಲೇ ಕರ್ನಾಟಕದ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಮ್ಮ ಕೃಷಿ ರಂಗಕ್ಕೆ ಬಂಡವಾಳ ಹೂಡಲು ಬರುವ ವಿದೇಶಿ ಹೂಡಿಕೆದಾರರು ಸಮಾಜ ಸೇವಕರಲ್ಲ, ಲಾಭಕೋರರು! ಅವರು ಬರುತ್ತಿರುವುದು ಲೂಟಿ ಮಾಡಲು ನಮ್ಮ ರೈತರನ್ನು ಉದ್ಧಾರ ಮಾಡಲು ಅಲ್ಲ, ಯಡಿಯೂರಪ್ಪನವರ ಆ ವಿದೇಶಿ ಕಟುಕರೊಂದಿಗೆ ಕೈ ಜೋಡಿಸಿ ನಮ್ಮ ರೈತರಿಗೆ ಬಲೆ ಬೀಸಲು ಹೊರಟಿದ್ದಾರಲ್ಲಾ!

ರಾಜ್ಯದಲ್ಲಿ ರೈತರು ಕೃಷಿ ರಂಗವನ್ನು ಬಿಟ್ಟುಹೋಗುತ್ತಿದ್ದಾರೆ. ಕೃಷಿ ಉತ್ಪಾದನೆ ಕುಸಿಯುತ್ತಾ ಇದೆ. ರೈತರು ಕೃಷಿ ಮಾಡುವುದನ್ನು ಮುಂದುವರೆಸಿಕೊಂಡು ಹೋಗಬೇಕಾದ ರೈತರಿಗೆ ಅದು ಲಾಭದಾಯಕವಾಗಿರಬೇಕು. ಅವರು ಕಷ್ಟಪಟ್ಟು ಬೆಳೆಯುವ ಫಸಲಿಗೆ ಯೋಗ್ಯ ಬೆಲೆ ಸಿಗಬೇಕು. ಬೀಜ, ಗೊಬ್ಬರ, ಕ್ರಿಮಿನಾಶಕಗಳು ಅಗ್ಗವಾಗಿ ಸಿಗಬೇಕು. ಅವು ಒಳ್ಳೆಯ ಗುಣಮಟ್ಟದ್ದಾಗಿರಬೇಕು. ಅವರನ್ನು ಅವಲಂಬಿಸಿರುವ ಕೃಷಿ ಭೂಮಿಗೆ ರಕ್ಷಣೆ ಸಿಗಬೇಕು. ಅದಕ್ಕಾಗಿ ರೈತರ ಕೃಷಿ ಭೂಮಿಗೆ ರಕ್ಷಣೆ ನೀಡುವ ಬದಲಾಗಿ, ಅದನ್ನು ಸುಲಭವಾಗಿ ಸ್ವಾಧೀನಪಡಿಸಿಕೊಂಡು ಕೈಗಾರಿಕೆ, ರಸ್ತೆ ನಿರ್ಮಾಣ, ವಿಮಾನ ನಿಲ್ದಾಣ, ನಿರ್ಮಾಣ ಮೊದಲಾದವುಗಳ ಹೆಸರಿನಲ್ಲಿ ಭೂ ಮಾಫಿಯಾಗಳಿಗೆ ನೀಡಲು ಕಾಯ್ದೆಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾಪಗಳನ್ನು ಯಡಿಯೂರಪ್ಪನವರು ಮಂಡಿಸಿದ್ದಾರೆ.

ಇದರ ಜೊತೆಯಲ್ಲಿ ರೈತರ ಕಣ್ಣಿಗೆ ಮಣ್ಣೆರಚಲು ಶೇ.1 ರ ದರದಲ್ಲಿ ಸಾಲ ನೀಡುವ ಭರವಸೆಯನ್ನು ಘೋಷಿಸಿದ್ದಾರೆ. ಆದರೆ ಈ ಸೌಲಭ್ಯ ಕೇವಲ ಸಹಕಾರಿ ಬ್ಯಾಂಕುಗಳಿಂದ ಪಡೆಯುವ ಜುಜುಬಿ ಬೆಳೆಸಾಲಕ್ಕೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ವ್ಯವಸ್ಥಿತವಾಗಿ ಮರೆಮಾಚಲಾಗಿದೆ. ರೈತರು ಕೃಷಿಗಾಗಿ ಮಾತ್ರ ಸಾಲ ಮಾಡುವುದಿಲ್ಲ. ಮಕ್ಕಳ ಮದುವೆಗೆ, ಮನೆ ರಿಪೇರಿ ಮಾಡಲು ಕುಟುಂಬದ ಸದಸ್ಯರ ವೈದ್ಯಕೀಯ ಚಿಕಿತ್ಸೆಗೂ ಸಾಲ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಬಹುಸಂಖ್ಯಾತ ರೈತರು ಖಾಸಗಿ, ಬಡ್ಡಿ ಸಾಹುಕಾರರ ಸಾಲವನ್ನೇ ಅವಲಂಬಿಸುತ್ತಾರೆ. ಕೃಷಿಯಿಂದ ಸರಿಯಾಗಿ ಆದಾಯ ಬಂದರೆ ರೈತರು ಸಾಲವನ್ನು ತೀರಿಸುತ್ತಾರೆ. ಆದರೆ ಫಸಲಿಗೆ ಯೋಗ್ಯ ಬೆಲೆ ಸಿಗದೆ ಹಾನಿಗೊಳಗಾದಾಗ ಸಾಲಕೊಟ್ಟ ಬಡ್ಡಿ ಸಾಹುಕಾರನಿಂದ ಅವಮಾನಿತನಾಗುವುದನ್ನು ತಪ್ಪಿಸಿಕೊಳ್ಳಲು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಬಹುಸಂಖ್ಯಾತ ರೈತರ ಈ ಖಾಸಗಿ ಸಾಲಕ್ಕೆ ಯಡಿಯೂರಪ್ಪ ಸರ್ಕಾರದಿಂದ ಯಾವುದೇ ಪರಿಹಾರವಿಲ್ಲ. ಕೇರಳದ ಸಿಪಿಎಂ ನೇತೃತ್ವದ ಸರ್ಕಾರ ರೈತರ ಇಂತಹ ಖಾಸಗಿ ಸಾಲದ ಹೊರೆಯನ್ನು ಹೊತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಯಶಸ್ವಿಯಾಗಿ ತಡೆಗಟ್ಟಿದೆ. ಆದರೆ ಯಡಿಯೂರಪ್ಪ ಸರ್ಕಾರ ಬಣ್ಣದ ಮಾತುಗಳಿಂದ ರೈತರ ಬಾಯಿ ಮುಚ್ಚಿಸಲು ಹೊರಟಿದೆ.

ಕೂಲಿಕಾರರ ಪಾಲಿಗೆ ಶೂನ್ಯ ಬಜೆಟ್ :

ರಾಜ್ಯದಲ್ಲಿ ಸುಮಾರು ಒಂದು ಕೋಟಿಯಷ್ಟಿರುವ ಕೃಷಿ ಕೂಲಿಕಾರರ ಪಾಲಿಗೆ ಯಡಿಯೂರಪ್ಪನವರ ಈ ಬಜೆಟ್ ಅತ್ಯಂತ ನಿರಾಶಾದಾಯಕವಾಗಿದೆ. 'ಕೃಷಿ ಕೂಲಿಕಾರರು' ಎಂಬ ಪದದ ಉಲ್ಲೇಖ ಅದರಲ್ಲಿ ಇಲ್ಲ. ಕೃಷಿ ಉತ್ಪಾದನೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಕೃಷಿ ಕೂಲಿಕಾರರನ್ನು ಕಡೆಗಣಿಸುವ ಈ ಬಜೆಟ್ ಅದು 'ಕೃಷಿ ಬಜೆಟ್' ಹೇಗಾಗುತ್ತದೆ?

ತೀವ್ರ ಬೆಲೆ ಏರಿಕೆಯ ಈ ದಿನಗಳಲ್ಲಿ ಕೃಷಿ ಕೂಲಿಕಾರರು ಹೊಟ್ಟೆಪಾಡಿಗಾಗಿ ಕುಟುಂಬ ಸಮೇತರಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಗುತ್ತಿದೆ. ಅವರನ್ನು ಕೃಷಿ ಕ್ಷೇತ್ರಕ್ಕೆ ಆಕರ್ಷಿಸುವ ಕ್ರಮಗಳನ್ನು ಕೈಗೊಳ್ಳುವ ಬದಲಾಗಿ ಯಡಿಯೂರಪ್ಪ ಸರ್ಕಾರವು ನಾಟಿ ಮಾಡುವ, ಕಟಾವು ಮಾಡುವ ಯಂತ್ರಗಳಿಗೆ ಶೇ.50 ರಷ್ಟು ಸಬ್ಸಿಡಿ ನೀಡಲು ಮುಂದಾಗಿದೆ. ಇದರಿಂದಾಗಿ ಹಳ್ಳಿಗಳಲ್ಲಿ ಕೃಷಿ ಕೂಲಿಕಾರರ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡು ನಗರ ಪ್ರದೇಶಗಳಿಗೆ ಅವರು ವಲಸೆ ಹೋಗುವುದನ್ನು ಹೆಚ್ಚಿಸಲಿದೆ. ಈ ವಿಷಯದಲ್ಲಿ ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ದೇಶಕ್ಕೆ ಮಾದರಿಯಾಗಿದೆ. ಅಲ್ಲಿ ಕೃಷಿ ಕೂಲಿಕಾರರಿಗಾಗಿ ಸಮಗ್ರ ಕಾಯ್ದೆಯೊಂದನ್ನು ರೂಪಿಸಿ, ಜಾರಿ ಮಾಡಲಾಗಿದ್ದು, ಕೃಷಿ ಕೂಲಿಕಾರರಿಗೆ ತುಟ್ಟಿಭತ್ಯೆ ಸಹಿತವಾದ ಕನಿಷ್ಠ ವೇತನ, ಕಲ್ಯಾಣ ಮಂಡಳಿಯ ಮೂಲಕ ಎಲ್ಲಾ ರೀತಿಯ ಸಾಮಾಜಿಕ ಭದ್ರತಾ ಸೌಲಭ್ಯಗಳು, ವಾಸಕ್ಕೆ ಮನೆ, ಉಚಿತ ವೈದ್ಯಕೀಯ ಚಿಕಿತ್ಸೆ, ವೃದ್ಧಾಪ್ಯ ವೇತನ ಮೊದಲಾದವುಗಳನ್ನು ಒದಗಿಸಲಾಗುತ್ತದೆ.

ಬೆಲೆ ಏರಿಕೆಯನ್ನು ತಡೆಗಟ್ಟುವ ಕಾಳಜಿಯಿಲ್ಲ

ಹಿಂದೆಂದೂ ಕಂಡರಿಯದ ಬೆಲೆ ಏರಿಕೆಯಿಂದ ರಾಜ್ಯದ ಜನತೆ ತತ್ತರಿಸಿದೆ. ಅಕ್ಕಿ, ಜೋಳ, ರಾಗಿಯಂತಹ ಆಹಾರದಾನ್ಯಗಳು, ತೊಗರಿ ಬೇಳೆ ಮತ್ತು ಇತರ ದ್ವಿದಳದಾನ್ಯಗಳು, ಹಣ್ಣು, ತರಕಾರಿ, ಮಾಂಸ, ಮೊಟ್ಟೆಯಂತಹ ಎಲ್ಲಾ ಆಹಾರ ವಸ್ತುಗಳು ಜನಸಾಮಾನ್ಯರ ಕೈಗೆ ನಿಲುಕದಂತಾಗಿವೆ. ಇಷ್ಟೊಂದು ಬೆಲೆ ಏರಿಕೆಗೆ ...... ಸರ್ಕಾರದ ಧೋರಣೆಗಳೇ ಕಾರಣ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಬೆಲೆ ಏರಿಕೆಯಿಂದ ಕಂಗಾಲಾಗಿರುವ ರಾಜ್ಯದ ಜನತೆಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರ ಒದಗಿಸಬೇಕಾದದ್ದು ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲವೇ? ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್‌ಗಳ ಬೆಲೆಗಳನ್ನು ಏರಿಸುತ್ತಾ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಿದೆ. ಆದರೆ ಇಂತಹ ಸಂಕಷ್ಟದ ಸಮಯದಲ್ಲಿ ರಾಜ್ಯ ಸರ್ಕಾರ ಹೇರುವ ಅಬ್ಕಾರಿ ಸುಂಕವನ್ನು ಕಡಿತ ಮಾಡಿ ಜನರಿಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರ ಒದಗಿಸಬಹುದಾಗಿತ್ತು. ಸಿಪಿಐ(ಎಂ) ನೇತೃತ್ವದ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯ ಸರ್ಕಾರಗಳು ಸುಂಕಗಳನ್ನು ಕಡಿತ ಮಾಡಿ ಜನರಿಗೆ ಪರಿಹಾರ ಒದಗಿಸಿವೆ. ಆದರೆ ರಾಜ್ಯ ಬಿಜೆಪಿ ಸರ್ಕಾರ ಅಂತಹ ಆಸಕ್ತಿ ತೋರಲೇ ಇಲ್ಲ. ಅಕ್ರಮ ದಾಸ್ತಾನುದಾರರ ವಿರುದ್ಧ, ಕಾಳಸಂತೆಕೋರರ ವಿರುದ್ಧ ಅದು ಯಾವುದೇ ಕ್ರಮ ಜರುಗಿಸಲು ಮುಂದಾಗಲಿಲ್ಲ. ಏಕೆಂದರೆ ಈ ಖದೀಮರೆಲ್ಲರೂ ಬಿಜೆಪಿ ಬೆಂಬಲಿಗರೇ ಆಗಿದ್ದಾರೆ.

ಅನಿಷ್ಟ ಯೂನಿಟ್ ರೇಷನ್ ಪದ್ಧತಿ !

ಇಷ್ಟೊಂದು ಬೆಲೆ ಏರಿಕೆಯಿಂದ ಸಾಮಾನ್ಯ ಜನತೆ ಕಂಗೆಟ್ಟಿರುವಾಗ ಅವರಿಗೆ ಸರಿಯಾದ ರೇಷನ್ ವ್ಯವಸ್ಥೆಯನ್ನಾದರೂ ಜಾರಿಗೆ ತರಲು ಬಿಜೆಪಿ ಸರ್ಕಾರ ಮುಂದಾಗದಿರುವುದು ರಾಜ್ಯದ ಅತಿ ದೊಡ್ಡ ದುರಂತ. ವ್ಯಾಪಕವಾದ ಪ್ರತಿಭಟನೆಗಳು ನಡೆದಿದ್ದರೂ ವ್ಯಕ್ತಿಗೆ ತಿಂಗಳಿಗೆ ನಾಲ್ಕು ಕಿಲೋ ಅಕ್ಕಿ / ಗೋಧಿ ಕೊಡುವ ಅನಿಷ್ಟ ಪದ್ಧತಿಯನ್ನೇ ಈ ಸರ್ಕಾರ ಮುಂದುವರೆಸುತ್ತಿದೆ. 3 ರೂ.ಗಳಿಗೆ ಒಂದು ಕಿಲೋ ದರದಲ್ಲಿ ಅಕ್ಕಿಯನ್ನು ಕೊಡುವ ಹಾಗೂ ಬಿಪಿಎಲ್ ಕಾರ್ಡಿನ ಫಲಾನುಭವಿಗಳಿಗಾಗಿ ವಾರ್ಷಿಕ ಆದಾಯ ಮಿತಿಯನ್ನು 30 ಸಾವಿರಕ್ಕೆ ಏರಿಸುವ ಅದರ ಚುನಾವಣಾ ಭರವಸೆಯನ್ನೇ ಅದು ಜಾರಿಗೆ ತಂದಿಲ್ಲ. ಈಗ ಅನಧಿಕೃತ ರೇಷನ್ ಕಾರ್ಡುಗಳನ್ನು ರದ್ದು ಮಾಡುವ ಹೆಸರಿನಲ್ಲಿ ಬಡವರ ವಶದಲ್ಲಿರುವ ಕಾರ್ಡುಗಳನ್ನು ಕಿತ್ತುಕೊಳ್ಳಲು ಹೊರಟಿದೆ. ರಾಜ್ಯದಲ್ಲಿ ಸಾವಿರಾರು ಬಡ ಕುಟುಂಬಗಳು ರೇಷನ್‌ಕಾರ್ಡುಗಳು ವಿತರಣೆ ಆಗಿಲ್ಲ. ಒಂದೇ ಮನೆಯಲ್ಲಿ ವಾಸ ಇರುವ

ಪುಟ 15 ಕ್ಕೆ

ಭವಿಷ್ಯ ನಿಧಿ ಪಿಂಚಣಿದಾರರ ಸಮಾವೇಶಗಳು ಇತ್ಯಾದಿ

ಉಳ್ಳಾಲ ವಲಯು ಡಿವೈಎಫ್ಐನಿಂದ ಮನೆ ನಿವೇಶನ ಹೋರಾಟಗಳು :

ದೀರ್ಘಕಾಲದಿಂದ ವಾಸವಾಗಿರುವ ಮನೆ ನಿವೇಶನಗಳಿಗೆ ಹಕ್ಕುಪತ್ರ ನೀಡಬೇಕು, ಸ್ವಂತ ಮನೆಯಿಲ್ಲದವರಿಗೆ ಮನೆ ನಿವೇಶನ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ಜಿಲ್ಲಾದ್ಯಂತ ಡಿವೈಎಫ್ಐ ಕಾರ್ಯಕ್ರಮ, ಹೋರಾಟಗಳನ್ನು ಹಮ್ಮಿಕೊಳ್ಳಲು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಮಂಗಳೂರು ನಗರ ವ್ಯಾಪ್ತಿಯಲ್ಲಿ ನಗರ ಡಿವೈಎಫ್ಐ ಸಮಿತಿ ನೇತೃತ್ವದಲ್ಲಿ ಫೆಬ್ರವರಿ 21 ರಂದು 'ಮಂಗಳೂರು ಮಹಾನಗರ ಪಾಲಿಕೆ ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. (ಮಾರ್ಚ್ 6ರ ಜನಶಕ್ತಿಯಲ್ಲಿ ವರದಿಯಾಗಿದೆ) ಇದಕ್ಕೆ ಅಭೂತಪೂರ್ವ ಜನ ಬೆಂಬಲ ವ್ಯಕ್ತವಾಗಿತ್ತು. ಇದರಿಂದ ಉಳ್ಳಾಲ ವಲಯದಲ್ಲಿಯೂ ಪ್ರೇರಣೆಯಿಂದಾಗಿದ್ದು, ಉಳ್ಳಾಲ ವಲಯ ಡಿವೈಎಫ್ಐ ಮಾರ್ಗದರ್ಶನದಲ್ಲಿ ಎರಡು ಪಂಚಾಯಿತಿಗಳಲ್ಲಿ ಮನೆ ನಿವೇಶನ, ಹಕ್ಕುಪತ್ರಕ್ಕೆ ಆಗ್ರಹಿಸಿ ಪ್ರತಿಭಟನೆಗಳು ನಡೆದವು. ಅದಕ್ಕೂ ಪೂರ್ವಭಾವಿಯಾಗಿ ಸಂಬಂಧಪಟ್ಟ ಗ್ರಾಮಸ್ಥರಿಂದ ಅರ್ಜಿಗಳನ್ನು ಸಂಗ್ರಹಿಸಿ ಕಾರ್ಯಕ್ರಮದ ದಿನದಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲಾಯಿತು.



ಮುನೀರ್ ಕಾಟಿಪಳ್ಳ ಹೋರಾಟಗಾರರನ್ನುದ್ದೇಶಿಸಿ....

ಮಾರ್ಚ್ 3 ರಂದು ಹರೇಕಳ ಗ್ರಾಮ ಪಂಚಾಯಿತಿ ಕಚೇರಿ ಎದುರು ನಡೆದ ಧರಣಿಯ ನೇತೃತ್ವ ವಹಿಸಿ ಮಾತನಾಡಿದ ಡಿವೈಎಫ್ಐ ದಕ್ಷಿಣಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಜಿಲ್ಲೆಯಲ್ಲಿ ವಸತಿ ಹಾಗೂ ನಿವೇಶನರಹಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮಾತ್ರವಲ್ಲದೆ ಬೃಹತ್ ಕೈಗಾರಿಕೆ, ಎಸ್ಇಝೆಡ್‌ಗಳ ಸ್ಥಾಪನೆ, ಬೆಳೆಯುತ್ತಿರುವ ವಾಣಿಜ್ಯ ವಹಿವಾಟು ಹಾಗೂ ರಿಯಲ್ ಎಸ್ಟೇಟ್ ಉದ್ಯಮಗಳಿಂದಾಗಿ ಭೂಮಿಯ ಬೆಲೆ, ಮನೆ ಬಾಡಿಕೆ ದರ ವಿಪರೀತವಾಗಿ ಏರುತ್ತಿದೆ. ಇದರಿಂದಾಗಿ ಜನಸಾಮಾನ್ಯರು ಸ್ವಂತ ನಿವೇಶನ ಖರೀದಿಸಿ ಮನೆ ಕಟ್ಟುವುದಾಗಲಿ ಬಾಡಿಗೆ ಮನೆಯಲ್ಲಿ ವಾಸಿಸುವುದಾಗಲೀ ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು. ಮುಸ್ಲಿಮರು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ನಿವೇಶನರಹಿತರು ಇನ್ನೂರು ಮಂದಿ ಈ ಧರಣಿಯಲ್ಲಿ ಭಾಗವಹಿಸಿದ್ದರು. ಬಳಿಕ ಗ್ರಾಮ ಪಂಚಾಯತಿ ಅಧ್ಯಕ್ಷರ ಮೂಲಕ ಜಿಲ್ಲಾಧಿಕಾರಿಗಳಿಗೆ ಸಂಗ್ರಹಿಸಿದ ಮನವಿಗಳನ್ನು ಸಲ್ಲಿಸಲಾಯಿತು. ಹರೇಕಳ ಡಿವೈಎಫ್ಐ ಘಟಕದ ಅಧ್ಯಕ್ಷ ಕೆ.ಅಶ್ರಫ್, ಕಾರ್ಯದರ್ಶಿ ಆಸಿಫ್ ಪಂಜಿಮಾಡಿ, ಕಾರ್ಯಕರ್ತರಾದ ಉಮ್ಮರಬ್ಬ ನ್ಯೂಪಡ್ಪು, ನವೀನ್‌ಬಜಾಲ್, ರಫೀಕ್ ಹರೇಕಳ, ಮಹಮ್ಮದ್ ಬಾರಿಕ್, ಅಬ್ದುಲ್ ನಝೀರ್ ಮಹಾಬಲ ಡಿ, ಮಜೀದ್ ಹರೇಕಳ ಮೊದಲಾದವರು ಭಾಗವಹಿಸಿದ್ದರು.

ಅಂಬ್ಲಮೊಗರು ಗ್ರಾಮ ಪಂಚಾಯತ್ ಕಚೇರಿ ಎದುರು ಮಾರ್ಚ್ 7ರಂದು ಮದಕ ಡಿವೈಎಫ್ಐ ಘಟಕ ನೇತೃತ್ವದಲ್ಲಿ ಮನೆ ನಿವೇಶನ ಆಗ್ರಹಿಸಿ ಪ್ರತಿಭಟನೆ ನಡೆದಿರುತ್ತದೆ. ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅರ್ಜಿದಾರರಲ್ಲಿ ಇಲ್ಲೂ 200 ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಗ್ರಾಮ ಪಂಚಾಯತ್ ಕಾರ್ಯದರ್ಶಿ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಡಿವೈಎಫ್ಐ ಉಳ್ಳಾಲ ವಲಯ ಕಾರ್ಯದರ್ಶಿ ಅಶೋಕ್ ಶೆಟ್ಟಿ, ಮದಕ ಡಿವೈಎಫ್ಐ ಘಟಕದ ಅಧ್ಯಕ್ಷ, ಮುಹಮ್ಮದ್ ಶರೀಫ್, ಕಾರ್ಯದರ್ಶಿ ಇಬ್ರಾಹಿಂ, ಕಾರ್ಯಕರ್ತರುಗಳಾದ ಮಾಧವ ಅಂಬ್ಲಮೊಗರು, ಜಯಂತ್ ಅಂಬ್ಲಮೊಗರು, ರಫೀಕ್ ಹರೇಕಳ ಮೊದಲಾದವರು ಭಾಗವಹಿಸಿದ್ದರು.



★ ★ ★

ಬಂಟ್ವಾಳ ಅಂಗನವಾಡಿ ಕಾರ್ಯಕರ್ತರಿಂದ ಪ್ರತಿಭಟನೆ

ಅಂಗನವಾಡಿ ಕಾರ್ಯಕರ್ತರಿಗೆ ಮಾಸಿಕ ರೂ.9,000 ಹಾಗೂ ಸಹಾಯಕಿಯರಿಗೆ ಮಾಸಿಕ ರೂ.6,000 ರಂತೆ ಕನಿಷ್ಟ ವೇತನ ಜಾರಿ ಮಾಡಬೇಕು. ಕನಿಷ್ಟ ವೇತನ ಜಾರಿ ಮಾಡುವವರೆಗೆ ಕೇಂದ್ರ ಸರಕಾರ ನೀಡಿದಷ್ಟೇ ಗೌರವಧನವನ್ನು ರಾಜ್ಯ ಸರಕಾರವೂ ನೀಡಬೇಕು. ಎಲ್ಐಸಿ ಆಧರಿಸಿ ಪಿಂಚಣಿ ಯೋಜನೆ ಜಾರಿ ಮಾಡಬೇಕು. ಮೊದಲಾದ ಬೇಡಿಕೆಗಳನ್ನು ಈಡೇರಿಸುವಂತೆ ಸಿಐಟಿಯು ಬೆಂಬಲಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಬಂಟ್ವಾಳ ತಾಲ್ಲೂಕು ಸಮಿತಿ ಮಾರ್ಚ್ 4 ರಂದು ಬಿ.ಸಿ.ರೋಡ್‌ನಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಅಂಗನವಾಡಿ ನೌಕರರ ಜಿಲ್ಲಾ ಸಂಘದ ಸಲಹೆಗಾರ ಬಿ.ಎಂ.ಭಟ್, ದಕ್ಷಿಣಕನ್ನಡ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಸಿಐಟಿಯು ಬಂಟ್ವಾಳ ತಾಲ್ಲೂಕು ಮುಖಂಡರಾದ ರಾಮಣ್ಣ ವಿಟ್ಲ, ಸಂಜೀವ ಬಂಗೇರ, ಶೀನ ಬಂಗೇರ, ಅಂಗನವಾಡಿ ನೌಕರರ ಜಿಲ್ಲಾ ಸಂಘದ ಅಧ್ಯಕ್ಷೆ ರವಿಕಲಾ, ಜಿಲ್ಲಾ ಕಾರ್ಯದರ್ಶಿ ಸುಕನ್ಯಾ ಬೆಳ್ತಂಗಡಿ, ತಾಲ್ಲೂಕು ಸಂಘದ ಅಧ್ಯಕ್ಷೆ ಲಕ್ಷ್ಮಿ, ಕಾರ್ಯದರ್ಶಿ ರಾಜೀವಿ ರೈ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

★ ★ ★

ಕುಂದಾಪುರ ಮತ್ತು ಮಂಗಳೂರಿನಲ್ಲಿ ಭವಿಷ್ಯನಿಧಿ ಪಿಂಚಣಿದಾರರ ಜಿಲ್ಲಾ ಸಮಾವೇಶ



ಕೇಂದ್ರ ಸರಕಾರ ಪಿಂಚಣಿ ನಿಧಿಯನ್ನೇ ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಡಲು ಹುನ್ನಾರ ನಡೆಸುತ್ತಿದ್ದು ಇದನ್ನು ಸಿಐಟಿಯು ವಿರೋಧಿಸಿದೆ. ಕೇಂದ್ರ ಸರಕಾರ ಈ ದೇಶದ ಜನತೆಯ ತೆರಿಗೆ ಹಣದಲ್ಲಿ ಬೃಹತ್ ಉದ್ಯಮಿಗಳಿಗೆ ಪ್ರತಿವರ್ಷ ಸಾವಿರಾರು ಕೋಟಿ ರೂ.ಗಳ ತೆರಿಗೆ ವಿನಾಯಿತಿ ಸೇರಿ ಅನೇಕ ಸವಲತ್ತು ನೀಡುತ್ತಾ ಬಂದಿದೆ. ಆದರೆ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಬಡ ಕಾರ್ಮಿಕರಿಗೆ ಪಿಂಚಣಿ ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಿದೆ ಎಂಬುದಾತಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಹಾಗೂ ಭವಿಷ್ಯನಿಧಿ ಕೇಂದ್ರ ಟ್ರಸ್ಟ್ ಸದಸ್ಯ ದೀಪಾಂಕರ್ ಮುಖರ್ಜಿ ಹೇಳಿದ್ದಾರೆ. ಅವರು ಕುಂದಾಪುರ ಕಾರ್ಮಿಕ ಭವನದಲ್ಲಿ ಹಾಗೂ ಮಂಗಳೂರು ಪುರಭವನಗಳಲ್ಲಿ ಸೇರಿದ ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲೆಗಳ ಭವಿಷ್ಯನಿಧಿ ಪಿಂಚಣಿದಾರರ ಜಿಲ್ಲಾ ಸಮಾವೇಶಗಳಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡುತ್ತಿದ್ದರು.

ಸಂಸದರು ಮತ್ತು ಶಾಸಕರು ಒಂದು ಅವಧಿಗೆ ಆಯ್ಕೆಯಾದರೆ ಅವರಿಗೆ ಜೀವನಪೂರ್ತಿ ಪಿಂಚಣಿ ಜಾರಿಯಾಗುತ್ತದೆ. ಅಲ್ಲದೆ ಈ ಪಿಂಚಣಿ ಪ್ರಮಾಣ ಆಗಾಗ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೆ ತುಟ್ಟಿಭತ್ಯೆ ಸಹ ಅನ್ವಯವಾಗುತ್ತದೆ. ಆದರೆ ಖಾಸಗಿ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರ ವೇತನದಲ್ಲಿ ಶೇ.12 ಮತ್ತು ಮಾಲಕರಿಂದ ಶೇ.12 ಭವಿಷ್ಯನಿಧಿಗೆ ಜಮೆಯಾಗುತ್ತದೆ. ಮಾಲಕರ ಪಾಲಿನ ಒಂದಂಶ ಪಿಂಚಣಿಯಾಗಿ ದೊರೆಯುತ್ತದೆ; ಆದರೆ ಇದರಲ್ಲಿ ಸರಕಾರದ ಪಾಲು ಏನೂ ಇರುವುದಿಲ್ಲ ಎಂದು ಅವರು ವಿವರಿಸಿದರು.



ಮಂಗಳೂರು ಪುರಭವನದಲ್ಲಿ ದ.ಕ. ಜಿಲ್ಲಾ ಭವಿಷ್ಯನಿಧಿ ಪಿಂಚಣಿದಾರ ಸಮಾವೇಶವನ್ನುದ್ದೇಶಿಸಿ ದೀಪಂಕರ್ ಮುಖರ್ಜಿ ಮಾತನಾಡುತ್ತಿರುವುದು.


'ದೇಶದಲ್ಲಿ 46 ಕೋಟಿ ಕಾರ್ಮಿಕರನ್ನು ಕೇಂದ್ರ ಬಜೆಟ್‌ನಲ್ಲಿ ಸಾಮಾಜಿಕ ಭದ್ರತಾ ಯೋಜನೆಗೆ ರೂ.1600 ಕೋಟಿ ಮಾತ್ರ ತೆಗೆದಿರಿಸಲಾಗಿದೆ. ಆದರೆ ಉದ್ಯಮ ವಲಯಕ್ಕೆ ಒಟ್ಟು 5 ಲಕ್ಷ ಕೋಟಿ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ದೇಶದಲ್ಲಿರುವ ಒಟ್ಟು ಕಾರ್ಮಿಕರ ಪೈಕಿ 44 ಕೋಟಿ ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ದೇಶದ ಜಿಡಿಪಿ ದರ ಪ್ರತಿವರ್ಷ ಹೆಚ್ಚಾಗುತ್ತಿದೆ ಎಂದು ಸರ್ಕಾರವೇ ಹೇಳುತ್ತಿದೆ. ಕಾರ್ಮಿಕರು ಬೆವರು ಹರಿಸಿ ದುಡಿದ ಕಾರಣ ಇದು ಸಾಧ್ಯವಾಯಿತೇ ಹೊರತು ಸರಕಾರ ನಡೆಸುವದರಿಂದಲ್ಲ. ಆದರೂ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸರ್ಕಾರ ಮೌನ ವಹಿಸಿದೆ.

ಪಿಂಚಣಿದಾರರು ಭಿಕ್ಷೆ ಕೇಳುತ್ತಿಲ್ಲ. ತಾವು ದುಡಿಯುತ್ತಿರುವ ಸಂದರ್ಭದಲ್ಲಿ ಉಳಿಸಿದ ಹಣವನ್ನೇ ಅವರಿಗೆ ನೂರು, ಐವತ್ತು, ಹತ್ತು ರೂಪಾಯಿ ನೀಡುವುದು ಸರಿಯಲ್ಲ. ಕೇಂದ್ರ ಸಂಸದೀಯ ಸಮಿತಿಯು 2009 ರಲ್ಲೇ ಪಿಂಚಣಿಗೆ ಸರ್ಕಾರದ ಪಾಲನ್ನು ಹೆಚ್ಚಿಸಬೇಕು ಎಂದು ಶಿಫಾರಸ್ಸು ಮಾಡಿತ್ತು. ಬೆಲೆಯೇರಿಕೆಯ ಇಂದಿನ ದಿನಗಳಲ್ಲಿ ಕನಿಷ್ಟ ಪಿಂಚಣಿಯನ್ನು ನಿಗದಿಪಡಿಸಬೇಕಾದ ಅಗತ್ಯವಿದೆ ಎಂದು ದೀಪಾಂಕರ್ ಮುಖರ್ಜಿ ಒತ್ತಾಯಿಸಿದರು.

ಕುಂದಾಪುರ ಕಾರ್ಮಿಕ ಭವನದಲ್ಲಿ ಮಾರ್ಚ್ 6 ರಂದು ಕಿಕ್ಕಿರಿದು ಸೇರಿದ್ದ ಪಿಂಚಣಿದಾರರ ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ವಹಿಸಿದ್ದರು. ಕರ್ನಾಟಕ ರಾಜ್ಯ ಪಿಂಚಣಿದಾರರ ಸಂಘದ ಸಂಚಾಲಕ ಕೆ.ಸುಕುಮಾರ್, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಪಿ.ವಿಶ್ವನಾಥ್ ರೈ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಮುಖಂಡರಾದ ಮಹಾಬಲ ವಡೇರಹೋಬಳಿ, ರಮೇಶ್ ಮುಂಡನ್, ವಿಜಯೇಂದ್ರ ಕೋಣಿ ಮೊದಲಾದವರು

ಪುಟ 15 ಕ್ಕೆ

ಯಾವ ಟಿ.ವಿ. ಯಾರ ಕೈಗೋ? ಯಾರ ಮುಡಿಗೆ ಯಾವ ಪೇಪರೋ?



ಕೆ.ಮಹಾಂತೇಶ್

ನಿಮಗೊಂದು ಕನ್ನಡದ ಸುಪ್ರಸಿದ್ಧ ಚಲನಚಿತ್ರ ಗೀತೆ ನೆನಪಿರಬೇಕಲ್ಲವೇ? **'ಯಾವ ಹೂವು ಯಾರ ಮುಡಿಗೆ, ಯಾರ ಒಲವು ಯಾರ ಕಡೆಗೆ?** ಅಂತ.

ಅಂತಹುದೇ ಸಂದಿಗ್ದ ಮತ್ತು ಗೊಂದಲಮಯ ಸ್ಥಿತಿಯಲ್ಲಿ ಸದ್ಯದ ಕರ್ನಾಟಕದ ಪತ್ರಿಕೋದ್ಯಮ ಮತ್ತು ಸಮೂಹ ಮಾದ್ಯಮ ಸಿಕ್ಕು ಒದ್ದಾಡುತ್ತಿದೆ.

ಹೌದು ನಾನು ಕನ್ನಡ ಪತ್ರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಕೆಲವೇ ತಿಂಗಳಲ್ಲಿ ನನಗಲ್ಲಿ ಕೆಲಸ ಮಾಡುವ ಮನಸ್ಸೇ ಹೋಗಿತ್ತು. ಆಗ ನನ್ನ ರಾಜೀನೇಮೆಯನ್ನು ಒಂದು ತಿಂಗಳು ಮುಂಚೆ ಸಂಪಾದಕರಿಗೆ ನೀಡಿದ್ದೆ. ಆಗ ನನ್ನ ಜೊತೆಯಲ್ಲಿದ್ದ ಹಿರಿಯರೆನಿಸಿಕೊಂಡ ಕೆಲವರು ಸಂಪಾದಕೀಯ ವಿಭಾಗದ ನೋಟೀಸ್‌ಬೋರ್ಡ್‌ನಲ್ಲಿ ಒಂದು ಪೇಪರ್ ಕಟ್ಟಿಂಗ್ ಹಾಕಿದರು. ಅದರ ಒಕ್ಕಣೆ ಹೀಗಿತ್ತು.... "ಪದೇ ಪದೇ ನಿಮ್ಮ ಕೆಲಸವನ್ನು ಬದಲಾಯಿಸಬೇಡಿ" ಅವರು ಹಾಗೆ ನೊಟೀಸ್ ಹಾಕಿದರೂ ನಾನು ಕೆಲಸ ಬಿಟ್ಟೆ. ಆದರೆ ಅವರಾದರೂ ಅಲ್ಲೇ ಖಾಯಂ ಆಗಿ ಉಳಿದರಾ? ಊಹುಂ ಇಲ್ಲ!

ಇನ್ನೊಂದು ವಿಶೇಷ ಅಂದ್ರೆ ನಾನು ಕೆಲಸ ಬಿಡೋ ವಿಚಾರ ಪ್ರಸ್ತಾಪ ಆದ್ಮೇಲೆ ಸಂಪಾದಕರು ನನ್ನನ್ನು ಕರೆಸಿ 2 ರಿಂದ 3 ಬಾರಿ ಚರ್ಚಿಸಿದರು. ಎಲ್ಲವನ್ನೂ ಸರಿಪಡಿಸೋಣ ಎಂದರು. ಕೊನೆಗೆ ನಾನು ನನ್ನ ಕೆಲಸ ಬಿಡುವ ಅಚಲ ತೀರ್ಮಾನಕ್ಕೆ ಬದ್ದನಾದಾಗ ಅವರು ಒ.ಕೆ. ನಿಮಗೆ ಒಳ್ಳೆಯದಾಗಲಿ. ಆದರೆ ನೀವು ಎಂದಾದರೂ ವಾಪಸ್ ಕೆಲಸಕ್ಕೆ ಬರುವುದಾದರೆ ಬನ್ನಿ ಈ ಪತ್ರಿಕೆಯ ಬಾಗಿಲು ನಿಮಗಾಗಿ ತೆರೆದಿರುತ್ತದೆ ಎಂದು ಬೀಳ್ಕೊಟ್ಟರು. (ಸಂತೋಷದಿಂದಲೇ) ಆದರೆ ಹಾಗೆಂದು ಬೀಳ್ಕೊಟ್ಟ ಕೆಲವೇ ತಿಂಗಳುಗಳಲ್ಲಿ ಅವರು ಆ ಪತ್ರಿಕೆಯನ್ನೇ ಖಾಯಂ ಆಗಿ ಬಿಟ್ಟರು! (ಅವರೀಗ ಪ್ರಸಿದ್ಧ ವಾಹಿನಿಯೊಂದರ ಮುಖ್ಯಸ್ಥರು ಅದು ಬೇರೆ ಪ್ರಶ್ನೆ)

ಯಾಕೆ ಹೀಗೆ?

ಭಾರತದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಒಂದು ಪತ್ರಿಕೆಯನ್ನು ಮತ್ತೊಬ್ಬರು ಕೊಂಡುಕೊಳ್ಳುವುದು, ಒಂದು ಟಿ.ವಿ.ಯ ಷೇರುಗಳನ್ನು ಮತ್ತೊಬ್ಬರು ಕ್ರಯ ಮಾಡುವುದು ಸರ್ವೆಸಾಮಾನ್ಯ ಸಂಗತಿಯಾಗಿದೆ. ಅದರಲ್ಲೂ ಉದಾರೀಕರಣ, ಜಾಗತೀಕರಣ ನೀತಿಗಳು ಪ್ರವಾಹರೋಪಾದಿಯಲ್ಲಿ ಜಾರಿಯಾಗುತ್ತಿರುವ ಈ ಸಂದರ್ಭದಲ್ಲಂತೂ ಯಾವ ಪತ್ರಿಕೆಗೆ ಯಾರು ಮಾಲೀಕರು, ಯಾವ ಚಾನೆಲ್‌ಗೆ ಯಾರು ಒಡೆಯರು ಎನ್ನುವುದೇ ತಿಳಿಯದಂತಾಗಿದೆ.

ರಾಜ್ಯದಲ್ಲಿ ಆಗುತ್ತಿರುವುದೇನು?

ಕರ್ನಾಟಕದ ಮಾದ್ಯಮ ಕ್ಷೇತ್ರದಲ್ಲಿ ದಿನಕ್ಕೊಂದರಂತೆ ಬೆಳವಣಿಗೆಗಳು ಆಗುತ್ತಿವೆ. ಆದರೆ ಇವತ್ತಿನ ಬೆಳವಣಿಗೆ ನಾಳೆಗೆ ಮತ್ತೊಂದು ರೂಪ ಪಡೆದುಕೊಳ್ಳುತ್ತಿರುವುದೇ ವಿಶೇಷವಾಗಿದೆ. ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಕೂಡ ಈ ಬದಲಾವಣೆಗಳಿಗೆ ಸಾಕಷ್ಟು ಕಾಣಿಕೆ ನೀಡುತ್ತಿವೆ.

ಟಿ.ವಿ. ವಾಹಿನಿಗಳ ಒಡೆಯರ್ಯಾರು?

ಒಂದು ಕಾಲದಲ್ಲಿ 'ಸನ್' ನೆಟ್‌ವರ್ಕ್ ಕರ್ನಾಟಕವನ್ನು ಆಳುತ್ತಿತ್ತು. (ಮನರಂಜನೆ ಕ್ಷೇತ್ರದಲ್ಲಿ ಅದೇ ಈಗಲೂ ಮುಂದಿದೆ) ಮತ್ತೊಂದು 2000 ಇಸ್ವಿಯಲ್ಲಿ ಆರಂಭಗೊಂಡ 'ರಾಮೋಜಿ ಒಡೆತನದ ಈ ಟಿ.ವಿ.' ರಾಜ್ಯದಲ್ಲಿ ಪ್ರವೇಶ ಪಡೆಯಿತು. ಸರಿಸುಮಾರು 2007 ರವರೆಗೂ ಅಂತಹ ಬೆಳವಣಿಗೆಗಳು ರಾಜ್ಯದ ಮಾದ್ಯಮ ಕ್ಷೇತ್ರದಲ್ಲಿ ಕಂಡುಬರಲಿಲ್ಲ. ಆದರೆ 2007 ರ ಆರಂಭದಲ್ಲಿ ಟಿ.ವಿ.9 ಆರಂಭದೊಂದಿಗೆ ಇಡೀ ಮಾಧ್ಯಮ ಕ್ಷೇತ್ರ (ಮುದ್ರಣವೂ ಸೇರಿ) ಸಾಕಷ್ಟು ಬದಲಾಗಲೇಬೇಕಾಯ್ತು. ಕ್ರೀಡೆ, ಕ್ರೈಂ, ನ್ಯೂಸ್ ಸೆನ್‌ಷನ್, ಗುಪ್ತ ಕ್ಯಾಮರ ಬಳಸಿ ಹಗರಣ ಬಯಲು ಮಾಡುವುದು, ಗಾಸಿಫ್ ಇತ್ಯಾದಿ ಜನರ ಆಸಕ್ತಿಯನ್ನು ಪ್ರಚೋದಿಸುವ ಕೆಲಸದಲ್ಲಿ ಸುದ್ದಿವಾಹಿನಿಗಳು ತೊಡಗಿಕೊಂಡವು. ಅಲ್ಲಿಂದ 'ನ್ಯೂಸ್ ಚಾನಲ್'ಗಳ ಯುಗವೇ ಪ್ರಾಮುಖ್ಯ ಪಡೆಯಿತು.

ಈಗ ಸದ್ಯ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸುದ್ದಿ ಮತ್ತು ಈ ಮನೋರಂಜನೆಯ ಚಾನಲ್‌ಗಳೆಂದರೆ ಉದಯ ಮೂವೀಸ್, ಕಾಮಿಡಿ ನ್ಯೂಸ್, ಉದಯ 2 (ಒಡೆಯರು ಸನ್‌ಸೆಟ್ ವರ್ಕ್ ಚೆನ್ನೈ) ಈ ಟಿ.ವಿ ಕನ್ನಡ (ರಾಮೋಜಿ ಹೈದರಾಬಾದ್) ಟಿ.ವಿ.9 ಕನ್ನಡ, ಇಂಗ್ಲಿಷ್ (ತೆಲುಗು ಆಂದ್ರ ಮೂಲ) ಸುವರ್ಣ ಮತ್ತು ಸುವರ್ಣ ನ್ಯೂಸ್ (ರಾಜೀವ್ ಚಂದ್ರಶೇಖರ್ - ಏಷ್ಯಾ ನೆಟ್‌ವರ್ಕ್), ಜಿ. ಕನ್ನಡ (ಎಸ್ಸೆಲ್ ನ್ಯೂಸ್) ಕಸ್ತೂರಿ (ಅನಿತಾ ಕುಮಾರಸ್ವಾಮಿ) ಮತ್ತು ಇತ್ತೀಚಿಗೆ ಆರಂಭಗೊಂಡ ಸಮಯ ನ್ಯೂಸ್ (ಸತೀಶ್ ಜಾರಕಿಹೊಳಿ) ಮತ್ತು ಜನಶ್ರೀವಾಹಿನಿ (ಜನಾರ್ಧನ ರೆಡ್ಡಿ) ಮೊದಲಾದವುಗಳು.

ಹೊಸ ಎಂಟ್ರಿ ಸಾಲಿನಲ್ಲಿ

ಇನ್ನು ಕಸ್ತೂರಿ ಚಾನಲ್, ನ್ಯೂಸ್ ಚಾನಲ್ ಆಗಿ ಇನ್ನೂ ಕೆಲವೇ ದಿನಗಳಲ್ಲಿ ಪರಿವರ್ತನೆಗೊಳ್ಳಲಿದೆ.

ಇದರ ಜೊತೆಗೆ ಜಾರಕಿ ಹೊಳಿ ಒಡೆತನದಲ್ಲಿರುವ 'ಸಮಯ' ಚಾನಲ್‌ನ್ನು ಕುಮಾರಸ್ವಾಮಿ ಖರೀದಿಸುವ ಸುದ್ದಿಗಳು ಚಾಲ್ತಿಯಲ್ಲಿದ್ದವು. ಇನ್ನೇನು ಕೆಲವೇ ದಿನಗಳಲ್ಲಿ ಅದರ ಮುಖ್ಯಸ್ಥರಾಗಿ ಈಗಿನ ಸುವರ್ಣವಾಹಿನಿ ಮುಖ್ಯಸ್ಥರಾದ ಹೆಚ್.ಆರ್.ರಂಗನಾಥ್ ಅಧಿಕಾರ ವಹಿಸಿಕೊಳ್ಳುವರು ಎಂಬ ಬಲವಾದ ಸುದ್ದಿ ಇತ್ತು. ಆದರೆ ದಿನ ಬೆಳಗಾಗುವುದರೊಳಗೆ ರೂಪಾಂತರಗೊಂಡು 'ಸಮಯ ನ್ಯೂಸ್' ಚಾನಲ್‌ನ್ನು ರಾಜ್ಯದ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರು ಖರೀದಿಸಿರುವುದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಹುತೇಕ ಖಚಿತವಾಗಿದೆ.

ಈ ವ್ಯವಹಾರ ಮತ್ಯಾರ ಕೈಗೆ ಬರಲಾಗುತ್ತೋ ಗೊತ್ತಿಲ್ಲ!

ಇನ್ನೂ ಈಗಾಗಲೇ 2 ರಿಂದ 3 ದಿನಪತ್ರಿಕೆಗಳನ್ನು ಮಾಡಿ ನಂತರ ಟೈಮ್ಸ್ ಗ್ರೂಫ್‌ಗೆ ಮಾರಾಟ ಮಾಡಿದ್ದ ವಿ.ಆರ್.ಎಲ್. ಗ್ರೂಪ್ ಟಿ.ವಿ. ಚಾನಲ್ ಆರಂಭಿಸುವ ಪ್ರಕ್ರಿಯೆಯಲ್ಲಿದೆ. ಇದಲ್ಲದೆ ಆಂಧ್ರದ ಮಾಜಿ ಮುಖ್ಯಮಂತ್ರಿ ರಾಜಶೇಖರ್ ರೆಡ್ಡಿ, ಮಗ ವೈ.ಎಸ್.ಜಗಮೋಹನರೆಡ್ಡಿ ಮಾಲೀಕತ್ವದ ಸಾಕ್ಷಿ ಟಿ.ವಿ. ಮತ್ತು ಟಿ.ವಿ.5 ಎನ್ನುವ ಮತ್ತೊಂದು ತೆಲುಗು ಚಾನಲ್‌ಗಳು ರಾಜ್ಯ ಪ್ರವೇಶಕ್ಕೆ ಭೂಮಿಗೆ ಸಿದ್ಧವಾಗಿದೆ ಎನ್ನಲಾಗಿದೆ.

ಮುದ್ರಣ ಕ್ಷೇತ್ರದಲ್ಲಿನ ಬೆಳವಣಿಗೆಗಳು

ಈ ಅವಧಿಯಲ್ಲಿ 'ವಿಜಯ ಕರ್ನಾಟಕ'ದ ವಿಶ್ವೇಶ್ವರ ಭಟ್ ಅವರನ್ನು ಕೇವಲ ಒಂದೇ ಒಂದು ಗಂಟೆಯಲ್ಲೇ 'ಸಂಪಾದಕ' ಸ್ಥಾನದಿಂದ 'ಟೈಮ್ಸ್ ಗ್ರೂಫ್ ಕಿತ್ತುಹಾಕಿದೆ. ಬಲ್ಲ ಮೂಲಗಳ ಪ್ರಕಾರ ಮೂರು ಗಂಟೆಗೆ ಸಭೆ ಸೇರಿದ ಆಡಳಿತ ಮಂಡಳಿ 4 ಗಂಟೆಗೆ ಭಟ್‌ರಿಂದ ರಾಜೀನಾಮೆ ಪಡೆದಿದೆ. ಇದು ಸ್ವತಃ ವಿಶ್ವೇಶ್ವರ ಭಟ್‌ಗೆ ದೊಡ್ಡ 'ಶಾಕ್' ಆದ ಸಂಗತಿ. ಅವರನ್ನು ಆ ಸ್ಥಾನದಿಂದ ಕೆಳಗಿಳಿಸಲು ಪ್ರಮುಖವಾದ ಒಂದು ಕಾರಣ ಭ್ರಷ್ಟಾಚಾರ 'ಭೂತ' ಭಟ್ಟರನ್ನು ಆವರಿಸಿತ್ತು ಎನ್ನುವುದು. ಮತ್ತೊಂದು



ಕಾರಣ ಅನಂತ್‌ಕುಮಾರ್, ಕುಮಾರಸ್ವಾಮಿ ಜೊತೆ ಸೇರಿ ಯಡಿಯೂರಪ್ಪನ ವಿರುದ್ಧ ಸಾಲು ಸಾಲು ಹಗರಣಗಳನ್ನು ಪ್ರಕಟಿಸಿದ್ದು ಕೂಡ ಯಡ್ಡಿ ಕ್ಯಾಂಪ್‌ನ ಕಣ್ಣು ಕೆಂಪಾಗಿತ್ತು ಎನ್ನಲಾಗಿದೆ.

ಹಾಗೆ ನೋಡಿದ್ರೆ ವಿಜಯ ಕರ್ನಾಟಕ ವಿ.ಆರ್.ಎಲ್. ಮಾಲೀಕರಿಂದ ಕೈಬಿಟ್ಟಾಗಲೇ 'ಭಟ್ರು' ಹೊರಬರೋದು ಗ್ಯಾರಂಟಿಯಾಗಿತ್ತು. ಅಂದರೆ ರವಿಶಂಕರ್ ಗುರೂಜಿ ಕಾಲಿಗೆ ಬಿದ್ದು 'ಟೈಮ್ಸ್' ಗ್ರೂಪ್‌ನವರಿಗೆ ಹೇಳಿಸಿ ಬಚಾವಾಗಿದ್ದ ಭಟ್ರು, ಈಗ ಕೊನೆಗೂ ವಿಜಯ ಕರ್ನಾಟಕದಿಂದ ತಮ್ಮ ಪಟಾಲಂನೊಂದಿಗೆ ಕಾಲು ಕೀಳಲೇಬೇಕಾಯ್ತು.

ಇತ್ತ ಮತ್ತೊಂದು ಬೆಳವಣಿಗೆಯಾಯ್ತು. ಕನ್ನಡ ಪ್ರಭದಿಂದ ತನ್ನ 30 ಜನರ ತಂಡವನ್ನು ಸುವರ್ಣ ಚಾನಲ್‌ನತ್ತ ಕರೆ ತಂದಿದ್ದ ಹೆಚ್.ಆರ್.ರಂಗನಾಥ್‌ಗೆ ಅವರನ್ನು ಸಂಭಾಳಿಸುವುದೇ ಕಷ್ಟವಾಗಿತ್ತು. ಅದೇ ವೇಳೆಗೆ ರಾಜೀವ್ ಚಂದ್ರಶೇಖರ್ ಅವರ ಮೂಲಕ ಕನ್ನಡಪ್ರಭದ ಷೇರು ಖರೀದಿ ಮಾಡ್ಸಿ ಅದನ್ನು ಏಷ್ಯಾ ನೆಟ್‌ವರ್ಕ್‌ಗೆ ಹಸ್ತಾಂತರಿಸಿಕೊಂಡರು. ಹೀಗೆ ಖರೀದಿಯಾದ ಕನ್ನಡ ಪ್ರಭಕ್ಕೆ 'ರವಿ ಹೆಗಡೆ'ಯನ್ನು ಸಂಪಾದಕರನ್ನಾಗಿ ಮಾಡೋ ಆಸೆ ರಂಗನಾಥರವರಿಗಿತ್ತು.

ಅನಂತನ ಪ್ರವೇಶ

ಆದರೆ ವಿಜಯ ಕರ್ನಾಟಕದಿಂದ ತನ್ನ ಪಟಾಲಂ ಜೊತೆ ಹೊರಬಂದ ವಿಶ್ವೇಶ್ವರರ ಭಟ್ಟರಿಗೆ ಏನು ಮಾಡಬೇಕೆನ್ನುವುದೇ ತಿಳಿಯದಾಯ್ತು. ಕೊನೆಗೆ ನನಗೆ ವಿದೇಶಿ ವಿ.ವಿ.ಯೊಂದರಲ್ಲಿ ಅತಿಥಿ ಉಪನ್ಯಾಸಕನಾಗಿ ಬರಬೇಕಂತ ಆಹ್ವಾನ ಬಂದಿದೆ ಅಂತ ಹೊಸದೊಂದು ರೈಲು ಬಿಟ್ಟರು.

ಇನ್ನೊಂದೆಡೆ ಯಡಿಯೂರಪ್ಪನ ವಿರುದ್ಧ ಒಂದಲ್ಲ ಒಂದು ಕತ್ತಿ ಮಸಿತಿರೋ ಬಿಜೆಪಿಯ ಅನಂತಕುಮಾರ್‌ಗೆ ತನ್ನ ರಾಜಕೀಯ ಭವಿಷ್ಯದ ಹಿತದೃಷ್ಟಿಯಿಂದ ಯಾವುದಾದರೊಂದು ಪ್ರಬಲ ಪತ್ರಿಕೆ ಸಹಾಯ ಬೇಕಿತ್ತು. ಅದಕ್ಕೆ 'ಪ್ಲಾನು' ತಯಾರು ಮಾಡಿ ಬಿಜೆಪಿ ಕೇಂದ್ರದ ಪ್ರಭಾವ ಬಳಸಿ 'ರಾಜೀವ್ ಚಂದ್ರಶೇಖರ್' ಜೊತೆ ವ್ಯವಹಾರ ಕುದುರಿಸಿ ಭಟ್ಟರನ್ನು ಕನ್ನಡಪ್ರಭಕ್ಕೆ ಸಂಪಾದಕರನ್ನಾಗಿ ಮಾಡಿಸೇಬಿಟ್ಟರು ಬಿಜೆಪಿಯ ಅನಂತಕುಮಾರ.

ಅಸಲಿಗೆ 'ಕನ್ನಡಪ್ರಭ'ದ ಸಂಫಾದಕರಾಗಿದ್ದ ಶಿವಸುಬ್ರಮಣ್ಯಂ ಅವರಿಗೆ ಮಧ್ಯಾಹ್ನದವರೆಗೂ 'ವಿಶ್ವೇಶ್ವರ ಭಟ್ಟರು' ಕನ್ನಡಪ್ರಭಕ್ಕೆ ಬರೋ ವಿಷಯವೇ ಗೊತ್ತಿರಲಿಲ್ಲವಂತೆ!

ಸದ್ಯ ವಿಜಯ ಕರ್ನಾಟಕದಿಂದ ಕೋಮುವಾದದ ವಿಷ ಕಕ್ಕುತ್ತಿದ್ದ ಸರ್ಪವೊಂದು ಮರೆಯಾಯಿತಲ್ಲ ಎಂದು ಸಮಾಧಾನಗೊಳ್ಳುತ್ತಿದ್ದಂತೆ ಅದು ಮತ್ತಷ್ಟು ಹತ್ತಿರದಲ್ಲೆ ಇರುವ (ವಿಧಾನಸೌಧಕ್ಕೆ ಹತ್ತಿರ) ಕನ್ನಡಪ್ರಭ ಮೂಲಕ ತನ್ನ ವಿಷವನ್ನು ಮತ್ತೆ ಕಕ್ಕಲು (ಬೈರಪ್ಪ, ತ್ಯಾಗರಾಜ್, ಪ್ರತಾಪಸಿಂಹ ಮೂಲಕ) ಆರಂಭಿಸಿದ್ದಾರೆ ವಿ.ಭಟ್ಟರು.

ಇನ್ನೂ ಇತ್ತ ರಂಗನಾಥ್ ಬೆನ್ನಿಗಂಟಿಕೊಂಡೆ ಬಂದಿದ್ದ 'ರವಿ ಹೆಗಡೆ' ತಂಡಕ್ಕೆ 'ಕನ್ನಡ ಪ್ರಭ' ಯಾವಾಗ ಕೈಕೊಟ್ಟಿತೋ ಅವರವರ ಪಾಡಿಗೆ ಅವರು ದಾರಿ ಹುಡುಕಿಕೊಳ್ಳುವ ಪರಿಸ್ಥಿತಿ ಉಂಟಾಗಿ ಕೊನೆಗೆ 'ರವಿ ಹೆಗಡೆ'ಗೆ 'ಉದಯವಾಣಿ'ಯ 'ಪೈ'ಗಳೇ ಆಸರೆಯಾಗಿ ಅವರು ಅದರ 'ಸಂಪಾದಕೀಯ' ಮಂಡಳಿ ಮುಖ್ಯಸ್ಥರಾಗಿದ್ದಾರೆ.

ಒಡೆಯರನ್ನೇ ನಿಯಂತ್ರಿಸುವ ಪತ್ರಕರ್ತರು

ಹೌದು! ಇವತ್ತಿನ ದಿನಗಳಲ್ಲಿ ದುಡ್ಡಿರುವ 'ದಣಿ'ಗಳಿಗೆ ಅವರ ರಾಜಕೀಯ ಹಾದಿ ಮತ್ತು ಅವರ ವ್ಯವಹಾರಗಳು ಸುಗಮವಾಗಿ ಸಾಗಲು ಪತ್ರಿಕೆ ಟಿ.ವಿ.ಗಳು ಬೇಕೇಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಹಾಗಾಗಿಯೇ ಒಬ್ಬೊಬ್ಬರು ಒಂದೊಂದು ಟಿ.ವಿ. ಛಾನಲ್ ಹಾಗೂ ಪತ್ರಿಕೆಗಳಲ್ಲಿ ಹಿಡಿತ ಹೊಂದಲು ಯತ್ನಿಸುತ್ತಿದ್ದಾರೆ. ಆದರೆ ಅವರಿಗೆ

ಪುಟ 14 ಕ್ಕೆ

ಕೆಲವು ತಿಂಗಳ ಹಿಂದೆ ಜಗತ್ತಿನ ಬಲಾಢ್ಯರ ನಿಜಹೂರಣಗಳನ್ನು ಬಯಲಿಗೆಳೆದ 'ವಿಕಿಲೀಕ್ಸ್'ನ ಭಾರತ ವಿಭಾಗ ಅಂದರೆ 'ಇಂಡಿಯಾ ಕೇಬಲ್ಸ್' ಈಗ ಒಂದೊಂದಾಗಿ ಬಯಲಿಗೆ ಬರುತ್ತಿವೆ, ಭಾರತದ ಧೋರಣೆಗಳನ್ನು ರೂಪಿಸುವಲ್ಲಿ ಅಮೆರಿಕಾದ ಹಸ್ತಕ್ಷೇಪವನ್ನು, ವಿದೇಶಾಂಗ ಧೋರಣೆ ಮತ್ತು ಆರ್ಥಿಕ ಧೋರಣೆಗಳಲ್ಲಿ ದೇಶ-ವಿರೋಧಿ ಅಮೆರಿಕಾ-ಪರ ಬಲಪಂಥೀಯ ಪಲ್ಲಟ ಉಂಟಾಗಿರುವುದನ್ನು ಇವು ಸಾಬೀತು ಪಡಿಸುತ್ತಿವೆ, ಮುಖ್ಯವಾಗಿ ಯುಪಿಎ-1 ಸರಕಾರದ ವಿಶ್ವಾಸಮತ ಖರೀದಿಯ ಪ್ರಸಂಗದ ಹೊಲಸು ರೂಪ ಇಲ್ಲಿ ಬಯಲಾಗಿದೆ.

ಅಮೆರಿಕಾದ ಅಡಿಯಾಳಾಗುವ ಈ ಹೊಲಸು ಹೆಬ್ಬಯಕೆ ಏಕೆ?

ಯಾರಿಗೂ ಈಗ ಸಂದೇಹ ಉಳಿಯುವಂತಿಲ್ಲ. ವಿಕಿಲೀಕ್ಸ್‌ನ 'ಇಂಡಿಯಾಕೇಬಲ್ಸ್'ನ 5100 ತಂತಿ ಸಂದೇಶಗಳ 60 ಲಕ್ಷ ಪದಗಳು ಎಲ್ಲವನ್ನೂ ಬಟ್ಟ ಬಯಲು ಮಾಡಿವೆ; ಡಾ. ಮನಮೋಹನ ಸಿಂಗ್‌ರವರ ನೇತೃತ್ವದ ಯುಪಿಎ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ಒಂದು 'ಅಡಿಯಾಳು ಮಿತ್ರ'ನಾಗಿ ಕೈಜೋಡಿಸುವ, ಹಲವಾರು ಪ್ರಶ್ನೆಗಳ ಮೇಲೆ ಅಮೆರಿಕಾದ ಒತ್ತಡಗಳಿಗೆ ಹೆಚ್ಚೆಚ್ಚು ಮಣಿಯುವ ಧೋರಣೆಯನ್ನು ಅನುಸರಿಸಲಾರಂಭಿಸಿತು, ಈ ಮೂಲಕ ಭಾರತದ ವಿದೇಶಾಂಗ ನೀತಿಯಲ್ಲಿ ಒಂದು ಸ್ಪಷ್ಟವಾದ ಪಲ್ಲಟವನ್ನು ತರುವ ಹಾದಿ ಹಿಡಿಯಿತು ಎಂಬುದೀಗ ಯಾರೂ ನಿರಾಕರಿಸಲಾಗದ ಸಂಗತಿ. ಯುಪಿಎ-1 ಸರಕಾರ ಒಂದೆಡೆ ತನ್ನ ಸಮಾನ ಕನಿಷ್ಟ ಕಾರ್ಯಕ್ರಮ (ಸಿಎಂಪಿ)ದಲ್ಲಿ ಭಾರತ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುತ್ತದೆ ಎಂದು ಹೇಳಿತು. ಇದು ಎಡಪಕ್ಷಗಳ ಬೆಂಬಲ ಪಡೆಯಲು ಕೂಡ ಅಗತ್ಯವಾಗಿತ್ತು. ಇನ್ನೊಂದೆಡೆ, ಮೋಸದಿಂದ ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಸಾಮರಿಕ ಸಂಬಂಧಗಳನ್ನು ಬಲಪಡಿಸುವ ಒಂದು ಧೋರಣೆಯನ್ನು ಅನುಸರಿಸಿತು ಎಂಬುದೀಗ ಮತ್ತೊಮ್ಮೆ ದೃಢಪಟ್ಟಿದೆ.

ಸೆಪ್ಟಂಬರ್ 2005ರಲ್ಲಿ ಭಾರತ ಮೊತ್ತಮೊದಲ ಬಾರಿಗೆ, ಅಲಿಪ್ತ ಆಂದೋಲನಕ್ಕೆ ಕೈಕೊಟ್ಟು, ಅಭಿವೃದ್ಧಿಶೀಲ ದೇಶಗಳ ಸೌಹಾರ್ದವನ್ನು ಮುರಿದು, ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆಂಸಿ(ಐಎಇಎ)ಯಲ್ಲಿ ಅಮೆರಿಕಾದ ಒತ್ತಡಕ್ಕೆ ಒಳಗಾಗಿ ಇರಾನ್ ವಿರುದ್ಧ ಮತ ನೀಡಿತು. ಇದಕ್ಕೂ, ಭಾರತ-ಅಮೆರಿಕಾ ಪರಮಾಣು ವ್ಯವಹಾರದ ಗತಿಯೇನು ಎಂದು ಅಮೆರಿಕಾ ಹಾಕಿದ ಒತ್ತಡಗಳಿಗೂ ಇರುವ ಕೊಂಡಿಯನ್ನು ಈ 'ವಿಕಿಲೀಕ್ಸ್' ಕೇಬಲ್‌ಗಳು ಸ್ಪಷ್ಟವಾಗಿ ತೋರಿಸಿವೆ. ಯುಪಿಎ ಸರಕಾರ ಸತತವಾಗಿ ನಿರಾಕರಿಸಿಕೊಂಡು ಬಂದ ಸಂಗತಿಯಿದು. ವಿಕಿಲೀಕ್ಸ್ ತಂತಿ ಸಂದೇಶಗಳು ಆ ಸುಳ್ಳನ್ನು ಬಯಲು ಮಾಡಿವೆ. ಭಾರತಕ್ಕೆ ಇಂಧನ ಭದ್ರತೆಯನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಕೊಡ ಬಹುದಾಗಿದ್ದ ಭಾರತ-ಇರಾನ್ ಅನಿಲ ಪೈಪ್‌ಲೈನ್‌ನಿಂದ ಹಿಂದೆ ಸರಿದದ್ದು ಕೂಡ ಇಂತಹ ಒತ್ತಡಗಳಿಗೆ ತಲೆಬಾಗಿಯೇ. ಇರಾನಿನ ಪರಮಾಣು ಆಕಾಂಕ್ಷೆಗಳ ಬಗ್ಗೆಯಾಗಲೀ, ಪರಮಾಣು ಶಸ್ತ್ರೀಕರಣದ ಅದರ ಸಾಮರ್ಥ್ಯದ ಬಗ್ಗೆಯಾಗಲೀ, ಅಥವ ಭಯೋತ್ಪಾನೆಗೆ ಅದರ ಬೆಂಬಲದ ಬಗ್ಗೆಯೇ ಆಗಲಿ ಭಾರತಕ್ಕೆ ಯಾವುದೇ ಭ್ರಮೆಗಳಿರಲಿಲ್ಲ ವಾದರೂ, ಇವೆಲ್ಲಕ್ಕಿಂತ ಮಿಗಿಲಾಗಿ ಒಂದು ಅಮೆರಿಕಾ-ಪರ ಧೋರಣೆಯನ್ನು ಅನುಸರಿಸುವ ಹಂಬಲ ಅದರದಾಗಿತ್ತು ಎಂಬುದನ್ನು ಈ ಕೇಬಲ್‌ಗಳು ಹೊರಗೆಡಹಿವೆ. ಸಪ್ಟಂಬರ್ 2005ರ ಐಎಇಎ ಮತ 'ಒಂದು ಪರಿವರ್ತಿತ ಅಮೆರಿಕಾ-ಭಾರತ ಸಂಬಂಧವನ್ನು ಕಟ್ಟಲು ಯುಪಿಎ ಕಟಿಬದ್ಧವಾಗಿದೆ ಎಂಬುದರ ಇದುವರೆಗಿನ ಅತ್ಯಂತ ಮಹತ್ವದ ಸಂಕೇತ' ಎಂದು ಈ ಕೇಬಲ್‌ಗಳಲ್ಲಿ ವರ್ಣಿಸಲಾಗಿದೆ.

ಅಮೆರಿಕಾದ ಹಸ್ತಕ್ಷೇಪ

ಈ ಕೇಬಲ್‌ಗಳು ಹೊರಗೆಡಹಿರುವ ಸಂಗತಿಗಳಿಂದ ಅಮೆರಿಕಾ ಹಸ್ತಕ್ಷೇಪ ಮಾಡುತ್ತಿತ್ತಷ್ಟೇ ಅಲ್ಲ, ಭಾರತೀಯ ಸರಕಾರದ ಪ್ರಮುಖ ನಿರ್ಧಾರಗಳ ಮೇಲೂ ಪ್ರಭಾವ ಬೀರುತ್ತಿತ್ತು ಎಂಬುದು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ. ಇರಾನ್ ಕುರಿತ ವಿವಾದಾತ್ಮಕ ಮತದಾನದ ಬೆನ್ನ ಹಿಂದೆ, ಜನವರಿ 2006ರಲ್ಲಿ ಒಂದು ಸಂಪುಟ ಪುನರ್ರಚನೆ ನಡೆಯಿತು. ಆಗಿನ ಪೆಟ್ರೋಲಿಯಂ ಮಂತ್ರಿ ಮಣಿಶಂಕರ್ ಅಯ್ಯರ್ ರವರನ್ನು ಬೇರೆ ಖಾತೆಗೆ ಬದಲಿಸಲಾಯಿತು. ಅದನ್ನು ಮಾಡಿದ್ದು ಅವರು ಭಾರತ-ಇರಾನ್ ಅನಿಲ ಪೈಪ್‌ಲೈನಿಗೆ ಸಕ್ರಿಯ ಪ್ರೋತ್ಸಾಹ ಕೊಡುತ್ತಿದ್ದ ಕಾರಣಕ್ಕಾಗಿ ಎಂಬ ಆಪಾದನೆ ಆಗ ವ್ಯಾಪಕವಾಗಿತ್ತು. ಈ ಪುನರ್ರಚನೆಯಲ್ಲಿ ಹೊಸದಾಗಿ ಸೇರಿಸಿಕೊಂಡ ಮಂತ್ರಿಗಳು 'ಬಲವಾದ ಅಮೆರಿಕಾ-ಪರ ನೆಲೆ' ಹೊಂದಿರುವವರು ಎಂದು ಈ ಕೇಬಲ್‌ಗಳಲ್ಲಿ ಮುಚ್ಚುಮರೆಯಿಲ್ಲದೆ ಹೆಸರಿಸಲಾಗಿದೆ. ಭಾರತ-ಅಮೆರಿಕ ಪರಮಾಣು ವ್ಯವಹಾರವನ್ನು ಕುದುರಿಸಿಯೇ ಬಿಡುವ ಯುಪಿಎ ಸರಕಾರದ ಏಕಪಕ್ಷೀಯ ನಿರ್ಧಾರದಿಂದಾಗಿ ಎಡಪಕ್ಷಗಳು ಯುಪಿಎ ಯೊಂದಿಗೆ ಜುಲೈ 2008ರಲ್ಲಿ ಸಂಬಂಧ ಕಡಿದುಕೊಳ್ಳುವ ಪೂರ್ಣ ಎರಡು ವರ್ಷಗಳ ಮೊದಲೇ, ಅಂದರೆ 2006ರ ಆರಂಭದ ಒಂದು ತಂತಿ ಸಂದೇಶದಲ್ಲಿ ಭಾರತದಲ್ಲಿ ಅಮೆರಿಕಾದ ರಾಯಭಾರಿ 'ಸಂಪುಟ ಪುನರ್ರಚನೆಯ ಯಾರೂ ನಿರಾಕರಿಸಲಾಗದ ಅಮೆರಿಕಾ-ಪರ ವಾಲಿಕೆ ಎಡಪಂಥೀಯರನ್ನು ಸಿಟ್ಟಿಗೆಬ್ಬಿಸಿದ್ದು, ಇದನ್ನು ಒಂದು ಸವಾಲಾಗಿ, ಬಹಿರಂಗ ಸಮರದ ಆಹ್ವಾನವಾಗಿ ಅವರು ಪರಿಗಣಿಸುತ್ತಾರೆ' ಎಂದಿದ್ದರು. ಹೀಗೆ, ಅಮೆರಿಕನ್ ಹಂಚಿಕೆ ಬಹಳ ಸ್ಪಷ್ಟವಾಗಿತ್ತು: ಈ ಅಮೆರಿಕಾ-ಪರ ಸರಕಾರವನ್ನು, ಎಡಪಕ್ಷ, ಬೆಂಬಲವನ್ನು ಕೇಳುವ ಅಗತ್ಯವಿಲ್ಲದ ರೀತಿಯಲ್ಲಿ ಕ್ರೋಡೀಕರಿಸುವುದು. ಪರಮಾಣು ವ್ಯವಹಾರವನ್ನು ಭದ್ರಗೊಳಿಸುವಲ್ಲಿ ಯುಪಿಎ ಯ ಇತರ ಮಿತ್ರಪಕ್ಷಗಳ ಮೇಲೆ ಬಲೆ ಬೀಸುವಲ್ಲಿ ಅದರ ಪಾತ್ರ ಮುಂದೆ ಬಯಲಾಗಲಿರುವ ಕೇಬಲ್‌ಗಳಲ್ಲಿ



ಪುಟ 11 ಕ್ಕೆ

(ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯ ಸಂಪಾದಕೀಯ ಮಾರ್ಚ್ 20, 2011 ಆಧರಿಸಿ)

50-60 ಕೋಟಿ ರೂ.ಗಳಷ್ಟಿದ್ದ ಸಂದೂಕಗಳನ್ನು ತೋರಿಸಿದರು!

ಜುಲೈ 17, 2008ರಂದು ಭಾರತದಲ್ಲಿ ಅಮೆರಿಕನ್ ರಾಯಭಾರ ಕಚೇರಿಯ ಮುಖ್ಯಸ್ಥ ಸ್ಟೀವನ್ ವೈಟ್ ಅಮೆರಿಕನ್ ವಿದೇಶಾಂಗ ಇಲಾಖೆಗೆ ಕಳಿಸಿದ ಈ ಕೇಬಲ್ ಸಂದೇಶವನ್ನು ನೋಡಿ:

'ರಾಯಭಾರಿ ಕಚೇರಿಯ ರಾಜಕೀಯ ಸಲಹೆಗಾರರು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಎಂಪಿ ಮತ್ತು ಮಾಜಿ ಪ್ರಧಾನ ಮಂತ್ರಿ ರಾಜೀವ ಗಾಂಧಿಯ ನಿಕಟ ಸಹಯೋಗಿ ಹಾಗೂ ಸೋನಿಯಾ ಗಾಂಧಿಯವರ ಕುಟುಂಬದ ತುಂಬಾ ನಿಕಟಮಿತ್ರ ಸತೀಶ್ ಶರ್ಮರನ್ನು ಭೇಟಿಯಾದರು. ತಾನು ಹಾಗು ಪಕ್ಷದಲ್ಲಿನ ಇತರರು ಸರಕಾರ ಜುಲೈ 22ರ ವಿಶ್ವಾಸ ಮತ ಗೆಲ್ಲುವಂತೆ ಮಾಡಲು ಶ್ರಮಿಸುತ್ತಿರುವುದಾಗಿ ಅವರು ಹೇಳಿದರು....... ಶರ್ಮರವರ ರಾಜಕೀಯ ಸಹಾಯಕ ನಚಿಕೇತ ಕಪೂರ್, ನಮ್ಮ ಒಬ್ಬ ಸಿಬ್ಬಂದಿಯನ್ನು ಆಚೆಗೆ ಕರೆದೊಯ್ದು ನಗದು ಹಣ ತುಂಬಿದ್ದ ಎರಡು ಸಂದೂಕಗಳನ್ನು ತೋರಿಸಿದರು. ಅದರಲ್ಲಿ ಲಂಚ ತೆರುವುದಕ್ಕಾಗಿ 50-60 ಕೋಟಿ ರೂಪಾಯಿಗಳಷ್ಟು (ಸುಮಾರು 25 ಮಿಲಿಯ ಡಾಲರುಗಳಷ್ಟು) ಇವೆ ಎಂದರು......'

ಪ್ರಣಬ್ ಮುಖರ್ಜಿ ಯಾವ ಉದ್ಯಮಿಗೆ ಋಣಿ?

ಅಮೆರಿಕಾದ ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್ ಸಪ್ಟಂಬರ್ 14, 2009ರಂದು ಭಾರತದಲ್ಲಿ ಅಮೆರಿಕನ್ ರಾಯಭಾರಿ ಕಚೇರಿಗೆ ಕಳಿಸಿದ ಕೇಬಲ್ ಸಂದೇಶದಲ್ಲಿ ಅಮೆರಿಕನ್ ಆಳರಸರು ನಿರೀಕ್ಷಿಸಿದಂತೆ ಪಿ. ಚಿದಂಬರಂ ಅಥವ ಮೊಂಟೆಕ್‌ಸಿಂಗ್ ಅಹ್ಲುವಾಲಿಯಾರ ಬದಲು ಪ್ರಣಬ್ ಮುಖರ್ಜಿಯವರನ್ನು ಹಣಕಾಸು ಮಂತ್ರಿಯಾಗಿ ಮಾಡಿದ ಬಗ್ಗೆ ಕೇಳಿರುವ ಪ್ರಶ್ನೆಗಳ ಈ ಸರಮಾಲೆಯನ್ನು ನೋಡಿ:

'ಯಾವ ಉದ್ದಿಮೆ ಅಥವ ವ್ಯಾಪಾರೀ ಗುಂಪಿಗೆ ಮುಖರ್ಜಿ ಋಣಿಯಾಗಿದ್ದಾರೆ? ತನ್ನ ಧೋರಣೆಗಳಿಂದ ಯಾರಿಗೆ ಅವರು ನೆರವು ಒದಗಿಸಲು ಪ್ರಯತ್ನಿಸಬಹುದು? ಮುಂಬರುವ ಬಜೆಟಿನಲ್ಲಿ ಮುಖರ್ಜಿಯ ಆದ್ಯತೆಗಳೇನು? ....ಮೊಂಟೆಕ್‌ಸಿಂಗ್ ಅಹ್ಲುವಾಲಿಯಾರನ್ನು ಬಿಟ್ಟು ಮುಖರ್ಜಿಯನ್ನು ಆರಿಸಿದ್ದೇಕೆ? ಮುಖರ್ಜಿ ಮತ್ತು ಅಹ್ಲುವಾಲಿಯ ಹೇಗೆ ಹೊಂದಿಕೊಂಡು ಹೋಗುತ್ತಾರೆ? ಅಹ್ಲುವಾಲಿಯಾಗೆ ತನ್ನ ಹುದ್ದೆಯಲ್ಲಿ ಉಳಿದಿರುವುದಕ್ಕೆ ಏನನಿಸುತ್ತಿದೆ? ಅವರು ಯಾವ ಅಜೆಂಡಾ ಐಟಂನ್ನು ಮುಂದೊತ್ತುತ್ತಿದ್ದಾರೆ? ಪ್ರಧಾನಮಂತ್ರಿಗಳೊಂದಿಗೆ ಚೆನ್ನಾಗಿ ಹೊಂದಿಕೊಂಡಿದ್ದಾರೆಯೇ?.........?

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂದರ್ಶನ

ಡಾ. ಎಮ್.ಎಸ್.ಸ್ವಾಮಿನಾಥನ್ ಭಾರತದ ಬಹುಮುಖ್ಯ ಕೃಷಿ ವಿಜ್ಞಾನಿಗಳು. ಹಸಿರು ಕ್ರಾಂತಿಗೆ ಅವರ ಕೊಡುಗೆ ಅಪಾರ. ಅವರು ರಾಷ್ಟ್ರೀಯ ಕೃಷಿ ಮಂಡಳಿಯ ಅಧ್ಯಕ್ಷರೂ ಹೌದು. ಈ ಸಲದ ಬಜೆಟ್ ನೋಡಿ ಅವರು ಬಹಳ ನೊಂದು ಬರೆದಿದ್ದಾರೆ. ಕೇಂದ್ರದ ಯುಪಿಎ ಸರ್ಕಾರ ಅಮೇರಿಕದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಎಂಬುದು ಅವರ ಕೊರಗು. ಇದು ಡಾ. ಎಮ್.ಎಸ್.ಸ್ವಾಮಿನಾಥನ್ ಅವರು ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆಗೆ ನೀಡಿದ ಸಂದರ್ಶನದ ಅನುವಾದ.

ಯುಪಿಎ 'ಹಸಿರು ಕ್ರಾಂತಿ' : ಬರೀ ಬಾಯುಪಚಾರದ ಬೊಗಳೆ

ನೊಂದುನುಡಿದ ಸ್ವಾಮಿನಾಥನ್

ಕನ್ನಡಕ್ಕೆ ಜಿ.ಎಸ್.ಮಣಿ





ಪ್ರ: ಕೇಂದ್ರದ ಈ ಸಾರಿಯ ಬಜೆಟ್ ಹೊಸ ನೆಲೆಗಳನ್ನು ತೋರುತ್ತಿದೆ ಎಂದು ನಿಮಗನಿಸುವುದಿಲ್ಲವೆ?

ಉ: ನನಗೆ ಈ ತರಹದ ಬಾಯುಪಚಾರದ ಮಾತುಗಳಿಂದ ಸಾಕಾಗಿ ಹೋಗಿದೆ. ಹಿಂದಿನ ಬಜೆಟ್ಟಿನಲ್ಲಿ ದ್ವಿದಳ ಧಾನ್ಯಗಳನ್ನು 60000 ಹಳ್ಳಿಗಳಲ್ಲಿ ಪ್ರೋತ್ಸಾಹಿಸುವ ಪ್ರಸ್ತಾಪವಿತ್ತು. ಆದರೆ ಇದಕ್ಕೆ ತೆಗೆದಿರಿಸಿದ ಹಣ ಎಷ್ಟು ಕಡಿಮೆ ಇತ್ತೆಂದರೆ ಪ್ರತಿ ಹಳ್ಳಿಗೆ ಬರೀ 50000 ರೂಪಾಯಿಗಳು ದೊರೆಯುತ್ತಿದ್ದವು. ಕಂಪನಿಗಳ ತೆರಿಗೆಗಳ ರೂಪದಲ್ಲಿ ಮೂರೂಮುಕ್ಕಾಲು ಲಕ್ಷ ಕೋಟಿ ರೂಪಾಯಿಗಳನ್ನು ಬಿಟ್ಟುಕೊಟ್ಟು ಎರಡನೇ ಹಸಿರು ಕ್ರಾಂತಿಗಾಗಿ ಬರೀ ಮುನ್ನೂರು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಇದು ಬಾಯುಪಚಾರವಲ್ಲದೆ ಇನ್ನೇನು?

ಪ್ರ: ನೀವು ಜವಾಹರಲಾಲ್ ನೆಹರು ಮತ್ತು ಇಂದಿರಾಗಾಂಧಿಯವರುಗಳ ವ್ಯವಸ್ಥಾಪನೆಗಳ ಭಾಗವಾಗಿದ್ದವರು. ಕೃಷಿ ಕಾರ್ಯದರ್ಶಿಯೂ ಆಗಿದ್ದವರು. ಅಂದಿನ ಸರ್ಕಾರಗಳಿಗೂ ಇಂದಿನ ಸರ್ಕಾರಗಳಿಗೂ ಇರುವ ವ್ಯತ್ಯಾಸವೇನು?

ಉ: ಅಂದಿಗೂ ಇಂದಿಗೂ ಅಜಗಜಾಂತರ ವಿದೆ. ದೇಶ ಅಪಾರ ಒತ್ತಡದಲ್ಲಿತ್ತು. ನಾವು 10 ದಶಲಕ್ಷ ಟನ್ನುಗಳಷ್ಟು ಗೋಧಿಯನ್ನು ಆಮದು ಮಾಡಿಕೊಳ್ಳುತ್ತಿದ್ದೆವು. ಅಂದಿನ ನಮ್ಮ ಜನಸಂಖ್ಯೆ 45 ಕೋಟಿ. ಹಲವರು ಭಾರತ ಉಳಿಯುವುದಿಲ್ಲ. ಕಸಾಯಿಖಾನೆಯಲ್ಲಿ ಕುರಿಗಳು ಸಾಯುವಂತೆ ಭಾರತೀಯರು ಸಾಯುತ್ತಾರೆ ಎಂದು ಬರೆದರು. ಭಾರತವನ್ನು ಸ್ವಾವಲಂಬಿ ಮಾಡಬೇಕೆಂಬ ಛಲ ಅಂದು ಇತ್ತು. ಈಗ ಅದೆಲ್ಲ ಹೊರಟುಹೋಗಿದೆ.

ಪ್ರ: ಪ್ರಧಾನಮಂತ್ರಿಗಳು ಮತ್ತು ಆರ್ಥಿಕ ಸರ್ವೇಕ್ಷಣೆ ಎರಡನೇ ಹಸಿರು ಕ್ರಾಂತಿಯ ಬಗೆಗೆ ಇನ್ನಿಲ್ಲದ ಹುರುಪಿನಿಂದ ಮಾತನ್ನಾಡಿದ್ದಾರಲ್ಲ. ಹೀಗಿರುವಾಗ ಸಮಸ್ಯೆಯೇನು?

ಉ: ಅವರ ಗುರಿ ವಿದೇಶಿ ಕಂಪನಿಗಳನ್ನು ಬರಮಾಡಿಕೊಳ್ಳುವುದು. ಚಿಲ್ಲರೆ ಮಾರಾಟದ ವಲಯವನ್ನು ವಾಲ್ ಮಾರ್ಟ್ ಮತ್ತು ಇತರರಿಗೆ ವಹಿಸಿಕೊಡುವುದೇ ಅವರ ಉದ್ದೇಶ. ಈ ಕಂಪನಿಗಳಿಗೆ ಅಧಿಕಾರದಲ್ಲಿರುವವರು -ಮೊಂಟೆಕ್ ಸಿಂಗ್ ಆಹ್ಲುವಾಲಿಯಾ ಮತ್ತು ಇತರರು- ನಿಲುಕುವಂತಿದ್ದಾರೆ. ಈ ದೇಶದಲ್ಲಿ ಚಿಲ್ಲರೆ ಮಾರಾಟಗಾರರು ಮತ್ತು ಸಣ್ಣ ವ್ಯವಸಾಯಗಾರರು ಅತ್ಯಂತ ದೊಡ್ಡ ಉದ್ಯೋಗ ನೀಡುವವರು ಎಂಬುದನ್ನು ಅವರು ನೋಡುತ್ತಿಲ್ಲ. ಇವರ ಜೀವನವನ್ನು ಕಂಪನಿ ಕೃಷಿಯ ಹೆಸರಿನಲ್ಲಿ ಹಾಳು ಮಾಡುವುದಾದರೆ ನಾವು ಮಾತನಾಡುತ್ತಿರುವುದಾದರೂ ಏನನ್ನು? ಇಂದು ಸಾರ್ವಜನಿಕ ನೀತಿ ತನ್ನನ್ನು ರೈತಪರ ಎಂದು ಬಿಂಬಿಸಿಕೊಳ್ಳುತ್ತಿದೆ ಆದರೆ ಅದು ಮಾಡುತ್ತಿರುವುದೆಲ್ಲ ಕಾಟಾಚಾರಕ್ಕಾಗಿ.

ಪ್ರ: ಅಂದರೆ ಇನ್ನೊಂದು ಹಸಿರು ಕ್ರಾಂತಿ ಆಗುವುದೆಂದು ನೀವು ನಂಬುವುದಿಲ್ಲ?

ಉ: ಖಂಡಿತವಾಗಿಯೂ ಇಲ್ಲ. ಇನ್ನೊಂದು ಹಸಿರು ಕ್ರಾಂತಿ ಆಗಲು ಘಟಕಗಳು ಬೇಕಾಗುತ್ತವೆ: ತಂತ್ರಜ್ಞಾನ-ಇಳುವರಿಯ ನೆಗೆತವನ್ನು ಸಾಧ್ಯಗೊಳಿಸುತ್ತದೆ; ವಿದ್ಯುತ್ ಮತ್ತು ನೀರಿನಂತಹ ಸೇವೆಗಳು; ಸಾರ್ವಜನಿಕ ನೀತಿಯ ಮೂಲಕ ಸೃಜಿಸಿದ ಮಾರುಕಟ್ಟೆ ಮತ್ತು ಕೊನೆಯದಾಗಿ ರೈತರ ಉತ್ಸಾಹ. ಕೊನೆಯದು ಅತೀ ಮುಖ್ಯ ಘಟಕ ಆದರೆ ಅದು ಇಲ್ಲವೆ ಇಲ್ಲ. ಆದ್ದರಿಂದ ಎರಡನೇ ಹಸಿರು ಈ ದೇಶದಲ್ಲಿ ಆಗುವುದಿಲ್ಲ. ಎನ್ ಎಸ್ಸೆಸ್ಓ ಸರ್ವೇಕ್ಷಣೆಯ ಪ್ರಕಾರ ಅವಕಾಶ ಸಿಕ್ಕರೆ ಭಾರತದ ಶೇ. 45 ರಷ್ಟು ವ್ಯವಸಾಯವನ್ನೇ ಬಿಡಲು ಬಯಸಿದ್ದಾರೆ. ಆ ರೈತರು ಕೃಷಿಯಲ್ಲಿ ಮುಂದುವರೆಯ ಬಯಸುವುದಿಲ್ಲ. ರೈತರ ಆದಾಯವನ್ನು ಹೆಚ್ಚಿಸುವ ಮೂಲಕ ಅವರ ಉತ್ಸಾಹ ಹೆಚ್ಚಿಸುವ ಯಾವುದೆ ಕ್ರಮಗಳು ಈ ಬಜೆಟ್ಟಿನಲ್ಲಿ ಇಲ್ಲ. ರಾಷ್ಟ್ರೀಯ ರೈತ ಮಂಡಳಿ "ಮಹಿಳಾ ಸಶಕ್ತೀಕರಣ ಯೋಜನೆ" ಯೊಂದನ್ನು ಪ್ರಾರಂಭಿಸಲು ಸೂಚಿಸಿತ್ತು. ಬಜೆಟ್ಟು ಅದನ್ನು ಕೈಬಿಟ್ಟಿದೆ.

ಪ್ರ: ಸುಶಿಕ್ಷಿತ ಯುವಜನರು ಹಳ್ಳಿಗಳಲ್ಲಿ ಉಳಿದು ವ್ಯವಸಾಯದಲ್ಲಿ ಮುಂದುವರೆಯಲು ಬಯಸುವುದಿಲ್ಲ. ನಮ್ಮ ಶಿಕ್ಷಣದಲ್ಲೆ ನ್ಯೂನತೆ ಇದೆಯೆ ಅಥವಾ ಕೃಷಿಯಲ್ಲಿ ನ್ಯೂನತೆ ಇದೆಯೆ?

ಉ: ಹಳ್ಳಿಗಳಲ್ಲಿ ಕೃಷಿಯೇತರ ಆದಾಯ ಮೂಲಗಳೂ ಇರಬೇಕು. ಆಗ ಮಾತ್ರ ಯುವಜನರು ಹಳ್ಳಿಗಳಿಂದ ಪಟ್ಟಣಗಳಿಗೆ ಗುಳೆ ಹೋಗುವುದು ನಿಲ್ಲುತ್ತದೆ. ಕೃಷಿ ಮತ್ತು ಕೃಷಿಯೇತರ ವಲಯಗಳು ಹಳ್ಳಿಗಳಲ್ಲಿ ಒಂದಕ್ಕೊಂದು ಆತುಕೊಂಡು ಹಳ್ಳಿಗಳನ್ನು ಶ್ರೀಮಂತವಾಗಿಡಿಸಬೇಕು. ಯುವಜನರು ಶೇಖರಣೆ, ಸಂಸ್ಕರಣೆಯಂತಹ "ಹೊಲದಿಂದ ಊಟದ ತಟ್ಟೆಗೆ" ಸೇವೆಗಳ ಮೂಲಕ ಹಳ್ಳಿಗಳ ಮಾರ್ಪಾಡು ಕೇಂದ್ರಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಪ್ರತಿ ಹಳ್ಳಿಯಲ್ಲೂ ಇಂತಹ ಕೇಂದ್ರಗಳಿದ್ದು ಅವುಗಳಿಗೆ ಬ್ಯಾಂಕು ಸಾಲ ದೊರೆಯುವಂತಿದ್ದರೆ ಯುವಜನರು ಹಳ್ಳಿಗಳನ್ನೇಕೆ ತೊರೆಯುತ್ತಾರೆ?

ಪ್ರ: ಚೀನಾ ಸಹ ಹಳ್ಳಿಗಳಿಗೆ ಉದ್ದಿಮೆಗಳನ್ನು ತಂದಿದೆ.....

ಉ: ಇಲ್ಲ. ಎಂಬತ್ತರ ಚೀನೀ ಮಾದರಿಯೇನೆಂದರೆ ಕೃಷಿ ಉತ್ಪಾದಕತೆಯ ಜೊತೆಗೆ ಕೃಷಿಯೇತರ ಆದಾಯವನ್ನು ತಳಕು ಹಾಕಿದ್ದು. ಹಳ್ಳಿ-ಪಟ್ಟಣ ಉದ್ದಿಮೆಗಳು ಅವರಿಗೆ ಇದನ್ನು ಸಾಧ್ಯಗೊಳಿಸಲು ನೆರವಾದವು.

ಪ್ರ: ನೀವು ರಾಷ್ಟ್ರೀಯ ರೈತರ ಮಂಡಳಿಗಾಗಿ ತಯಾರಿಸಿದ ವರದಿ ಯಾವುದೇ ಬಳಕೆಯಾಗುತ್ತಿಲ್ಲ. ನಿಮಗೆ ನಿರಾಸೆ ಮೂಡಿಲ್ಲವೆ? ಸಿಟ್ಟು ಬರುತ್ತಿಲ್ಲವೆ?

ಉ: ನನಗೆ ಸದಾಕಾಲ ನಿರಾಸೆ ಕಾಡುತ್ತಿದೆ. ಎಷ್ಟೊಂದು ಕೆಲಸ ಮಾಡಬಹುದು. ಆದರೆ ಯಾವುದೂ ಆಗುತ್ತಿಲ್ಲ. ಆಗುತ್ತಿರುವುದೆಂದರೆ ಆದರ್ಶ ಸೊಸೈಟಿ ಮತ್ತು ಕಪ್ಪು ಹಣದ ಹಗರಣಗಳು. ಈ ದೇಶದಲ್ಲಿ ದುರಾಸೆಯ ಕ್ರಾಂತಿಯೇ ಆಗುತ್ತಿರುವುದರಿಂದ ಎರಡನೆ ಹಸಿರು ಕ್ರಾಂತಿ ಆಗುವುದಿಲ್ಲ.

ಪ್ರಶ್ನೆ: ಕೃಷಿ ಭೂಮಿಯ ಮೇಲೆ ಆಕ್ರಮಣ ಸದಾಕಾಲ ಆಗುತ್ತಿದೆ. ಕೃಷಿ ಭೂಮಿಯ ಮೇಲಿನ ಆಕ್ರಮಣ ತಡೆಯಲು ಯಾವುದೇ ಕಾನೂನು ಇರುವಂತೆ ಕಾಣುವುದಿಲ್ಲ. ಅಲ್ಲವೇ?

ಉ: ಇಂದು ಭೂಮಿ ಕುಗ್ಗುತ್ತಿರುವ ಆಸ್ತಿ. ಅದು ಮನೆ ಕಟ್ಟಲು ಬೇಕು, ರಸ್ತೆಗೆ ಬೇಕು. ಎಲ್ಲದಕ್ಕೂ ಬೇಕು. ಮುಖ್ಯ ಕೃಷಿಯ ಭೂಮಿಯ ಸಂರಕ್ಷಣೆ ಆಗಬೇಕು. ಹಿಂದೆ ಮೊರಾರ್ಜಿ ದೇಸಾಯಿಯವರು ಉಪಪ್ರಧಾನಿ ಮತ್ತು ಹಣಕಾಸು ಮಂತ್ರಿಯಾಗಿದ್ದಾಗ ನಾವು ಗೋಧಿಯ ಶೇಖರಣೆಯ ಬಗ್ಗೆ, ಗೋಧಾಮುಗಳ ಬಗ್ಗೆ ಚರ್ಚಿಸುತ್ತಿದ್ದೆವು. ಅಂದು ಬಂದರುಗಳ ಬಳಿ ಮಾತ್ರ ಗೋಧಾಮುಗಳಿದ್ದವು. ಬಂದರುಗಳಿಂದ ಬಾಯಿಗೆ ಎಂಬ ಪರಿಸ್ಥಿತಿ ಇತ್ತು. ಎಲ್ಲೆಡೆ ಗೊಧಾಮುಗಳನ್ನು ಕಟ್ಟಬೇಕೆಂಬುದು ಅವರ ಆಸೆಯಾಗಿತ್ತು.

ಅವರು ಒಂದು ಸಭೆ ಕರೆದು ಗೋಧಾಮುಗಳನ್ನು ಬಂಜರು ಭೂಮಿಗಳಲ್ಲಿ ಮಾತ್ರ ಕಟ್ಟಬೇಕೆಂದು ಹೇಳಿದರು. ಕೃಷಿ ಭೂಮಿಯನ್ನು ಸಂರಕ್ಷಿಸುವ ಬಗ್ಗೆ ಅವರಿಗೆ ಅಂತಹ ಸೂಕ್ಷ್ಮಜ್ಞತೆ ಇತ್ತು. ಅವರು ಪ್ರಧಾನ ಮಂತ್ರಿಯಾದಾಗ ನನ್ನನ್ನು ಕರೆದು "ಕೃಷಿ ತಿಳಿದವರು ದೇಶದ ಕೃಷಿ ಕಾರ್ಯದರ್ಶಿಯಾಗಬೇಕು" ಎಂದು ನನ್ನನ್ನು ಪ್ರಥಮ (ಮತ್ತು ಕೊನೆಯ) ಐಎಎಸ್ಸೇತರ ಕೃಷಿ ಕಾರ್ಯದರ್ಶಿಯನ್ನಾಗಿ ಮಾಡಿದರು.

ಪ್ರ: ಕೃಷಿ ಬೆಲೆಗಳು ಮತ್ತು ವೆಚ್ಚಗಳ ಮಂಡಳಿಯ ಇಂದಿನ ಅಧ್ಯಕ್ಷರಾದ ಶ್ರೀ ಗುಲಾಟಿಯವರೂ ಅಧಿಕಾರಶಾಹಿಯಲ್ಲ. ಆದರೆ ಅವರ ಮತ್ತು ನಿಮ್ಮ ವಿಚಾರಗಳು ಬೇರೆ ಬೇರೆಯಾಗಿವೆ. ಅವರು ರೈತರ ಲಾಭವು ಮಾರುಕಟ್ಟೆಯಿಂದ ಬರಬೇಕು ಎನ್ನುತ್ತಾರೆ. ನೀವು ರೈತರ ಉತ್ಪಾದನಾ ವೆಚ್ಚ ಮತ್ತು ಶೇ 50 ರಷ್ಟು ಲಾಭವನ್ನು ಕನಿಷ್ಠ ಬೆಂಬಲ ಬೆಲೆಯ ರೂಪದಲ್ಲಿ ಕೊಡಬೇಕು ಎನ್ನುತ್ತೀರಿ?

ಉ: ಗುಲಾಟಿಯವರ ನೇಮಕಾತಿಯೂ ಕೇಂದ್ರ ನಿರೀಕ್ಷಣಾ ಕಮಿಷನರ್(ಸಿವಿಸಿ) ಅವರ ನೇಮಕದಂತೆ ಗಂಭೀರ ಪ್ರಮಾದ. ಇದು ಕೃಷಿಗೆ ಮತ್ತು ಅದಕ್ಕಿಂತ ಮುಖ್ಯವಾಗಿ ರೈತರಿಗೆ ಒಳಿತುಂಟು ಮಾಡುವ ನಿರ್ಧಾರವಲ್ಲ. ಸರ್ಕಾರದಲ್ಲಿ ಅಮೇರಿಕ ಪರವಾದ ಆಸಕ್ತಿಗಳ ಮೇಲುಗೈ ಇದೆ. ದುರಂತವೆಂದರೆ ಇವರಿಗೆ ಕೃಷಿಯ ಮಾನವೀಯ ಸಂಬಂಧ ಅರ್ಥವಾಗುವುದಿಲ್ಲ.

ಪ್ರ: ಕೃಷಿಯಲ್ಲಿ ಮುಂದುವರೆಯುತ್ತಲೇ ಇರುವ ಬಿಕ್ಕಟ್ಟಿಗೆ ನಿಮ್ಮ ಪರಿಹಾರ ಸೂತ್ರವೇನು?

ಉ: ಕೃಷಿ ವರಮಾನದ ಲಾಭದಾಯಕತೆಯತ್ತ ಗಮನ ನೀಡುವುದು ಅವಶ್ಯ. ಕೃಷಿಯ ಬೆಳವಣಿಗೆಯನ್ನು ಕೃಷಿ ಕುಟುಂಬಗಳ ವರಮಾನದ ಲೆಕ್ಕದಲ್ಲಿ ಮಾಡಬೇಕು. ಅಲ್ಲದೆ ಕೃಷಿ ಉತ್ಪಾದಕತೆ ಹೆಚ್ಚಿಸುವಲ್ಲಿ ಸಮಗ್ರ ಯೋಜನೆ ರೂಪಿಸಿ ಕೃಷಿಯೇತರ ಆದಾಯವೂ ಹೆಚ್ಚುವಂತೆ ಮಾಡಬೇಕು. ಗ್ರಾಮೀಣ ಪ್ರದೇಶಗಳ ಯುವಶಕ್ತಿ ಬಳಸಿ ಕೊನೆಯಿಂದ ಕೊನೆಯವರೆಗಿನ ಸೇವೆಗಳನ್ನು ಬೆಳೆಸಬೇಕು (ಉದಾಹರಣೆಗೆ: ಹೊಲದಿಂದ ಊಟದ ತಟ್ಟೆಯವರೆಗೆ, ಇತ್ಯಾದಿ). ಇಂತಹ ಕ್ರಮಗಳು ಕೃಷಿಯನ್ನು ಲಾಭದಾಯಕ ವಾಗಿರಿಸಿ ರೈತಾಪಿ ಕೆಲಸ ಅರ್ಥಪೂರ್ಣವಾಗುವಂತೆ ಮಾಡುತ್ತದೆ.

ಪುಟ 15 ಕ್ಕೆ

ಬೆಲೆ ಏರಿಕೆ - ಭ್ರಷ್ಟಾಚಾರದ ವಿರುದ್ಧ ತೀವ್ರ ಆಂದೋಲನ

ಸಿಪಿಐ(ಎಂ) ಕೇಂದ್ರ ಸಮಿತಿ ತೀರ್ಮಾನಗಳು

ಮಾರ್ಚ್ 4 ಮತ್ತು 5ರಂದು ನವದೆಹಲಿಯಲ್ಲಿ ಸಿಪಿಐ(ಎಂ)ನ ಕೇಂದ್ರ ಸಮಿತಿ ನಡೆಯಿತು. ಈ ಸಭೆಯಲ್ಲಿ ಕೈಗೊಂಡ ಕೆಲವು ಮಹತ್ವದ ತೀರ್ಮಾನಗಳ ಬಗ್ಗೆ ಈ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ

ವಿಧಾನಸಭಾ ಚುನಾವಣೆಗಳು

ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ಮತ್ತು ಪಾಂಡಿಚೇರಿ ವಿಧಾನಸಭಾ ಚುನಾವಣೆಗಳಿಗೆ ಸಿಪಿಐ(ಎಂ) ಪಕ್ಷ ನಡೆಸಿದ ಸಿದ್ಧತೆಗಳ ಬಗ್ಗೆ ಸಂಬಂಧಪಟ್ಟ ರಾಜ್ಯ ಸಮಿತಿಯ ವರದಿಯ ಆಧಾರದಲ್ಲಿ ಸಮಾಲೋಚನೆಯನ್ನು ಮಾಡಲಾಯಿತು. ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದು ದೇಶದಲ್ಲೇ ಮಾದರಿಯಾದ ಆಡಳಿತ ನೀಡಿರುವ ಪಶ್ಚಿಮ ಬಂಗಾಳದಲ್ಲಿ ಎಡರಂಗ ಹಾಗೂ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗಕ್ಕೆ ಅಭೂತಪೂರ್ವ ಗೆಲುವು ದೊರಕಿಸಿಕೊಡುವಂತೆ ಉಭಯ ರಾಜ್ಯಗಳ ಜನತೆಗೆ ಕೇಂದ್ರ ಸಮಿತಿ ಕರೆ ನೀಡಿದೆ.

ಇದೇ ವೇಳೆ, ತಮಿಳುನಾಡು, ಅಸ್ಸಾಂ ಮತ್ತು ಪಾಂಡಿಚೇರಿಗಳಲ್ಲಿ ಅನುಸರಿಸಬೇಕಾದ ಚುನಾವಣಾ ಕಾರ್ಯತಂತ್ರಕ್ಕೆ ಕೇಂದ್ರ ಸಮಿತಿ ತನ್ನ ಅನುಮೋದನೆಯನ್ನು ನೀಡಿದೆ

ಕಾಂಗ್ರೆಸ್, ತೃಣಮೂಲ್ ಕಾಂಗ್ರೆಸ್ ಮತ್ತು ಯುಡಿಎಫ್‌ನ ಕೇಂದ್ರ ಸರ್ಕಾರ ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಿದೆ. ಬೆಲೆ ಏರಿಕೆ, ವ್ಯಾಪಕ ಭ್ರಷ್ಟಾಚಾರಗಳು ತಾಂಡವವಾಡುತ್ತಿದ್ದು, ಜನರ ಬದುಕು ಅಸಹನೀಯವಾಗಿದೆ. ಇದರಿಂದಾಗಿ ಈ ಪಕ್ಷಗಳು ಚುನಾವಣೆಯಲ್ಲಿ ಸೋಲಬೇಕಾದ ಅಗತ್ಯವಿದೆ. ದೇಶದಲ್ಲಿ ಸದಾ ದುಡಿಯುವ ವರ್ಗದ ಪರ, ಅದರ ಹೋರಾಟಗಳಿಗೆ ಬೆಂಬಲವಾಗಿ ನಿಂತಿರುವ ಎಡಪಕ್ಷಗಳು ಈ ನಿರ್ಣಾಯಕ ಸಮರದಲ್ಲಿ ಗೆಲುವು ಸಾಧಿಸಬೇಕಾಗಿದೆ.

ಕೇಂದ್ರ ಬಜೆಟ್

ಯುಪಿಎ ಸರ್ಕಾರ ಅನುಸರಿಸುತ್ತಿರುವ ನವ ಉದಾರೀಕರಣದ ನೀತಿಗಳನ್ನು ಕೇಂದ್ರ ಬಜೆಟ್ ಅನಾವರಣಗೊಳಿಸಿದೆ. ಹಣದುಬ್ಬರ, ಬೆಲೆ ಏರಿಕೆ ಹಾಗೂ ತೈಲ ಬೆಲೆ ಮುಂತಾದ ಗಂಭೀರ ಸಮಸ್ಯೆಗಳಿಗೆ ಉತ್ತರ ಹುಡುಕುವಲ್ಲಿ ಬಜೆಟ್ ದಯನೀಯ ವೈಫಲ್ಯ ಕಂಡಿದೆ. ತೈಲ ಉತ್ಪನ್ನಗಳ ಮೇಲಿನ ಅಬಕಾರಿ ಮತ್ತು ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಲು ನಿರಾಕರಿಸಲಾಗಿದೆ. ಅಂತಾರಾಷ್ಟ್ರೀಯ ತೈಲ ಬೆಲೆಯಲ್ಲಿ ಏರಿಕೆಯಾದಾಗ ದೇಶದಲ್ಲೂ ತೈಲ ಬೆಲೆ ಏರಿಕೆಗೆ ಕಾರಣವಾಗುವ ವ್ಯವಸ್ಥೆಯನ್ನು ಮುಂದುವರಿಸಲು ಬಜೆಟ್ ಸ್ಪಷ್ಟ ಸೂಚನೆಯನ್ನು ನೀಡಿದೆ. ಆಹಾರ ಧಾನ್ಯಗಳು ಹಾಗೂ ತೈಲ ಬೆಲೆಯಲ್ಲಾಗುವ ನಿರಂತರ ಏರಿಕೆಗಳನ್ನು ತಡೆಯಲು ಬಜೆಟ್‌ನಲ್ಲಿ ಯಾವುದೇ ಕ್ರಮಗಳನ್ನು ಪ್ರಸ್ತಾಪಿಸಿಲ್ಲ. 20 ಸಾವಿರ ಕೋಟಿ ರೂಪಾಯಿಗಳ ರಸಗೊಬ್ಬರ ಸಬ್ಸಿಡಿ ಕಡಿತ ಜನರ ಮೇಲೆ ಮತ್ತೊಂದು ದೊಡ್ಡ ಹೊರೆಯನ್ನು ಹಾಕಿದೆ.

ಸಬ್ಸಿಡಿಗೆ ಬದಲಾಗಿ ಪ್ರಸ್ತಾಪಿಸಲಾದ ನೇರ ಹಣದ ವರ್ಗಾವಣೆ ಮತ್ತಷ್ಟು ಬೆಲೆ ಏರಿಕೆಯ ಸಾಧ್ಯತೆಗೆ ದಾರಿಮಾಡಿಕೊಟ್ಟಿದೆ. ತೈಲ ಮತ್ತು ಆಹಾರದ ಸಬ್ಸಿಡಿ ವ್ಯಾಪ್ತಿಯಲ್ಲಿ ದೊಡ್ಡ ಜನವಿಭಾಗ ಈ ವ್ಯಾಪ್ತಿಯಿಂದ ಹೊರತಳ್ಳಲ್ಪಡಲಿದ್ದಾರೆ. ಈ ಪ್ರಕ್ರಿಯೆಯಿಂದ ಸಾರ್ವಜನಿಕ ವಿತರಣ ವ್ಯವಸ್ಥೆ ಸಂಪೂರ್ಣ ಹಾಳುಗೆಡವಲಿದೆ. ಜನತೆ ಅನಿವಾರ್ಯವಾಗಿ ಖಾಸಗಿ ಹಾಗೂ ಮುಕ್ತ ಮಾರುಕಟ್ಟೆಗೆ ತಳ್ಳಲ್ಪಡುತ್ತಾರೆ. ಅಲ್ಲಿ ಬೆಲೆಗಳು ಗಗನಕ್ಕೇರುತ್ತದೆ. ಆದರೆ, ನಗದೀಕರಿಸುವ ಸಬ್ಸಿಡಿ ಪ್ರಮಾಣ ಮಾತ್ರ ಇದ್ದಷ್ಟೇ ಇರುತ್ತದೆ. ಇನ್ನು ನಗದೀಕರಿಸುವ ಸಬ್ಸಿಡಿ ಯೋಜನೆಯಲ್ಲಿ ಕೇವಲ ಬಿಪಿಎಲ್ ಪಟ್ಟಿಯಲ್ಲಿದ್ದವರಿಗೆ ಮಾತ್ರ ಅವಕಾಶ. ಹಾಗಾಗಿ ಜಮೀನುದಾರರು ಮತ್ತು ಕೃಷಿ ಭೂಮಿ ಹೊಂದಿದ ಅಸಂಖ್ಯಾತ ಎಪಿಎಲ್ ಕುಟುಂಬಗಳು ಈ ಯೋಜನೆ ವ್ಯಾಪ್ತಿಯಿಂದ ಹೊರದಬ್ಬಲ್ಪಡಲಿದ್ದಾರೆ.

ಇದೇ ಬಜೆಟ್ ಕಾರ್ಪೋರೇಟ್‌ಗಳಿಗೆ ಅನೇಕ ರಿಯಾಯಿತಿಗಳನ್ನು ಪ್ರಕಟಿಸಿದೆ. ಕಾರ್ಪೋರೇಟ್ ವಲಯದ ಮೇಲ್ತೆರಿಗೆಯಲ್ಲಿ ದೊಡ್ಡ ಪ್ರಮಾಣದ ಕಡಿತ ಘೋಷಣೆಯಾಗಿದೆ. 2010-11ರಲ್ಲಿ ವಿನಾಯಿತಿ ಪಡೆದ ಕಾರ್ಪೋರೇಟ್ ತೆರಿಗೆ ಪ್ರಮಾಣ 88 ಸಾವಿರ ಕೋಟಿ ರೂಪಾಯಿಗಳು. ಇದೇ ಅವಧಿಯಲ್ಲಿ ಬಂಡವಾಳ ಹಿಂತೆಗೆತದಿಂದ ಸರ್ಕಾರ ನಿರೀಕ್ಷೆ ಮಾಡಿದ್ದ ಸಂಪನ್ಮೂಲದ ಗುರಿ 40 ಸಾವಿರ ಕೋಟಿ ರೂಪಾಯಿಗಳು.

ಬಜೆಟ್‌ನಲ್ಲಿ ಮಹಿಳೆಯರು, ಅಲ್ಪಸಂಖ್ಯಾತರು, ದಲಿತರು, ಬುಡಕಟ್ಟು ಆದಿವಾಸಿಗಳ ಕಲ್ಯಾಣಕ್ಕೆ ಮೀಸಲಿರಿಸಿದ ಹಣದಲ್ಲೂ ದೊಡ್ಡ ತಾರತಮ್ಯವಾಗಿವೆ. ವೈದ್ಯಕೀಯ ಪರೀಕ್ಷೆ ಮತ್ತು ಆಸ್ಪತ್ರೆಗಳಲ್ಲಿನ ವೆಚ್ಚಕ್ಕೆ ಶೇಕಡಾ 5ರಷ್ಟು ಸೇವಾ ತೆರಿಗೆ ವಿಧಿಸಿರುವುದು ಸಾಮಾನ್ಯ ಜನರಿಗೆ ಆರೋಗ್ಯ ಮತ್ತಷ್ಟು ದುಬಾರಿಯಾಗುವಂತೆ ಮಾಡುತ್ತದೆ.

ಜನರ ಮೇಲೆ ಮತ್ತಷ್ಟು ಭಾರ ಹಾಕುವ ಬಜೆಟ್‌ನ ಹಲವು ಅಂಶಗಳನ್ನು ಕೇಂದ್ರ ಸಮಿತಿ ವಿರೋಧಿಸುತ್ತದೆ. ಇದರ ವಿರುದ್ಧ ಜನರಿಗೆ ತಿಳುವಳಿಕೆ ನೀಡಿ-ಹೋರಾಟಕ್ಕೆ ಅಣಿನೆರೆಸಲು ತಯಾರಿ ನಡೆಸಲಿದೆ.

ಬೆಲೆ ಏರಿಕೆ

ಜನವರಿ 2011ರಲ್ಲಿ ಆಹಾರದ ಹಣದುಬ್ಬರ ದರ 15.67ರಷ್ಟು ಇತ್ತು. 2010 ಜನವರಿಯಿಂದ 2011ರ ಜನವರಿ ವರೆಗೆ ಹಣದುಬ್ಬರ ದರ ಶೇಕಡಾ 15ರಷ್ಟು ಏರಿಕೆಯಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಇದು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹಣದುಬ್ಬರವನ್ನು ನಿಯಂತ್ರಣ ಮಾಡುವಲ್ಲಿ ವಿಫಲವಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಕೇಂದ್ರ ಸರ್ಕಾರ ನವ ಉದಾರೀಕರಣದ ನೀತಿಗಳನ್ನು ಅನುಸರಿಸುತ್ತಿದೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅನುಮತಿ ನೀಡುತ್ತಿದೆ. ಪಡಿತರ ವ್ಯವಸ್ಥೆಯಲ್ಲಿ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ನೀಡುವ ಬದಲು ನೇರ ಹಣ ಪಾವತಿಯ ಹೊಸ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಈ ಕ್ರಮಗಳನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ. ಕೃಷಿ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಆರಂಭಿಸಿ ಮತ್ತಷ್ಟು ಗಟ್ಟಿಗೊಳಿಸಲು ಸರ್ಕಾರ ಮುಂದಾಗಬೇಕು ಎಂದು ಪಕ್ಷ ಒತ್ತಾಯಿಸುತ್ತದೆ.

ಭ್ರಷ್ಟಾಚಾರದ ವಿರುದ್ಧ ಹೋರಾಟ

ಸಂಸತ್ತಿನಲ್ಲಿ ಮತ್ತು ಸಂಸತ್ತಿನ ಹೊರಗೆ ಪ್ರತಿಪಕ್ಷಗಳು ನಡೆಸಿದ ಸುದೀರ್ಘ ಹೋರಾಟಕ್ಕೆ ಕೊನೆಗೂ ತಲೆಬಾಗಿರುವ ಕೇಂದ್ರ ಸರ್ಕಾರ, 2ಜಿ ಹಗರಣದ ತನಿಖೆಗೆ ಜಂಟಿ ಸಂಸದೀಯ ಸಮಿತಿಯನ್ನು ರಚಿಸುವ ಒತ್ತಾಯಕ್ಕೆ ಮಣಿದಿದೆ. ಕಾನೂನುಬಾಹಿರವಾಗಿ ಲೈಸನ್ಸ್‌ಗಳನ್ನು ಪಡೆದ ಟೆಲಿಕಾಂ ಕಂಪೆನಿಗಳನ್ನೂ ತೀವ್ರ ತನಿಖೆಗೊಳಪಡಿಸಬೇಕಾಗಿದೆ. ಅದು ಲೈಸನ್ಸ್ ಪಡೆಯಲು ಅನುಸರಿಸಿದ ತಂತ್ರಗಳ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿದೆ. ಇಂತಹ ಅಕ್ರಮ ಲೈಸನ್ಸ್‌ಗಳನ್ನು ಕೇಂದ್ರ ಸರ್ಕಾರ ಸಾರಾಸಗಟಾಗಿ ರದ್ದುಗೊಳಿಸಿ ಹೊಸ ಲೈಸನ್ಸ್ ಆಕ್ಷನ್‌ನಲ್ಲಿ ನೀಡಬೇಕು. ಈ ಮೂಲಕ ಸರ್ಕಾರಿ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ತುಂಬಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

ಆಂಟ್ರಿಕ್ಸ್-ದೇವಾಸ್ ಒಪ್ಪಂದದ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ. ಈಗ ತಡೆಹಿಡಿಯಲಾದ ಈ ಒಪ್ಪಂದ, ಎರಡು ಉಪಗ್ರಹಗಳ ಉಡಾವಣೆ ಮತ್ತು 70 ಮೆಗಾ ಹಟ್ಸ್ ಎಸ್ ಬ್ಯಾಂಡ್ ತರಂಗಾಂತರಂಗದ ಲೈಸನ್ಸ್ ನೀಡಿಕೆಯನ್ನು ಒಳಗೊಂಡಿದೆ.

ಕೇಂದ್ರ ವಿಚಕ್ಷಣ ದಳದ ಆಯುಕ್ತರಾಗಿ ಪಿ.ಜೆ. ಥಾಮಸ್ ಅವರ ನೇಮಕ ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದ್ದು, ಈ ನೇಮಕವನ್ನು ತಡೆಹಿಡಿಯುವಂತೆ ಸೂಚಿಸಿದೆ. ಈ ನೇಮಕ ಪ್ರಕ್ರಿಯೆಯಲ್ಲಿ ಪ್ರಧಾನ ಮಂತ್ರಿಯವರೇ ನೇರವಾಗಿ ಪಾಲ್ಗೊಂಡಿದ್ದಾರೆ. ಎ. ರಾಜಾ ಅಡಿಯಲ್ಲಿ ಟೆಲಿಕಾಂ ಸಚಿವಾಲಯದ ಮಾಜಿ ಕಾರ್ಯದರ್ಶಿ ಮತ್ತು ಆತನ ವಿರುದ್ಧ ತನಿಖೆ ಬಾಕಿ ಇರುವಾಗಲೇ ಆತನನ್ನು ಸಿವಿಸಿಯ ಹುದ್ದೆಗೆ ನೇಮಕ ಮಾಡಿದ ಬಗ್ಗೆ ಪ್ರಧಾನಿ ಇನ್ನಷ್ಟೇ ವಿವರಣೆ ನೀಡಬೇಕಾಗಿದೆ.

2ಜಿ ತರಂಗಾಂತರಂಗ ಹಗರಣ ಹಾಗೂ ಸಿವಿಸಿ ನೇಮಕ ವಿಚಾರದಲ್ಲಿ ಯುಪಿಎ ಸರ್ಕಾರ ನಡೆದುಕೊಂಡ ರೀತಿ, ಪ್ರಧಾನಿಯೇ ಭ್ರಷ್ಟಾಚಾರದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬ ಸ್ಪಷ್ಟ ಸಂಕೇತವನ್ನು ನೀಡಿದೆ. ಆದರೆ, ಇದನ್ನು ಮುಚ್ಚಿ ಹಾಕಲು ಸರ್ಕಾರ ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿದೆ.

ಕಪ್ಪುಹಣ

2011ರ ಬಜೆಟ್‌ನಲ್ಲಿ ಕಪ್ಪು ಹಣ ಮತ್ತು ಅಕ್ರಮ ನಿಧಿಯ ಹರಿವನ್ನು ತಡೆಯಲು ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಘೋಷಿಸಿಲ್ಲ. ಕಪ್ಪು ಹಣವನ್ನು ಬಯಲಿಗೆಳೆಯಲು, ಅದರಲ್ಲೂ ಮುಖ್ಯವಾಗಿ ಸ್ವಿಸ್ ಬ್ಯಾಂಕ್ ಮತ್ತು ಇತರ ತೆರಿಗೆ ಮುಕ್ತ ದೇಶಗಳಲ್ಲಿ ಸಂಗ್ರಹಿಸಿದ ಭಾರತೀಯ ಕರೆನ್ಸಿಯ ವಿವರ ತೆರೆದಿಟ್ಟು, ಈ ಹಣವನ್ನು ದೇಶಕ್ಕೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ವಿಶೇಷ ಅಭಿಯಾನವನ್ನು ಆರಂಭಿಸಬೇಕು. ಮಾರಿಷಸ್ ಜೊತೆ ಒಪ್ಪಂದ ಮಾಡಿಕೊಂಡು ಅವಳಿ ತೆರಿಗೆಯನ್ನು ತಪ್ಪಿಸಿ ಈ ಮಾರಿಷಸ್ ದಾರಿಯ ಉಪಯೋಗವನ್ನು ಮಾಡಿಕೊಳ್ಳಬೇಕು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಪಾರ್ಟಿಸಿಪೇಟರಿ ನೋಟ್ ಬಳಸುವುದನ್ನು ನಿರ್ಬಂಧಿಸಬೇಕು.

ಉಗ್ರವಾದಿ ಹಿಂದುತ್ವದ ಭಯೋತ್ಪಾದನೆ

ನ್ಯಾಯಾಲಯದ ಮುಂದೆ ಸ್ವಾಮಿ ಅಸೀಮಾನಂದನ ತಪ್ಪೊಪ್ಪಿಗೆ ಹಲವು ಸ್ಫೋಟಕ ಅಂಶಗಳನ್ನು ಬಯಲಿಗೆಳೆದಿದೆ. ಮಾಲೆಗಾಂವ್, ಅಜ್ಮೀರ್ ಷರೀಫ್, ಮೆಕ್ಕಾ ಮಸೀದಿ ಹಾಗೂ ಸಂಜೋತಾ ಎಕ್ಸ್‌ಪ್ರೆಸ್‌ನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಕೆಲವು ಉಗ್ರವಾದಿ ಹಿಂದುತ್ವ ಸಂಘಟನೆಗಳು ಭಾಗಿಯಾಗಿವೆ ಎಂಬ ಆಘಾತಕಾರಿ ವಿಷಯವನ್ನು ಅಸೀಮಾನಂದ ತನ್ನ ತಪ್ಪೊಪ್ಪಿಗೆಯಲ್ಲಿ ಹೇಳಿದ್ದಾನೆ. ಈ ಸ್ಫೋಟ ನಡೆಸಿರುವ ಉಗ್ರವಾಗಿ ಹಿಂದುತ್ವದ ಸಂಘಟನೆಗಳಲ್ಲಿ ತನ್ನದೇ ಸಂಘಟನೆಗಳ ನಾಯಕರು ಇಲ್ಲ ಎಂದು ಆರ್‌ಎಸ್‌ಎಸ್ ನಿರಾಕರಿಸುವಂತಿಲ್ಲ.

ಈ ಸ್ಫೋಟದ ಹಿಂದಿರುವ ಪೂರ್ಣಪ್ರಮಾಣದ ಜಾಲವನ್ನು ತನಿಖಾ ಸಂಸ್ಥೆಗಳು ಪತ್ತೆ ಹಚ್ಚಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇದೇ ವೇಳೆ, ಮಾಲೆಗಾಂವ್ ಸ್ಫೋಟಕ್ಕೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟ ಮುಗ್ಧ ಮುಸ್ಲಿಂ ಯುವಕರನ್ನು ಬಿಡುಗಡೆ ಮಾಡಬೇಕು. ಜೊತೆಗೆ ಅವರ ಅಕ್ರಮ ಬಂಧನಕ್ಕೆ ಸೂಕ್ತ ಪರಿಹಾರವನ್ನು ನೀಡಬೇಕು.

ಉಲ್ಫಾ ಮಾತುಕತೆ

ಉಲ್ಫಾ ಮತ್ತು ಅಸ್ಸಾಂ ಸರ್ಕಾರದ ನಡುವಿನ ಮಾತುಕತೆಗಳನ್ನು ಕೇಂದ್ರ ಸಮಿತಿ ಸ್ವಾಗತಿಸುತ್ತದೆ. ಇದೇ ರೀತಿ ಕೇಂದ್ರ ಸರ್ಕಾರವು ಅಸ್ಸಾಂ ಮತ್ತು ಮಣಿಪುರದಿಂದ ಕಾರ್ಯಾಚರಿಸುತ್ತಿರುವ ಉಗ್ರವಾಗಿ ಸಂಘಟನೆಗಳ ಜೊತೆ ಮಾತುಕತೆಗಳನ್ನು ಆರಂಭಿಸಬೇಕು.

ಮಹಿಳೆಯರ ವಿರುದ್ಧದ ದೌರ್ಜನ್ಯ

ಮಹಿಳೆಯರ ವಿರುದ್ಧ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಕೇಂದ್ರ ಸಮಿತಿ ತೀವ್ರ ಕಳವಳ ವ್ಯಕ್ತಪಡಿಸಿತು. ಸುದೀರ್ಘ ಅವಧಿಯಿಂದ ಬಾಕಿ ಇರುವ ಮಹಿಳಾ ದೌರ್ಜನ್ಯ ವಿರುದ್ಧದ ಕಾನೂನನ್ನು ಕೂಡಲೇ ಅಂಗೀಕಾರ ಮಾಡಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸುತ್ತದೆ. ಹಾಗೆಯೇ, ಮಹಿಳಾ ಮೀಸಲಾತಿ ಮಸೂದೆಗೆ ತಕ್ಷಣ ಸಂಸತ್ತಿನ ಅನುಮೋದನೆ ಪಡೆಯಬೇಕೆಂದು ಅದು ಒತ್ತಾಯಿಸಿದೆ.

ಪುಟ 11ಕ್ಕೆ

ಅಮೆರಿಕಾದ ಅಡಿಯಾಳಾಗುವ.....

ಪುಟ 8 ರಿಂದ

ಹೊರ ಬರಲಿದೆ.

ಇನ್ನೊಂದು ಕೇಬಲಿನಲ್ಲಿ ಅಮೆರಿಕನ್ ರಾಯಭಾರಿ 'ಯುಪಿಎ ದೊಡ್ಡ ಸಂಖ್ಯೆಯಲ್ಲಿ ಹಾಲಿ ಎಂಪಿಗಳನ್ನು ಸೇರಿಸಿಕೊಂಡಿದೆ..... ಅವರು ನಮ್ಮ ಸಾಮರಿಕ ಪಾಲುದಾರಿಕೆಯೊಂದಿಗೆ ತಮ್ಮ ಸಹಯೋಗವನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದಾರೆ' ಎಂದು ಟಿಪ್ಪಣಿ ಮಾಡಿದ್ದಾರೆ. 'ಅಧ್ಯಕ್ಷರ(ಜಾರ್ಜ್ ಬುಶ್) ಭೇಟಿಯ ಮೊದಲು ವಿದೇಶಿ ಧೋರಣೆಯ ತರಂಗಗಳೇರದಿರಲಿ ಎಂದು ಪ್ರಧಾನಿ ಸಿಂಗ್ ವಿದೇಶಾಂಗ ಖಾತೆಯನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ, ಸಂಸತ್ತಿನ ಮುಂದಿನ ಅಧಿವೇಶನ ಮುಗಿಯುವ ವರೆಗೆ ಮತ್ತು ಕಾಂಗ್ರೆಸ್ ಕೇರಳ ಮತ್ತು ಪಶ್ಚಿಮ ಬಂಗಾಲದಲ್ಲಿ ವಿಧಾನ ಸಭಾ ಚುನಾವಣೆಗಳನ್ನು ಸುರಕ್ಷಿತವಾಗಿ ದಾಟುವ ವರೆಗೆ ಅದನ್ನು ಇಟ್ಟುಕೊಳ್ಳುವ ಸಾಧ್ಯತೆ ಇದೆ' ಎಂದು ಮುಂದುವರೆದು ಅವರು ಹೇಳುತ್ತಾರೆ(2006).



ಕರೆಯುವ ಹಸುವನ್ನು ಬಿಟ್ಟು ಒದೆಯುವ ಕೋಣವನ್ನು ಕೊಂಡಂತೆ ಭಾರತ ಬಹುಕಾಲದ ಮಿತ್ರ ಇರಾನ್ ಬಿಟ್ಟು ಲೂಟಿಕೋರ ಅಮೆರಿಕ ಪರ ಯುಪಿಎ ಸರ್ಕಸ್ಸು

ವಿಶ್ವಾಸಮತ: ನೈತಿಕ ಅಧಃಪತನದ ಪ್ರಸಂಗ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ಜುಲೈ 2008ರಲ್ಲಿ ಭಾರತ-ಅಮೆರಿಕ ಪರಮಾಣು ವ್ಯವಹಾರವನ್ನು ಕುದುರಿಸಿಯೇ ಬಿಡುವ ಯುಪಿಎ ಸರಕಾರದ ಏಕಪಕ್ಷೀಯ ನಿರ್ಧಾರದಿಂದಾಗಿ ಎಡಪಕ್ಷಗಳು ಬೆಂಬಲ ಹಿಂತೆಗೆದುಕೊಂಡ ನಂತರ ನಿರ್ಣಾಯಕವಾಗಿದ್ದ ವಿಶ್ವಾಸಮತವನ್ನು ಗೆಲ್ಲಲು ಕಾಂಗ್ರೆಸ್ ನೇತೃತ್ವದ ಯುಪಿಎ ಮತಗಳ ಖರೀದಿಗೆ ನಡೆಸಿದ ದಂಡಯಾತ್ರೆಗೆ ಸಂಬಂಧಿಸಿದ ಕೇಬಲ್‌ಗಳು ಬಯಲಿಗೆ ಬಂದಿವೆ.

ಇವು ಯುಪಿಎ-1 ಸರಕಾರ ಅಮೆರಿಕಾದೊಂದಿಗೆ 'ಸಾಮರಿಕ ಪಾಲುದಾರಿಕೆ' ಎಂಬುದನ್ನು ಹೊಂದಲು ಎಂತಹ ಪ್ರಪಾತಕ್ಕೂ ಇಳಿಯುವಷ್ಟು ಹತಾಶಗೊಂಡಿತ್ತು ಎಂಬುದರ ಮೇಲೆ ಬಂದಿರುವ ಒಂದು ಬೃಹತ್ ದೋಷಾರೋಪಣೆ. ಇವು ಕಾಂಗ್ರೆಸ್ ನೇತೃತ್ವದ ಯುಪಿಎ-1 ರ ಘೋರ ನೈತಿಕ ಅಧಃಪತನವನ್ನು, ಹೀನ ರಾಜಕೀಯ ಸಮಯಸಾಧಕತನವನ್ನು ತೋರಿಸುತ್ತವೆ.

ಇಡೀ ದೇಶ, ಸಮಸ್ತ ಜಗತ್ತು ವೀಕ್ಷಿಸಿದ ಲೋಕಸಭೆಯಲ್ಲಿ ನೋಟಿನ ಕಂತೆಗಳನ್ನು ತೋರಿಸಿದ್ದ ಈ ಪ್ರಸಂಗ ಸಂಸದೀಯ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವಂತದ್ದು. ಆಗಿನ ಲೋಕಸಭಾಧ್ಯಕ್ಷರು ಈ 'ಓಟಿಗಾಗಿ ನೋಟು' ಪ್ರಸಂಗವನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ರಚಿಸಿದ್ದರು. ಅದು ತನ್ನ ವರದಿಯನ್ನು ಮಂಡಿಸಿತ್ತು. ಅದರಲ್ಲಿ ಈ ಘಟನೆಯಲ್ಲಿ ಇದ್ದವರ ಕ್ರಿಮಿನಲ್ ಬಾಧ್ಯತೆಯ ಬಗ್ಗೆ ತನಿಖೆಯನ್ನು ಸೂಕ್ತ ಸಂಸ್ಥೆಯ ಮೂಲಕ ನಡೆಸಬೇಕು ಎಂದು ಶಿಫಾರಸು ಇತ್ತು ಎಂಬುದು ನಂಬಲರ್ಹ ಸುದ್ದಿ. [illegible] ಇದುವರೆಗೆ ಏನೂ ಆಗಿಲ್ಲ. ಈ ವಿಕಿಲೀಕ್ಸ್ ಸಂಗತಿ ಬಿಜೆಪಿಯ ಒಂದು ಕೆಲವು ವಿಭಾಗಗಳು ಕೂಡ ಇದರಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವು ಎಂದು ಕೂಡ ಸೂಚಿಸಿದೆ. ನಿರ್ದಿಷ್ಟವಾಗಿ, ಮಾಜಿ



ಇರಾನ್-ಭಾರತ ಅನಿಲ ಕೊಳವೆ ಯೋಜನೆ ಪರ ಒಲವು ತೋರಿದ್ದಕ್ಕೆ ಖಾತೆಯಿಂದ ವರ್ಗಾವಣೆಯ ಸನ್ಮಾನ 'ಮಣಿಶಂಕರ್ ಅಯ್ಯರ್'ಗೆ.

ಪ್ರಧಾನ ಮಂತ್ರಿ ವಾಜಪೇಯಿಯವರ ಅಳಿಯನ ಹೆಸರು ಇದೆ. 'ಮಾಜಿ ಪ್ರಧಾನ ಮಂತ್ರಿ ರಾಜೀವ ಗಾಂಧಿಯ ನಿಕಟ ಸಹಯೋಗಿ ಹಾಗೂ ಸೋನಿಯಾ ಗಾಂಧಿಯವರ ಕುಟುಂಬದ ತುಂಬಾ ನಿಕಟಮಿತ್ರನೆನಿಸಿಕೊಂಡ' ಒಬ್ಬ ಕಾಂಗ್ರೆಸ್ ಮುಖಂಡರ ಬಗ್ಗೆ ಇದರಲ್ಲಿ ನೇರ ಪ್ರಸ್ತಾಪಗಳಿವೆ. ಹೀಗೆ ತನಿಖೆ ಸರಿಯಾದ ರೀತಿಯಲ್ಲಿ ಮುಂದುವರೆದಿದ್ದರೆ ಆಳುವ ಮತ್ತು ಪ್ರಮುಖ ವಿರೋಧ ಪಕ್ಷಕ್ಕೆ ಬಹಳ ಮುಜುಗರ ಉಂಟಾಗುತಿತ್ತು. ಈ ಯುಪಿಎ-2 ಸರಕಾರ ಸಂಸದೀಯ ಸಮಿತಿಯ ಶಿಫಾರಸುಗಳನ್ನು ಶ್ರದ್ಧೆಯಿಂದ ಜಾರಿಗೆ ತರದಿದ್ದುದೇಕೆ ಎಂಬುದಕ್ಕೆ ಇದೇ ಕಾರಣವಿರಬಹುದೇ?

ಜನತೆಗೆ ಉತ್ತರ ಕೊಡಬೇಕಾಗಿದೆ

ಇದಕ್ಕೆ ಪ್ರಧಾನ ಮಂತ್ರಿಗಳು ಮತ್ತು ಯುಪಿಎ ಸರಕಾರ ಸಂಸತ್ತಿನ ಮೂಲಕ ಉತ್ತರ ಕೊಡುವಂತೆ ಮಾಡಬೇಕಾಗಿದೆ. ಸಂಸದೀಯ ಪ್ರಜಾಪ್ರಭುತ್ವವನ್ನು [illegible] ತರಬೇಕಾಗಿದೆ. [illegible] ಪಡೆಯುವಂತಾಗಲು ಮಾಡಬೇಕಾದ ಕನಿಷ್ಟ ಕೆಲಸ ಇದು.

ಮುಂಬರುವ ದಿನಗಳಲ್ಲಿ ಭಾರತದ ವಿದೇಶಾಂಗ ಧೋರಣೆ ಮತ್ತು ಆಂತರಿಕ ವ್ಯವಹಾರಗಳಲ್ಲಿ ಅಮೆರಿಕಾದ ಒತ್ತಡಗಳ ಬಗ್ಗೆ ಇನ್ನಷ್ಟು ಸಂಗತಿಗಳು ಬಯಲಿಗೆ ಬರಬಹುದು. ಆದರೆ ಆಗಲೇ, ಅಮೆರಿಕಾ ಭಾರತದ ಸಾರ್ವಜನಿಕ ಜೀವನ ಮತ್ತು ಧೋರಣೆ ರೂಪಿಸುವ ಪ್ರಕ್ರಿಯೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿದೆ. ಅಮೆರಿಕಾದ ಒಂದು ಅಡಿಯಾಳು ಮಿತ್ರನಾಗುವ ಯುಪಿಎಯ ನಗ್ನ ಬಯಕೆ ಇದಕ್ಕೆ ಸಕ್ರಿಯ ಸಹಾಯ ಒದಗಿಸುತ್ತಿದೆ.

ಹಲವು ದೇಶಪ್ರೇಮಿ ಮತ್ತು ಸದಾಶಯದ ಭಾರತೀಯರಿಗೆ ಈ ಸಂಗತಿಗಳು ಖಂಡಿತಾ ಆಘಾತ ಉಂಟು ಮಾಡಿವೆ. ಆದರೆ ನಾವಂತೂ ಭಾರತದ ವಿದೇಶಾಂಗ ಧೋರಣೆಯಲ್ಲಿ ಒಂದು ಬಲಪಂಥೀಯ ಪಲ್ಲಟ ಮತ್ತು ಆರ್ಥಿಕ ಧೋರಣೆಯ ವಿಷಯಗಳಲ್ಲಿ ಅಮೆರಿಕಾ-ಪರ ಪಲ್ಲಟ ಕಾಣಬರುತ್ತಿದೆ ಎಂದು ಸತತವಾಗಿ ಎಚ್ಚರಿಕೆ ನೀಡುತ್ತಾ ಬಂದಿದ್ದೇವೆ. ಈ ಯುಪಿಎ-2 ಸರಕಾರ ಹೇಗೆ ಒಳಗೊಳಗೇ ನಮ್ಮ ಸಾರ್ವಭೌಮತೆಯನ್ನು ಕೊರೆದು ಹಾಕುತ್ತಿದೆ ಮತ್ತು ಸತ್ವಶಾಲಿ ಭಾರತವು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಅಡಿಯಾಳು ಮಿತ್ರನ ಮಟ್ಟಕ್ಕಿಳಿಯಲು ಬಿಡಲಾಗುತ್ತಿದೆ ಎಂಬುದಕ್ಕೆ ಈ ಯುಪಿಎ-2 ಸರಕಾರ ದೇಶಕ್ಕೆ ಮತ್ತು ಜನತೆಗೆ ಉತ್ತರ ಕೊಡಬೇಕಾಗಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ತೀರ್ಮಾನಗಳು

ಪುಟ 10ರಿಂದ

ಸಂಸತ್ತಿಗೆ ಕಾರ್ಮಿಕರ ಚಲೋ

ದೇಶದ ಜ್ವಲಂತ ಸಮಸ್ಯೆಯನ್ನು ಮುಂದಿಟ್ಟುಕೊಂಡು ನಡೆದ ಫೆಬ್ರವರಿ 23ರಂದು ಸಂಸತ್ ಚಲೋ ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ದೊರಕಿದೆ. ಲಕ್ಷಾಂತರ ಕಾರ್ಮಿಕರು ಪಾಲ್ಗೊಂಡ ಈ ಹೋರಾಟ ಕಾರ್ಯಕ್ರಮದ ನೇತೃತ್ವ ವಹಿಸಿದ ಕಾರ್ಮಿಕ ಸಂಘಟನೆಗಳನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಯುಪಿಎ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಲಕ್ಷಾಂತರ ಮಹಿಳೆಯರು ಮತ್ತು ಪುರುಷ ಕಾರ್ಮಿಕರು ಈ ಹೋರಾಟದಲ್ಲಿ ಭಾಗಿಯಾಗಿದ್ದರು. ಇದು ಸಹಜವಾಗಿಯೇ ಜನರಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಇರುವ ಭಾವನೆಯನ್ನು ತೋರಿಸಿದೆ. ಹೋರಾಟದ ಪ್ರಮುಖ ಐದು ಅಂಶಗಳ ಕಾರ್ಯಕ್ರಮವನ್ನು ಕೂಡಲೇ ಜಾರಿಗೊಳಿಸಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಲಿಬಿಯಾ : ಜನತೆ ನಿರ್ಧರಿಸಲಿ

ಮುಬಾರಕ್ ಆಡಳಿತವನ್ನು ಕಿತ್ತೊಗೆಯಲು ಮುಂದಾದ ಈಜಿಪ್ಟ್ ಜನತೆಯ ಹೋರಾಟಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಅಭಿನಂದಿಸಿದೆ. ನೂತನ ಪ್ರಜಾಪ್ರಭುತ್ವ ವ್ಯವಸ್ಥೆಯೊಂದರ ಸ್ಥಾಪನೆಗೆ ಈಜಿಪ್ಟ್‌ನಲ್ಲಿ ನಡೆಯುವ ಯಾವುದೇ ಜನಪ್ರಿಯ ಚಳವಳಿಗೆ ಕೇಂದ್ರ ಸಮಿತಿ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ.

ಇದೇ ಸಂದರ್ಭದಲ್ಲಿ ಅಮೆರಿಕ ಮತ್ತು ನ್ಯಾಟೋ ಲಿಬಿಯಾದ ಆಂತರಿಕ ವಿಚಾರದಲ್ಲಿ ಮೂಗು ತೂರಿಸುವ ಅಥವಾ ಸೇನಾ ಕಾರ್ಯಾಚರಣೆಗೆ ಮುಂದಾಗಿರುವುದಕ್ಕೆ ತನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಿದೆ. ತಮಗೆ ಯಾವ ರೀತಿಯ ರಾಜಕೀಯ ವ್ಯವಸ್ಥೆ ಬೇಕು ಎಂಬುದನ್ನು ಲಿಬಿಯಾದ ಜನರೇ ನಿರ್ಧರಿಸಬೇಕು. ಗಲಭೆಗ್ರಸ್ತ ಲಿಬಿಯಾದಿಂದ ಭಾರತೀಯರ ಸುರಕ್ಷಿತ ಮರಳುವಿಕೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಹಿಂತಿರುಗಿದ ಕಾರ್ಮಿಕರು ಹಾಗೂ ನಿರುದ್ಯೋಗಿಗಳಿಗೆ ಪುನರ್ವಸತಿ ಕಲ್ಪಿಸಬೇಕು.

ತಿದ್ದುಪಡಿ ಚಳುವಳಿ ವಿಮರ್ಶಾ ವರದಿ


ತಿದ್ದುಪಡಿ ಚಳವಳಿಗೆ ಸಂಬಂಧಿಸಿದಂತೆ ಪಕ್ಷದ ವಿವಿಧ ಸಮಿತಿಗಳು ಇಲ್ಲಿಯವರೆಗೆ ಕೈಗೊಂಡ ಕ್ರಮಗಳ ಬಗ್ಗೆ ಕೇಂದ್ರ ಸಮಿತಿ ಸುದೀರ್ಘ ವಿಮರ್ಶೆ ನಡೆಸಿತು. ಕಾರ್ಮಿಕ ರಂಗದಲ್ಲೂ ನಡೆಸಿದ ಚಟುವಟಿಕೆಗಳ ಬಗ್ಗೆ ನಡೆಸಿದ ವಿಮರ್ಶೆಯನ್ನು ಕೇಂದ್ರ ಸಮಿತಿ ಅನುಮೋದಿಸಿತು.

ಜನಾಂದೋಲನಕ್ಕೆ ಕರೆ

ಬೆಲೆ ಏರಿಕೆ ವಿರುದ್ಧ ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ. ಇದೇ ವೇಳೆ, ಉನ್ನತ ಮಟ್ಟದಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರದ ವಿರುದ್ಧ, ರೈತರ ಸಮಸ್ಯೆಗಳ ವಿರುದ್ಧ ಹಾಗೂ ಗ್ರಾಮೀಣ ಪ್ರದೇಶದ ಬಡಜನರ ಪ್ರಶ್ನೆಗಳ ಬಗ್ಗೆ ದೊಡ್ಡ ಮಟ್ಟದಲ್ಲಿ ಜನಾಂದೋಲನ ರೂಪಿಸಲು ಕೇಂದ್ರ ಸಮಿತಿ ತನ್ನ ಘಟಕಗಳಿಗೆ ಕರೆ ನೀಡಿದೆ. ಆಹಾರದ ಹಕ್ಕಿಗಾಗಿ, ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ರೂಪಿಸಲು ಪರಿಣಾಮಕಾರಿ ಹೋರಾಟ ನಡೆಸಲು ಪಕ್ಷ ನಿರ್ಧರಿಸಿದೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜಾರಿಗೆ, ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಗೆ, ಸಾರ್ವಜನಿಕ ರಂಗದ ಉದ್ದಿಮೆಯಿಂದ ಬಂಡವಾಳ ಹಿಂತೆಗೆಯುವ ಪ್ರಕ್ರಿಯೆಯ ವಿರುದ್ಧ ಹಾಗೂ ಚಿಲ್ಲರೆ ಮಾರಾಟದಲ್ಲಿ ವಿದೇಶ ನೇರ ಬಂಡವಾಳಕ್ಕೆ ಅನುಮತಿ ನೀಡುವುದರ ವಿರುದ್ಧ ಹೋರಾಟ ರೂಪಿಸಲು ಕೇಂದ್ರ ಸಮಿತಿ ಕರೆ ನೀಡಿದೆ. ಈ ಎಲ್ಲ ಬೇಡಿಕೆಗಳನ್ನು ಕೈಗೆತ್ತಿಕೊಂಡು ಜನಾಂದೋಲನ ರೂಪಿಸಬೇಕೆಂದು ಕೇಂದ್ರ ಸಮಿತಿ ರಾಜ್ಯ ಸಮಿತಿಗಳಿಗೆ [illegible]

ಮತ್ತೆ ಆಪರೇಷನ್ ಕಮಲ ಎಂಬ 'ವ್ಯವಹಾರ'ದ ದುರ್ನಾತ



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಆಚಾರ, ಶೀಲ, ಸಂಸ್ಕೃತಿ, ಪರಂಪರೆ, ಚಾರಿತ್ರ್ಯ, ನ್ಯಾಯ, ನೀತಿ, ಧರ್ಮ, ನಡತೆ.....ಇದೇನು ಯಾವುದಾದರೂ ಕನ್ನಡದ ನಿಘಂಟಿನಲ್ಲಿರುವ ಪದಗಳ ಪಟ್ಟಿಯನ್ನು ಓದುತ್ತಾ ಇದ್ದೇನೆ ಅನಿಸುತ್ತಿದೆಯೇ? ಇಲ್ಲ. ಇವು ಆರೆಸ್ಸೆಸ್, ಬಿಜೆಪಿಗರ ಬಾಯಲ್ಲಿ ಆಗಿಂದಾಗ್ಗೆ ಉದುರುತ್ತಲೇ ಇರುವ ಅಮೂಲ್ಯವಾದ ಮಾತುಗಳೆಂಬ ಮುತ್ತುಗಳು. ಇಂಥ ಮಾತನಾಡುತ್ತಾ ರಾಜ್ಯದಲ್ಲಿ ಸರ್ಕಾರವನ್ನು ನಡೆಸುತ್ತಿರುವ ಬಿಜೆಪಿ ರಾಜ್ಯದಲ್ಲಿ ಎಂದಿನ ತನ್ನ ಹೊಲಸು ಬುದ್ದಿಯ ಪ್ರದರ್ಶನ ತೋರಿದೆ.

ಅವರ ಹೆಸರು ಕರಡಿ ಸಂಗಣ್ಣ ಅಂತ. ಕೊಪ್ಪಳ ಕ್ಷೇತ್ರದ ಜೆಡಿ(ಎಸ್) ಶಾಸಕರು. ಅವರನ್ನು ಆಪರೇಷನ್ ಕಮಲ ಎಂಬ ಹೊಲಸು ವ್ಯವಹಾರ ನಡೆಸಿ ಬಿಜೆಪಿ ಪಕ್ಷ ತನ್ನ ಬುಟ್ಟಿಗೆ ಕೆಡವಿಕೊಂಡಿದೆ. ಕರಡಿ ಸಂಗಣ್ಣ ಮಾತ್ರವಲ್ಲ ಇನ್ನು ಹಲವು ಶಾಸಕರನ್ನು ಕರೆತರಲಾಗುವುದೆಂದು ಎಂದು ಹಾಗೂ 'ರಾಜ್ಯದಲ್ಲಿ ಬಿಜೆಪಿ ಇರುವವರೆಗೂ ಆಪರೇಷನ್ ಕಮಲ ನಿರಂತರವಾಗಿರುತ್ತದೆ' ಎಂದೂ ನಾಚಿಕೆ ಇಲ್ಲದೆ ಬಿಜೆಪಿ ಪಕ್ಷದ ರಾಜ್ಯ ಅಧ್ಯಕ್ಷ ಕೆ.ಎಸ್. ಈಶ್ವರಪ್ಪ ಘೋಷಿಸಿದ್ದಾರೆ.

ಕ್ಷೇತ್ರದ ಅಭಿವೃದ್ದಿಯ ದೃಷ್ಟಿಯಿಂದ ನಾನು ಬಿಜೆಪಿ ಸೇರಿದೆ ಅಂತ ಸಂಗಣ್ಣ ಅದೇ ಹಳಸಲು ಡೈಲಾಗ್ ಹೇಳಿದ್ದರೆ, ನಮ್ಮ ಈಶ್ವರಪ್ಪನ್ ಅವರು 'ಪಕ್ಷದ ತತ್ವ, ಸಿದ್ದಾಂತ, ನಾಯಕತ್ವ ಒಪ್ಪಿಕೊಂಡು ಬರುವವರಿಗೆ ಬಿಜೆಪಿ ಬಾಗಿಲು ಸದಾ ತೆರೆದಿರುತ್ತದೆ' ಎಂದು ಶಿವಮೊಗ್ಗದಲ್ಲಿ ಹೇಳಿದ್ದಾರೆ. ಇದು ಸಾಲದೆಂದು ಅವರು ಬೇರೆಲ್ಲೋ ಮಾತನಾಡಿ 'ಬೇರೆ ಪಕ್ಷಗಳ ನಾಯಕರಲ್ಲಿ ಸೈದ್ಧಾಂತಿಕ ಬದ್ಧತೆ ಇಲ್ಲ, ಅದು ಬಿಜೆಪಿಯಲ್ಲಿ ಮಾತ್ರ ಇದೆ' ಅಂತ ಒಂದಷ್ಟು ಒಗ್ಗರಣೆ ಬೇರೆ ಹಾಕಿದ್ದಾರೆ. ಬಿಜೆಪಿ ಪಕ್ಷದ ತತ್ವ, ಸಿದ್ದಾಂತ ಯಾವ ಪರಿ ಇದೆ ಅದು ಯಾವ ಮೇರೆಯನ್ನು ಮುಟ್ಟಿದೆ ಅಂಬುದಕ್ಕೆ ಕಳೆದ ವರ್ಷದ ಒಂದು ಘಟನಾವಳಿಯನ್ನು ನೆನೆಸಿಕೊಳ್ಳೋಣ, ಹಾಗೇ ಸುಮ್ಮನೆ.

ಅದು ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಯ್ಕೆಯ ಸಂದರ್ಭ. ಬಿಜೆಪಿಯ 'ಕಮಲ' ಎಂಬ 'ಆಪರೇಷನ್'ಗೆ ಒಳಗಾಗಿ ಬಿಜೆಪಿ ಕೊಟ್ಟ ಪ್ರಸಾದವನ್ನು ಸ್ವೀಕರಿಸಿ, ಚೆನ್ನಾಗಿ ಮೆದ್ದು ಬಂದಿದ್ದ ಏಳು ಜನ ಜೆಡಿ(ಎಸ್) ಪಕ್ಷದ ಪಾಲಿಕೆ ಸದಸ್ಯರು ಬಿಜೆಪಿ ಅಭ್ಯರ್ಥಿಗೆ ಓಟು ಹಾಕದೇ 'ವಂಚಿಸಿ'ದಾಗ, '...ಮೊದಲು ಕೊಟ್ಟಿರುವ ದುಡ್ಡನ್ನು ವಾಪಸ್ ಬಿಸಾಕಿ ಆಮೇಲೆ ಮಾತಾಡಿ...'' ಅಂತ ಮಾಧ್ಯಮದವರ ಮುಂದೆಯೇ ಬಿಜೆಪಿ ಪ್ರತಿನಿಧಿಗಳು 'ನೀತಿ, ನಿಯತ್ತಲ್ಲದ' ವಿಶ್ವಾಸ ದ್ರೋಹಿಗಳ ವಿರುದ್ಧ ಸಿಡಿದೆದ್ದು ಅಬ್ಬರಿಸಿದಾಗಲೇ ಆಪರೇಷನ್ ಕಮಲ ಪವಿತ್ರ ವ್ಯವಹಾರದ ಪರಿಮಳ ಅಧಿಕೃತವಾಗಿ ರಾಜ್ಯಕ್ಕೆಲ್ಲಾ ಪರಿಚಿತವಾಗಿ ಹೋಗಿತ್ತಲ್ಲವೇ? ಇಷ್ಟಾದ ಮೇಲೂ ಮುಂಖಾನುಮುಂಖವಾಗಿ ಆಚಾರ, ಶೀಲದ ಬಗೆಗೆ ಮಾತನಾಡುವ ಈ ಬಿಜೆಪಿ ಮುಖಂಡರ ಭಂಡತನಕ್ಕೆ ಏನಾದರೂ ಒಂದು ಪ್ರಶಸ್ತಿ ಸಿಗಲೇ ಬೇಕಾದುದಂತೂ ನ್ಯಾಯವೇ.

ಬಿಜೆಪಿ ಸರ್ಕಾರಕ್ಕೆ ಹೇಗಾದರೂ ಸರಿ ಬಹುಮತ ಸಿಗಲೇ ಬೇಕು. ಯಾವ ಚರಂಡಿ, ಹೊಲಸು ಗುಂಡಿಯಲ್ಲಿ ಮಿಂದೇಳುವ ಮಾರ್ಗದಲ್ಲಿ ಸಾಗಬೇಕಾಗಿ ಬಂದರೂ ಸರಿಯೇ, ಚಿಂತೆಯಿಲ್ಲ. ಆದರೆ ಅಧಿಕಾರವೆಂಬ ಮಂಡಿಗೆಯನ್ನು ಮೆಲ್ಲುವ ಅವಕಾಶವನ್ನು ಮಾತ್ರ ಬಿಡಲು ಬಿಜೆಪಿ, ಆರೆಸೆಸ್ಸ್ ಸುತಾ 'ರಾಮ್' ತಯಾರಿಲ್ಲ. ಇಷ್ಟೇ ಇದರ 'ಅರ್ಥ'. ಅಲ್ಲವೇ?

★

25,538 ಕೋಟಿ ರೂಪಾಯಿಗಳ ಭಾರಿ 'ಉಳಿತಾಯ'

2008-09 ಮತ್ತು 2009-10 ರ ಸಾಲಿನ ರಾಜ್ಯದ ಎರಡೂ ಬಜೆಟ್‌ಗಳನ್ನು ಮಂಡಿಸಿದ್ದು ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ. ತಾವೊಂದು ಬಾರಿ ಗಾತ್ರದ ಬಜೆಟ್ ಮಂಡಿಸಿ, ಬಾರಿ ಜನಪರವಾದ, ವಿಪರೀತ ರೈತಪರವಾದ ಕೆಲಸ ಮಾಡುತ್ತಿದ್ದೇನೆ ಎಂಬ ಭಾವನೆಯನ್ನು ಬಿತ್ತುವುದಕ್ಕೆ ಯಡಿಯೂರಪ್ಪ ಪ್ರಯತ್ನಿಸುತ್ತಿರುವುದರ ನಿಜವಾದ ಬಂಡವಾಳ ಏನೆಂದು ಈಗಾಗಲೇ ನಮ್ಮ ಜನರಿಗೆ, ರೈತರಿಗೆ ಗೊತ್ತಿರುವುದೇ.

ಗೊತ್ತಿರುವ ವಿಷಯಕ್ಕೆ ಪೂರಕವಾಗಿ ಈ ಒಂದು ಅಂಕಿ ಸಂಖ್ಯೆಗಳನ್ನು ಗಮನಿಸಿ. ಕಳೆದ ಎರಡೂ ವರ್ಷಗಳಲ್ಲಿ ಮಂಡಿಸಲಾದ ಬಜೆಟ್‌ಗಳ ಒಟ್ಟು ಮೊತ್ತ 1,44,934 ಕೋಟಿ ರೂಪಾಯಿಗಳು. ಅದರಲ್ಲಿ ಈ ಎರಡೂ ವರ್ಷಗಳಲ್ಲಿ 'ಖರ್ಚಾಗದೇ ಉಳಿದ' ಒಟ್ಟು ಹಣ 25,538 ಕೋಟಿ. ಇಲ್ಲಿ 'ಖರ್ಚಾಗದೇ ಉಳಿದ' ಮೊತ್ತ ಅಂದರೇನು ಎಂದು ಹೆಚ್ಚು ವಿವರಿಸಬೇಕಾಗಿಯೇ ಇಲ್ಲ. ಸರ್ಕಾರದ ಖಜಾನೆಯಲ್ಲಿ ಹಣವಿರಲಿಲ್ಲ. ಹಾಗಾಗಿ ಟಿವಿ, ಪತ್ರಿಕೆಗಳ ಮೂಲಕ ಜನರಿಗೆ ತೋರಿಸಿದ ಈ ಮೊತ್ತ ಕನ್ನಡಿಯ ಗಂಟಿನಂತೆ ಉಳಿದು ಹೋಯಿತು. (ಮಂಜೂರಾದ ಹಣದಲ್ಲಿ ನಿಜವಾಗಿಯೂ ಜನರಿಗೆ ಎಷ್ಟು ತಲುಪಿದೆ ಎಂಬುದು ಬೇರೆಯದೇ ಸಮಾಚಾರ. ಇರಲಿ.)


ಖರ್ಚಾಗದ ಹಣವನ್ನು ಬಿಜೆಪಿ ಸರ್ಕಾರ 'ಉಳಿತಾಯ' ಅಂತ ಈ ಬಾರಿಯ ಬಜೆಟ್‌ನಲ್ಲಿ ತೋರಿಸಿದೆ. ಆಹಾ ಜಾಣತನವೇ !! ಈ ವರ್ಷ ಬಿಜೆಪಿ ಸರ್ಕಾರ ಮು.ಮ. ಅವರು ಒಂದು ಲಕ್ಷ ಕೋಟಿ ರೂಪಾಯಿಗಳ ಬಾರಿ ಬಜೆಟ್ ಮಂಡಿಸುತ್ತೇನೆ ಎಂದು ಸಾರಿ ಕೊನೆಗೆ ಸುಮಾರು ಮುಕ್ಕಾಲು ಲಕ್ಷ ಕೋಟಿಗಳಷ್ಟು ಪ್ರಮಾಣದ ಬಜೆಟ್ ಮಂಡಿಸಿದ್ದಾರೆ. ಈ ಬಾರಿಯ ಬಜೆಟ್ ಗಾತ್ರ ಬಾರಿಯೇ ಆಗಿರುವುದರಿಂದ ಮುಂದಿನ ವರ್ಷದಲ್ಲಿ 'ಕಳೆದ ವರ್ಷದ ಉಳಿತಾಯ'ದ ಬಾಬ್ತಿನಲ್ಲೂ ಬಾರಿ ಮೊತ್ತವನ್ನೇ ತೋರಿಸಲು ಧಾರಾಳ ಅವಕಾಶ ಇದೆ. ಅಲ್ಲವೇ.

ಬಾಲಂಗೋಚಿ: ರಾಜ್ಯದ ಬಜೆಟ್‌ಗಳಲ್ಲಿ ತುಂಬಾ ತುಂಬಾ ಉಳಿತಾಯವಾಗುತ್ತಿರುವುದರಿಂದ ವಿಧಾನ ಸೌಧದ ಮುಂದೆ 'ಉಳಿತಾಯ ದೇವಿ' ಯದೋ ಅಥವಾ 'ಲಕ್ಷ್ಮೀದೇವಿ'ಯದೋ ಒಂದು ಎತ್ತರದ ಪ್ರತಿಮೆ ಸ್ಥಾಪಿಸುವ ಆಲೋಚನೆ ಇನ್ನೂ ನಮ್ಮ ಮು.ಮ.ಗಳಿಗೆ ಹೊಳೆದಿಲ್ಲವೆಂಬುದೆ ಕರ್ನಾಟಕದ ಆರೂವರೆ ಕೋಟಿ ಜನರ ಪುಣ್ಯ. ಏನಂತೀರಿ.

★

ಚರಂಡಿಗೆ ತಡೆಗೋಡೆ ಕಟ್ಟುವ ಅದ್ಭುತ 'ಪ್ರೇರಣೆ'

ಈ ಬಿಜೆಪಿ ಸರ್ಕಾರದ ಚುಕ್ಕಾಣಿ ಹಿಡಿದ ಬಿ.ಎಸ್. ಯಡಿಯೂರಪ್ಪನವರು ಮತ್ತು ಅವರ ಮಕ್ಕಳು ತಮ್ಮ ಜಿಲ್ಲೆಯಾದ ಶಿವಮೊಗ್ಗದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದಾರೆ ಎಂಬುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಹೀಗಂದಾಕ್ಷಣ ನಿಮ್ಮ ಮನಸ್ಸಿನಲ್ಲಿ 'ಪ್ರೇರಣಾ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್'ಗೆ ಸಂಬಂಧಿಸಿ ಇತ್ತೀಚಿಗೆ ಬಯಲುಗೊಂಡ ಪ್ರಕರಣ ನೆನಪಾಗಬಹುದು. ಉಹುಂ ಈಗ ಹೇಳುತ್ತಿರುವುದು ಪ್ರೇರಣಕ್ಕೆ ವಿವಿಧ ಕಂಪನಿಗಳು ಕೋಟಿ ಕೋಟಿ ಕೊಡುಗೆ ನೀಡಲು 'ಪ್ರೇರೇಪಣೆ'ಯಾದ ಬಿಜೆಪಿ ಸರ್ಕಾರದ ಕೆಲಸ ಕಾರ್ಯಗಳ ಬಗೆಗಲ್ಲ. ಇದು ಬೇರೊಂದು ಸಮಾಚಾರ.



ಶಿವಮೊಗ್ಗದಲ್ಲಿ ಸಣ್ಣದಾದ, ದೊಡ್ಡದಾದ ಎಷ್ಟೋ ಚರಂಡಿಗಳಿವೆ. ಸೂಕ್ತ ತಡೆಗೋಡೆಗಳಿಲ್ಲದೇ ಹೋದಲ್ಲಿ ಆ ಚರಂಡಿಗಳಲ್ಲಿ ನೀರು ತುಂಬಿ ಹರಿಯುವಾಗ ಅಕ್ಕ ಪಕ್ಕದ ನಿವೇಶನಗಳಿಗೆ ಕಟ್ಟಡಗಳಿಗೆ ನೀರು ನುಗ್ಗಿ ಹರಿಯುವ ಸಂಭವ ಇರುತ್ತದೆ. ಅಥವಾ ಜನರೇ ಆ ಚರಂಡಿಗೆ ಜಾರಿ ಬೀಳುವ ಸಂಭವ ಇರುತ್ತದ. ಹಾಗಾಗಿ ತಡೆ ಗೋಡೆ ಬೇಕು. ಸರಿ ಅಲ್ಲಿ ಒಂದು ಕಡೆ ಸರ್ಕಾರಿ ವೆಚ್ಚದಲ್ಲಿ ಚರಂಡಿಗೆ ತಡಗೋಡೆ ನಿರ್ಮಿಸುವ ಕೆಲಸ ಕೈಗೆತ್ತಿಕೊಳ್ಳ ಲಾಯಿತು. ಕೆಲಸವೂ ಯಶಸ್ವಿಯಾಗಿ ಮುಗಿಯಿತು.

ಸರಿ ಇದರಲ್ಲೇನು ವಿಶೇಷ ಎಂದಿರಾ ? ಸ್ವಲ್ಪ ವಿಶೇಷ ಇದೆ.

ಸರ್ಕಾರಿ ವೆಚ್ಚದಲ್ಲಿ ತಡೆಗೋಡೆ ನಿರ್ಮಾಣ ಕಾರ್ಯ ನಡೆಯಿತಲ್ಲ. ಅದು ಎಲ್ಲಿಂದ ಎಲ್ಲಿಯವರೆಗೆ? ಯಡಿಯೂರಪ್ಪನವರ ಕುಟುಂಬಕ್ಕೆ ಸೇರಿದ ಶಿಕ್ಷಣ ಸಂಸ್ಥೆಯ ಜಾಗ ಎಲ್ಲಿ ಆರಂಭ ಗೊಂಡಿದೆಯೋ ಅಲ್ಲಿ ಚರಂಡಿಯ ತಡೆಗೋಡೆ ಆರಂಭವಾಗುತ್ತದೆ. ಸಂಸ್ಥೆಯ ಜಾಗ ಎಲ್ಲಿಗೆ ಮುಗಿಯುತ್ತದೆಯೋ ಅಲ್ಲಿಗೆ ಚರಂಡಿಯ ತಡೆಗೋಡೆಯೂ ಕೂಡ ಮುಗಿಯುತ್ತದೆ. ಆಹಾ !! ಎಷ್ಟು ಚೆನ್ನಾಗಿದೆ ಸರ್ಕಾರಿ ಯಂತ್ರದ ಸದುಪಯೋಗ.

ನಾವು, ನೀವು ತೆರಿಗೆ, ಸುಂಕ, ಕಂದಾಯ,-ಶುಲ್ಕ, ಸೆಸ್ಸು, ಪಸ್ಸು ಅಂತ ಸರ್ಕಾರಕ್ಕೆ ಏನೇನೆಲ್ಲಾ ಕಟ್ಟಿದರು ಬಡವರು, ಸಾಮಾನ್ಯ-ಜನರು ಬಾಳುವ ಬಡಾವಣೆಗಳಿಗೆ ಸಿಗುವ ಸೌಲಭ್ಯಗಳು ಅಷ್ಟರಲ್ಲೇ ಇವೆ.

...ಹುಟ್ಟಿದರೆ ಶಿವಮೊಗ್ಗದಲ್ಲೇ ಹುಟ್ಟಬೇಕು.... ಹುಟ್ಟಿದರೆ ಯಡಿಯೂರಪ್ನೋರ್ ಮಕ್ಕಳಾಗಿ ಹುಟ್ಟಬೇಕು... ಅಂತ ಶಿವಮೊಗ್ಗದಲ್ಲಿ ಕೆಲವರು ಹಾಡು ಹಾಡುತ್ತಿದ್ದಾರಂತೆ. ನೀವೇನಾದರೂ ಈ ಹಾಡನ್ನು ಕೇಳಿದ್ದೀರ ?

ಯಡಿಯೂರಪ್ಪ ಹಾಗು ಅವರ ಕುರ್ಚಿಗೆ ನೇತುಬಿದ್ದಿರುವ ಅವರ ಬಂಧು ಬಾಂಧವರಿಗೆ ಸಾರ್ವಜನಿಕ ಜೀವನದಲ್ಲಿ ಕಾಪಾಡಿಕೊಳ್ಳ ಬೇಕೆಂದು ಬಯಸಲಾಗುವ ಕನಿಷ್ಠ ನೈತಿಕತೆಯ ಮಟ್ಟವನ್ನು ಕಾಯ್ದುಕೊಳ್ಳುವ ಬಗೆಗೆ ಯಾವ ಕನಿಷ್ಠ ಕಾಳಜಿಯೂ ಇಲ್ಲ. ಇದನ್ನೇ ಜನಸಾಮಾನ್ಯರ ಭಾಷೆಯಲ್ಲಿ ಹೇಳುವುದಾದರೆ ಇವರಿಗೆ ಮಾನ..... ಮ... ಹೋಗಲಿ ಬಿಡಿ. ನಾವು ಅವರ ಗುಣಗಾನ ಮಾಡುವುದು ಬೇಡ. ಜನರಿಗೆ ಅವರ ಗುಣಗಳು ಗೊತ್ತಾಗುತ್ತಿರುವುದರಿಂದ ಗಾನದ ಜವಾಬ್ದಾರಿಯನ್ನು ಅವರೇ ನಿರ್ವಹಿಸುತ್ತಾರೆ.

ಭಾಜಪ - ಕಾಂಗ್ರೆಸ್

ಕಾಂಗ್ರೆಸ್ ಭಾ.ಜ.ಪ ಎರಡೂನು ಒಂದೆ
ಮಾಡುತಿವೆ ಮುಗ್ಧರನು ವಂಚಿಸುವ ದಂಧೆ
ಕಾಂಗ್ರೆಸ್ ಬಡವರಿಗೆ ಬೇಡಿಸಲು ಭಿಕ್ಷ
ಭಾ.ಜ.ಪ. ಮೇಲ್ವರ್ಗದ ಹಿತಕಾವ ಪಕ್ಷ.

- ವಿಡಂಬಾರಿ

ಅಗಾಧ ಎಫ್‌ಡಿಐಗಾಗಿ ರಾಷ್ಟ್ರೀಯ ಭದ್ರತೆಗೆ ಧಕ್ಕೆ?



■ **ವೇದರಾಜ ಎನ್.ಕೆ.**

ಇದು ಎಡಪಕ್ಷಗಳು ಕೇಳಿರುವ ಪ್ರಶ್ನೆಯಲ್ಲ, ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಕೇಳಿರುವ ಪ್ರಶ್ನೆ- 2ಜಿ ಹಗರಣದ ಮೊಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ. 2ಜಿ ತರಂಗಾಂತರ ನೀಡಿಕೆಯ ಎರಡು ಕೇಸುಗಳನ್ನು ಭದ್ರತಾ ದೃಷ್ಟಿಯಿಂದಲೂ ಪರೀಕ್ಷಿಸಲಾಗುತ್ತಿದೆ. ಯುಪಿಎ-2 ಸರಕಾರದ ಗೃಹ ಇಲಾಖೆಯೇ ಎತ್ತಿದ ಆಕ್ಷೇಪಗಳನ್ನು ಬದಿಗೊತ್ತಿ ಆ ಕಂಪನಿಗಳಿಗೆ ಲೈಸೆನ್ಸ್ ನೀಡಿದ್ದು ದೇಶದ ಅಂತರಿಕ ಮತ್ತು ಹೊರಗಿನ ಭದ್ರತೆಗೆ ಅಪಾಯ ಒಡ್ಡಬಹುದು ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ. ಶಾಹಿದ್ ಬಲ್ವಾ ಪ್ರಾಯೋಜಿತ ಎಟಿಸಲಾಟ್ ಡಿಬಿ ಟೆಲಿಕಾಂ ಮತ್ತು ಎಸ್-ಟೆಲ್ ಆ ಎರಡು ಕಂಪನಿಗಳು. ಚೆನ್ನೈನ ಎಸ್-ಟೆಲ್‌ನ ವಿಷಯದಲ್ಲಂತೂ ರಾಷ್ಟ್ರೀಯ ಭದ್ರತೆಗೆ ಅಪಾಯದ ಆಧಾರದ ಮೇಲೆ ತರಂಗಾಂತರ ನೀಡಿಕೆಯನ್ನು ರದ್ದು ಮಾಡಿದ ಮೇಲೆ ಮತ್ತೆ ಅದನ್ನು ಕೊಡಲಾಗಿರುವ ಬಗ್ಗೆ ತನಿಖೆಗೆ ನ್ಯಾಯಾಲಯ ಈಗಾಗಲೇ ಆದೇಶ ನೀಡಿದೆ. ಮಾಜಿ ಯುಪಿಎ-2 ದೂರಸಂಪರ್ಕ ಮಂತ್ರಿ ದೇಶೀ-ವಿದೇಶಿ ಖಾಸಗಿ ಕಂಪನಿಗಳಿಗೆ ಅಪಾರ ಲಾಭ ಕೊಡಿಸುವಲ್ಲಿ ರಾಷ್ಟ್ರೀಯ ಭದ್ರತೆಯನ್ನು ಕೂಡ ಉಪೇಕ್ಷಿಸಿದ್ದಾರೆಯೇ ಎಂಬ ಪ್ರಶ್ನೆಯನ್ನು ನ್ಯಾಯಾಲಯವೇ ಕೇಳುತ್ತಿದೆ. ಶಾಹಿದ್ ಬಲ್ವಾ ಈಗ ಸಿಬಿಐ ಕಸ್ಟಡಿಯಲ್ಲಿದ್ದಾರೆ.

ಈ ಮಾಜಿ ಯುಪಿಎ-2 ಮಂತ್ರಿಯ ಮೇಲಿನ ಆಪಾದನೆಯ ಪಟ್ಟಿ ಬೆಳೆಯುತ್ತಲೇ ಇದೆ. ಆತನ ಅವಧಿಯಲ್ಲಿ ಯುಪಿಎ-2 ಸರಕಾರಕ್ಕೆ ಹಣಕಾಸು ಕಾರ್ಯದರ್ಶಿಗಳಾಗಿದ್ದ ಮತ್ತು ಈಗ ರಿಜರ್ವ್ ಬ್ಯಾಂಕ್ ಗವರ್ನರಾಗಿರುವ ಡಿ ಸುಬ್ಬರಾವ್ ಮತ್ತು ದೇಶದ ಅತ್ಯುನ್ನತ ಕಾನೂನು ಅಧಿಕಾರಿ ಅಂದರೆ ಅಟಾರ್ನಿ ಜನರಲ್ ಆಗಿರುವ ಜಿ ಇ ವಹನ್ವತಿಯವರಿಗೆ ಸಿಬಿಐ ಬುಲಾವ್ ಹೋಗಿತ್ತು. ಅವರ ಹೇಳಿಕೆಗಳನ್ನು ತೆಗೆದುಕೊಳ್ಳಲಾಗಿದೆ. ದೂರ ಸಂಪರ್ಕ ಇಲಾಖೆ ಅಟಾರ್ನಿ ಜನರಲ್‌ರವರ ಕಾನೂನು ಸಲಹೆ ಪಡೆದು ನೀಡಲಾಗಿತ್ತು ಎನ್ನಲಾದ ಪತ್ರಿಕಾ ಹೇಳಿಕೆಯ ಬಗ್ಗೆ ವಹನ್ವತಿಯವರನ್ನು ಮತ್ತು ದೂರಸಂಪರ್ಕ ಕಂಪನಿಗಳ ಲೈಸೆನ್ಸಿಗೆ ಪ್ರವೇಶ ಶುಲ್ಕದ ಕುರಿತು ಸುಬ್ಬರಾವ್ ಅವರನ್ನು ಪ್ರಶ್ನಿಸಲಾಗಿದೆಯಂತೆ. ಅಟಾರ್ನಿ ಜನರಲ್‌ರವರ ಸಲಹೆಯನ್ನು ತನಗೆ ಬೇಕಾದಂತೆ ತಿರುಚಿರುವ (ಫೋರ್ಜರಿ ಮಾಡಿರುವ ಆರೋಪವೂ ಸೇರಿ) ಮತ್ತು ಹಣಕಾಸು ಕಾರ್ಯದರ್ಶಿಗಳು ಕೇಳಿದ ಪ್ರಶ್ನೆಗಳನ್ನು ನಿರ್ಲಕ್ಷಿಸಿರುವ ಆರೋಪಗಳು ಈಗ ಸೇರಿದಂತಾಗಿವೆ.

2ಜಿ ಹಗರಣದಲ್ಲಿ ಹರಿದಾಡಿದ ಹಣಕಾಸಿನ ಜಾಡು ಆರು ದೇಶಗಳಿಗೆ, 31 ಕಂಪನಿಗಳಿಗೆ ಹರಡಿದೆ ಎಂಬುದು ಇದುವರೆಗಿನ ತನಿಖೆಯಿಂದ ಕಂಡು ಬಂದಿರುವ ಸಂಗತಿ. ಕೆಲವು ಹವಾಲ ಮಂದಿ ಕೂಡ ಸಿಬಿಐ ಜಾಲದೊಳಕ್ಕೆ ಬಂದಿದ್ದಾರೆ. ಮಾಜಿ ಯುಪಿಎ-2 ಮಂತ್ರಿಗಳ ಮೇಲೆ ಭ್ರಷ್ಟಾಚಾರ, ವಂಚನೆ ಮತ್ತು ಫೋರ್ಜರಿಯ ಆರೋಪಗಳನ್ನು ಒಳಗೊಂಡಂತೆ ಮಾರ್ಚ್ 31ರೊಳಗೆ ಆರೋಪ ಪಟ್ಟಿ ಸಲ್ಲಿಸುವ ನಿರೀಕ್ಷೆಯಿದೆ.

★

ಕಾಮನ್ವೆಲ್ತ್ ಕ್ರೀಡಾಕೂಟ ಹಗರಣ: ಈಗ ಚಿತ್ತ ಕೇಂದ್ರ ಸರಕಾರದ ಪಾತ್ರದತ್ತ

ಕಾಂಗ್ರೆಸ್ ಸಂಸತ್ ಸದಸ್ಯ ಸುರೇಶ ಕಲ್ಮಾಡಿ ಕಾಮನ್ವೆಲ್ತ್ ಕ್ರೀಡಾಕೂಟ ಹಗರಣದಲ್ಲಿ ತನ್ನನ್ನು ಮತ್ತು ಕ್ರೀಡಾಕೂಟದ ಸಂಘಟನಾ ಸಮಿತಿಯ ತನ್ನ ಸಹಯೋಗಿಗಳನ್ನಷ್ಟೇ ಏಕೆ ಗುರಿ ಮಾಡುತ್ತೀರಿ ಎಂದು ಹಲವು ಬಾರಿ ಪ್ರಶ್ನಿಸಿದ್ದರು. ಯುಪಿಎ-2 ಸರಕಾರ ತನ್ನ ಪಾತ್ರವನ್ನು ಮರೆಮಾಚಲು ಆತನೊಬ್ಬನ್ನೇ ಬಲಿಪಶು ಮಾಡುತ್ತಿದೆಯೇ ಎಂಬ ಸಂದೇಹವೂ ಹರಡಿತ್ತು. ಈಗ ತನಿಖೆ ತನ್ನ ಕ್ಷೇತ್ರವನ್ನು ವಿಸ್ತರಿಸುತ್ತಿರುವಂತೆ ಯುಪಿಎ-2 ಸರಕಾರದ ಪಾತ್ರವೂ ತನಿಖೆಗೆ ಒಳಪಡುತ್ತಿದೆ. ಸಲುರಢೇಸ ಕಲ್ಮಾಡಿ ಮತ್ತು ಅವರ ಸಹಯೋಗಿಗಳು ಕೈಗೊಂಡ ಕ್ರಮಗಳಿಂದ ಸರಕಾರಕ್ಕೆ ಹಾನಿಯಾಗಿದ್ದು, ಅದಕ್ಕೆ ಅವರು ಮಾತ್ರ ಹೊಣೆಯಲ್ಲ, ವಿವಿಧ ಸಮಿತಿಗಳು,



ಉಪಸಮಿತಿಗಳಲ್ಲಿದ್ದ ಕೇಂದ್ರ ಸರಕಾರದ ಉನ್ನತ ಅಧಿಕಾರಿಗಳೂ ಅಂತಹ ಕ್ರಮಗಳ ಭಾಗವಾಗಿದ್ದಾರೆ, ಆ ಮೂಲಕ ಅವರು ಕೂಡ ಹೊಣೆಗಾರರಾಗಿದ್ದಾರೆ ಎಂಬುದು ಬೆಳಕಿಗೆ ಬರುತ್ತಿದೆ.

ಉದಾ: ವಿವಿಧ ಕ್ರೀಡೆಗಳಲ್ಲಿ ಸಮಯ ಮತ್ತು ಫಲಿತಾಂಶಗಳನ್ನು ತಿಳಿಯುವ ವ್ಯವಸ್ಥೆಗಾಗಿ ಸ್ವಿಸ್ ಟೈಮಿಂಗ್ ಎಂಬ ಕಂಪನಿಗೆ ಕಾಂಟ್ರಾಕ್ಟ್ ಕೊಡುವುದರಲ್ಲಿ ಅಕ್ರಮವಿತ್ತು ಎಂದು ಈಗ ಹೇಳಲಾಗುತ್ತಿದೆ. ಆದರೆ ಇದನ್ನು ಕೊಡುವ ನಿರ್ಣಯ ಸರಿ ಎಂದು ಹಸಿರು ನಿಶಾನೆ ಕೊಟ್ಟದ್ದು ತಾಂತ್ರಿಕ ಉಪಸಮಿತಿ. ಭಾರತದ ಸರಕಾರದ ನಗರಾಭಿವೃದ್ಧಿ ಕಾರ್ಯದರ್ಶಿ, ಕ್ರೀಡಾ ಕಾರ್ಯದರ್ಶಿ, ಹಣಕಾಸು ಇಲಾಖೆಯ ಅಡಿಶನಲ್ ಸೆಕ್ರೆಟರಿ ಮತ್ತು ಕ್ರೀಡಾಕೂಟದ ಮುಖ್ಯ ಕಾರ್ಯಕಾರಿ ಅಧಿಕಾರಿ ಈ ಉಪಸಮಿತಿಯಲ್ಲಿದ್ದರು.

ಕ್ರೀಡಾಕೂಟಕ್ಕಾಗಿ ಎರಡು ಕ್ರೀಡಾಂಗಣಗಳ-ತಲ್ಕತೋರ ಮತ್ತು ಶಿವಾಜಿ- ನವೀಕರಣದಲ್ಲಿನ ವ್ಯಾಪಕ ಅಕ್ರಮಗಳ ತನಿಖೆ ನಡೆಯುತ್ತಿದ್ದು ಇದರಲ್ಲಿ ಎನ್‌ಎಂಡಿಸಿ ಮತ್ತು ಸಿಪಿಡಬ್ಲ್ಯುಡಿಯ ಉನ್ನತ ಅಧಿಕಾರಿಗಳು ಶಾಮೀಲಾಗಿರುವ ಸಂದೇಹ ಬಲವಾಗಿದೆ. ಈ ಅಧಿಕಾರಿಗಳ ಮೇಲೆ ಮೊಕದ್ದಮೆಗಳನ್ನು ಹಾಕುವ ಸಂಭವವಿದೆ.

★

ಜೈತಪುರ ಪರಮಾಣು ಸ್ಥಾವರ: ನಿಲ್ಲಿಸಲು ನಕಾರ

ಮಹಾರಾಷ್ಟ್ರದ ಜೈತಪುರ ಎಂಬಲ್ಲಿ 9900 ಮೆ.ವಾ. ಪರಮಾಣು ವಿದ್ಯುತ್ ಸ್ಥಾವರವನ್ನು ನಿಲ್ಲಿಸುವ ಯೋಚನೆಯೇನೂ ಇಲ್ಲ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಪಶ್ಚಿಮ ಘಟ್ಟಗಳ ಪರಿಸರ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸ್ಥಳೀಯ ಜನತೆ ಆಗ್ರಹಿಸುತ್ತಿದ್ದಾರೆ. ಇದಕ್ಕಾಗಿ ಭೂಸ್ವಾಧೀನವನ್ನು ಅವರು ವಿರೋಧಿಸುತ್ತಿದ್ದಾರೆ.

ಜಪಾನಿನಲ್ಲಿ ಭೂಕಂಪ ಮತ್ತು ಸುನಾಮಿಯಿಂದಾಗಿ ಪರಮಾಣು ಸ್ಥಾವರಗಳಿಗೆ, ಅದರಿಂದಾಗಿ ಜನತೆಗೆ ಉಂಟಾಗಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಈ ಸ್ಥಾವರದ ಸುರಕ್ಷತಾ ಕ್ರಮಗಳ ಬಗ್ಗೆ ಪುನರಾಲೋಚನೆ ಮಾಡಬೇಕೆಂಬ ಬೇಡಿಕೆ ಈಗ ಬಂದಿದೆ. ಇದನ್ನು ಮೊದಲೇ ನಿರೀಕ್ಷಿಸಿದಂತಿರುವ ಅಮೆರಿಕನ್ ಪರಮಾಣು ಲಾಬಿ ಸಂಸತ್ತಿನಲ್ಲಿ ಪ್ರಧಾನಿಗಳ ಹೇಳಿಕೆ ಬರುವ ಮೊದಲೇ, ಜಪಾನಿನ ಸ್ಥಿತಿ ನೋಡಿ ನಿಮ್ಮ ಪರಮಾಣು ಯೋಜನೆಗಳ ಬಗ್ಗೆ ಪುನರಾಲೋಚನೆ ಮಾಡಬೇಡಿ, ಏಕೆಂದರೆ ಪರಮಾಣು ವಿದ್ಯುತ್ ನಿಮಗೆ ಅನಿವಾರ್ಯ ಎಂಬ ಪುಕ್ಕಟೆ ಸಲಹೆಯನ್ನು ತ್ವರಿತವಾಗಿ ರವಾನಿಸಿದ್ದಾರೆ.

ಆದರೆ ಜೈತಪುರ ಸ್ಥಾವರದ ಬಗೆಗಿನ ಆಕ್ಷೇಪ ಅಷ್ಟೇ ಅಲ್ಲ. ಫ್ರೆಂಚ್ ಕಂಪನಿ ಅರೇವಾ ಸ್ಥಾಪಿಸುತ್ತಿರುವ ಈ ಸ್ಥಾವರದ ಇಪಿಆರ್ ತಂತ್ರಜ್ಞಾನ ಹೊಸದಾಗಿದ್ದು ಅದನ್ನು ಬೇರೆಲ್ಲಿಯೂ ಇದುವರೆಗೆ ಪರೀಕ್ಷಿಸಿಲ್ಲ, ಸ್ವತ: ಫ್ರಾನ್ಸಿನಲ್ಲೇ ಇದಕ್ಕೆ ಬಹಳ ವಿರೋಧ ಬಂದಿದೆ. ಈ ತಂತ್ರಜ್ಞಾನದ ವಿಶ್ವಸನೀಯತೆ ಮತ್ತು ಸುರಕ್ಷತತೆಯ ಬಗ್ಗೆ ಸರಿಯಾಗಿ ತಿಳಿದಿಲ್ಲ. ಆದ್ದರಿಂದ ಈ ಸ್ಥಾವರಕ್ಕೆ ವ್ಯಾಪಕ ವಿರೋಧ ಬಂದಿದೆ. ಆದರೂ ಯುಪಿಎ-2 ಸರಕಾರ ಈ ವಿರೋಧವನ್ನು ಕಡೆಗಣಿಸುತ್ತಿದೆ.

★


ಗ್ರಾಮೀಣ ಅಭಿವೃದ್ಧಿಗೆ ಕಡಿತ, ಎಂಪಿ ನಿಧಿಗಳಲ್ಲಿ ಹೆಚ್ಚಳ

ಪುಟ 14 ಕ್ಕೆ

‘ತರವಲ್ಲ ತಗೀರಿ, ನಿಮ್ಮ ಬುಶ್ ಭಾಷೆ’

ರಾಜ್ಯಸಭೆಯಲ್ಲಿ ಬೃಂದಾ ಕಾರಟ್

ಆರ್ಥಿಕ ಸರ್ವೇಕ್ಷಣೆಯಲ್ಲಿ ಬೆಲೆಯೇರಿಕೆಗೆ ಕೆಲವು ತರ್ಕಸಂಗತವಲ್ಲದ ಕಾರಣಗಳನ್ನು ಕೊಡಲಾಗಿದೆ... ಅವರು ಕೊಡುವ ಒಂದು ಕಾರಣವೆಂದರೆ, ಈ ಸರಕಾರ ಜನತೆಗೆ ಹೆಚ್ಚಿನ ಖರೀದಿ ಸಾಮರ್ಥ್ಯ ಕೊಟ್ಟಿದೆ; ಹೀಗೆ ಬಳಕೆಯ ಪ್ರಮಾಣ ಹೆಚ್ಚಿದೆ, ಅದರಿಂದಾಗಿ ಬೇಡಿಕೆಯು ಪೂರೈಕೆಯನ್ನು ಮೀರಿ ಬೆಳೆದಿದೆ. ‘ರೇಗ’ ವನ್ನು ಈ ತರ್ಕಕ್ಕೆ ಒಂದು ಉದಾಹರಣೆಯಾಗಿ ಕೊಡಲಾಗಿದೆ. ಇದೆಂತಾ ತರ್ಕ? ಭಾರತ ಜಗತ್ತಿನಲ್ಲಿಯೇ ಅತಿ ದೊಡ್ಡ ಅಪೌಷ್ಟಿಕತೆಯಿಂದ ಬಳಲುವ ಜನಸಂಖ್ಯೆಯನ್ನು ಹೊಂದಿರುವಾಗ, ನೀವು ‘ರೇಗ’ದ ಬಗ್ಗೆ ಮಾತಾಡುತ್ತಿದ್ದಿರಿ. ನಾವು ‘ರೇಗ’ಕ್ಕೆ ಬದ್ಧರು. ಅದಕ್ಕಾಗಿ ನಾವು ಹೋರಾಡಿದ್ದೇವೆ. ದುರದೃಷ್ಟವಶಾತ್, ಅದು ಎಷ್ಟು ಚೆನ್ನಾಗಿ ಕೆಲಸ ಮಾಡಬೇಕಿತ್ತೋ ಹಾಗೆ ಮಾಡುತ್ತಿಲ್ಲ. ಇಂದು, ನೀವು ಅಧಿಕೃತ ಲೆಕ್ಕಾಚಾರಗಳನ್ನು ನೋಡಿದರೂ, ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ 48 ದಿನಗಳಿಗೆ ದಿನಕ್ಕೆ 100ರೂ. ಕೂಲಿ ಸಿಗುತ್ತದೆ ಎಂದಿಟ್ಟುಕೊಳ್ಳಬಹುದು. ನಿಜವಾಗಿ ಅಷ್ಟು ಸಿಗುವುದಿಲ್ಲ. ಆದರೂ ಸರಾಸರಿ ದಿನಕ್ಕೆ ರೂ.13.15 ಬೃಹತ್ ಹೆಚ್ಚಳವಾಗಿದೆ! ಇದರಿಂದ ಜನಗಳ ಬಳಕೆಯ ಪ್ರಮಾಣದಲ್ಲಿ ಅಗಾಧ ಹೆಚ್ಚಳ ಸಾಧ್ಯವೇ?



ಆದ್ದರಿಂದ, ದಯವಿಟ್ಟು ಭಾರತದಲ್ಲಿನ ಬಳಕೆ ಪ್ರಮಾಣದಲ್ಲಿ ಇರುವ ಅಸಮಾನತೆಗಳನ್ನು ನೋಡಿ, ಹೆಚ್ಚು ತಿನ್ನುತ್ತಿದ್ದೀರಿ ಎಂದು ಬಡವರನ್ನು ದೂಷಿಸಬೇಡಿ ಎಂದು ಹಣಕಾಸು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದು ಬುಶ್ ಭಾಷೆ. ಬುಶ್ ಹಾಗೆ ಹೇಳಿದರೆ ಅರ್ಥ ಮಾಡಿಕೊಳ್ಳಬಹುದು; ಆದರೆ ಭಾರತೀಯ ಸರ್ಕಾರದ ವಕ್ತಾರರು ಈ ಭಾಷೆಯಲ್ಲಿ ಮಾತಾಡುತ್ತಾರೆಂದು ನಾವು ನಿರೀಕ್ಷಿಸುವುದಿಲ್ಲ.

- **ಬೃಂದಾ ಕಾರಟ್**, ರಾಜ್ಯ ಸಭೆಯಲ್ಲಿ

ಸಂಪನ್ಮೂಲ ಶಿಕ್ಷಕರ ಹೋರಾಟವನ್ನು ಹತ್ತಿಕ್ಕುವ ಬಿಜೆಪಿ ಸರ್ಕಾರದ ದುಷ್ಟ ಯತ್ನ

■ ಬಿ.ರಾಜಶೇಖರಮೂರ್ತಿ

ಸರ್ಕಾರಿ ಶಾಲೆಗಳಲ್ಲಿರುವ 3 ಲಕ್ಷ ಬಡ ಬಹುವಿಧ ವಿಕಲತೆಯ ಮಕ್ಕಳಿಗೆ ರಾಜ್ಯಾದ್ಯಂತ ಪಾಠ ಮಾಡುತ್ತಿದ್ದ ಸಂಪನ್ಮೂಲ ಶಿಕ್ಷಕರನ್ನು ಕೇಂದ್ರ - ರಾಜ್ಯ ಸರ್ಕಾರಗಳು ನೀತಿಯಿಂದ ಹೊರಹಾಕಲ್ಪಟ್ಟದ್ದನ್ನು ವಿರೋಧಿಸಿ ನ್ಯಾಯಯುತವಾಗಿ ಕಳೆದ 2 ವರ್ಷಗಳಿಂದ ಹೋರಾಡುತ್ತಾ ಬಂದಿದ್ದ ಶಿಕ್ಷಕರು ಅನ್ಯ ಮಾರ್ಗವಿಲ್ಲದೆ ರಾಜ್ಯ ಸರ್ಕಾರವೇ ಸೇವೆಯಲ್ಲಿ ಮುಂದುವರೆಸಲು ಒತ್ತಾಯಿಸಿ ಕಳೆದ ಮಾರ್ಚ್ 8, 2011 ರಿಂದ ಉಪವಾಸ ಧರಣಿಯನ್ನು ಆರಂಭಿಸಿದ್ದರು.

ಒಂದು ವರ್ಷದ, ಎರಡು ವರ್ಷದ ಎಳೆಯ ಕಂದಮ್ಮಗಳ ಜೊತೆಯಲ್ಲಿ ಬನ್ನಪ್ಪ ಪಾರ್ಕ್‌ನಲ್ಲಿ ಶಿಕ್ಷಕಿಯರು ಸೇರಿದ ಸಂಪನ್ಮೂಲ ಶಿಕ್ಷಕರ ದಿಟ್ಟ ಉಪವಾಸ ಚಳುವಳಿಯೂ ಭ್ರಷ್ಟತೆಯ ಕೂಪದಲ್ಲಿರುವ ಅಪ್ರಜಾಸತ್ತಾತ್ಮಕ ಬಿಜೆಪಿ ಸರ್ಕಾರಕ್ಕೆ ಮುಜುಗರ ಶುರುವಾಯಿತು. ದಿನೇ ದಿನೇ ಶಿಕ್ಷಕರ ಕೆಚ್ಚೆದೆಯ ಹೋರಾಟದ ಪರಿಯಿಂದ ಮಾಧ್ಯಮಗಳೂ ಕೂಡ ಕಿವಿಗೊಡುವ ಅನಿವಾರ್ಯತೆ ಪ್ರಾರಂಭವಾಯಿತು. ಇದನ್ನು ಗಮನಿಸಿದ ಬಿಜೆಪಿ ಸರ್ಕಾರ ಸಂಪನ್ಮೂಲ ಶಿಕ್ಷಕರ ಸದ್ದಡಗಿಸಿಲ್ಲವಾದರೆ ಇನ್ನಷ್ಟು ಇಕ್ಕಟ್ಟು ನಮಗೇ ಗ್ಯಾರಂಟಿ ಎಂದು ತಿಳಿದ ಮುಖ್ಯಮಂತ್ರಿಗಳು ನಮ್ಮ ಕಛೇರಿಯಿಂದಲೇ ಸಂಪನ್ಮೂಲ ಶಿಕ್ಷಕರ ಚಳುವಳಿಯನ್ನು ಹತ್ತಿಕ್ಕಲು ಆದೇಶ ಕೊಟ್ಟರು. ಒಂದು ಹೆಜ್ಜೆ ಮುಂದೆ ಹೋಗಿ ಧರಣಿ ನಿರತರನ್ನು ಎತ್ತಂಗಡಿ ಮಾಡಿ ಇಲ್ಲವಾದರೆ ನೀವು ಮನೆಗೆ ಹೋಗಬೇಕಾಗುವುದೆಂದು ಪೊಲೀಸರಿಗೆ ಧಮಕಿಯೂ ಬಿದ್ದಿತ್ತು.

ಇದರಿಂದಾಗಿ ಬೆಚ್ಚಿದ ಪೊಲೀಸ್ ಇಲಾಖೆಯೂ ದಿಢೀರನೆ ಉಪವಾಸ ಧರಣಿ ನಿರತ ಶಿಕ್ಷಕ, ಶಿಕ್ಷಕಿಯರ ಮೇಲೆ ಧಮಕಿ ಹಾಕಿ ತಕ್ಷಣ ಚಳುವಳಿ ಕೈಬಿಟ್ಟು ಮೇಲೇಳಬೇಕು. ಇಲ್ಲವಾದರೆ ಜೈಲಿಗೆ ತಳ್ಳುತ್ತೇವೆಂಬ ಬೆದರಿಕೆವೊಡ್ಡಿದರು.

ನಮ್ಮ ಬದುಕನ್ನು ಮೂರಾಬಟ್ಟೆ ಮಾಡಿ ಈಗಾಗಲೇ ಹೊರದಬ್ಬಲಾಗಿದೆ. ನೀವು ಹೆಚ್ಚು ಮಾತಾಡಬೇಡಿ. ನಿಮ್ಮ ಜೈಲು, ಕೇಸಿಗೆ ನಾವು ಬಗ್ಗುವುದಿಲ್ಲವೆಂಬ ಆಕ್ರೋಶದ ಕೂಗು ಪೊಲೀಸರು ವಾಪಸ್ಸಾಗುವಂತೆ ಮಾಡಿತು. ಆದರೆ ಅಂದೇ ಮತ್ತೊಮ್ಮೆ ಉಪವಾಸದಿಂದ ಅಸ್ವಸ್ಥಗೊಂಡ ಶಿಕ್ಷಕರ ಸ್ಥಿತಿ, ಆಕ್ರಂದನಗಳು ಮಾಧ್ಯಮಗಳಲ್ಲಿ ಬಿತ್ತರಗೊಂಡವು.



ಹಗಲು - ರಾತ್ರಿ ಉಪವಾಸ

ಮೊದಲೇ ಮೈಯೆಲ್ಲಾ ಕೆಸರು ಮಾಡಿಕೊಂಡಿರುವ ಯಡ್ಯೂರಪ್ಪಾಗೆ ಸಂಪನ್ಮೂಲ ಶಿಕ್ಷಕರ ಈ ಚಳುವಳಿಯೂ ಇನ್ನಷ್ಟು ಪೇಚಿಗೆ ಸಿಕ್ಕಿಸುವ ಹಂತವನ್ನು ಮುಟ್ಟಿತು. ಇದನ್ನರಿತ ಬಿಜೆಪಿ ರಾಜ್ಯ ಸರ್ಕಾರ ಪೊಲೀಸರ ಮುಖಾಂತರ ಅಸ್ವಸ್ಥಗೊಂಡಿದ್ದ ಶಿಕ್ಷಕರನ್ನು ಚಿಕಿತ್ಸೆ ಕೊಡಿಸುತ್ತೇವೆಂಬ ನೆಪವೊಡ್ಡಿ ಎಲ್ಲಾ ಶಿಕ್ಷಕರನ್ನು ಬಂಧಿಸಿ ಬೌರಿಂಗ್ ಆಸ್ಪತ್ರೆಗೆ ಬಲಾತ್ಕಾರದಿಂದ ದಾಖಲಿಸಿದ ನಂತರ, 'ಇಲ್ಲಿಂದ ನಿಮ್ಮ ನಿಮ್ಮ ಊರಿಗೆ ಹೊರಡಿ ಇಲ್ಲೇ ಉಳಿದರೆ ಜೈಲಿಗೆ ತಳ್ಳುವುದು ಗ್ಯಾರಂಟಿ' ಎಂದು ಬೆದರಿಸಲಾಗಿದೆ.

ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವ ಸ್ವಾತಂತ್ರ್ಯ ಹಕ್ಕುಗಳು ಬಿಜೆಪಿಯ ಸರ್ಕಾರಗಳಲ್ಲಿ ಸಾಧ್ಯವಿಲ್ಲವೆಂಬ ಈ ಸಂದೇಶ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಘಾಸಿ ಮಾಡುವಂಥದ್ದಾಗಿದೆ. ಪ್ರಜ್ಞಾವಂತ ಪ್ರಗತಿಪರ ಸಂಘಟನೆಗಳು ಎಚ್ಚೆತ್ತು ಒಂದಾಗಿ ಇಂತಹ ಧೋರಣೆಯ ವಿರುದ್ಧ ಸೆಟೆದು ನಿಲ್ಲದೇ ಹೋದರೆ ಸರ್ವಾಧಿಕಾರದ ವ್ಯವಸ್ಥೆಗೆ ನಮ್ಮನ್ನು ನಾವೇ ಬಗ್ಗಿಸಿಕೊಳ್ಳುವಂತಹ ಸ್ಥಿತಿಯನ್ನು ಬಿಜೆಪಿ ಸರ್ಕಾರ ತಂದೊಡ್ಡುತ್ತದೆ. ಹೀಗಾಗಿ ಜನಚಳುವಳಿಯನ್ನು ಹತ್ತಿಕ್ಕುವ ಕಟುಕ ಬಿಜೆಪಿ ಸರ್ಕಾರ ಧೋರಣೆ ವಿರುದ್ಧ ನಾವೆಲ್ಲಾ ಒಂದಾಗೋಣ ಬನ್ನಿ.

ಸಂಪನ್ಮೂಲ ಶಿಕ್ಷಕರು ಬೀದಿಪಾಲಾಗಿದ್ದು ಹೇಗೆ .....

ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಸರ್ಕಾರೇತರ ಸಂಸ್ಥೆಗಳಡಿಯಲ್ಲಿ ರಾಜ್ಯ ಸರ್ಕಾರ ಮೇಲುಸ್ತುವಾರಿಯಲ್ಲಿ 1022 ಸಂಪನ್ಮೂಲ ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿರುವ ಬಹುವಿಧ ವಿಕಲಚೇತನ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುತ್ತಿದ್ದರು. ಹೆಬ್ಬಾವು ನುಂಗಿ ಉಳಿದ (ಸರ್ಕಾರೇತರ ಸಂಸ್ಥೆಗಳ) ಹಣದಲ್ಲಿ ಸಂಪನ್ಮೂಲ ಶಿಕ್ಷಕರಿಗೆ ಕೈ ಸೇರುತ್ತಿದ್ದ ಅತ್ಯಲ್ಪ ಮಾತ್ರ ಅದೂ ಕೂಡ ಅಸಮರ್ಪಕವಾಗಿ. ಈ ರೀತಿಯ ಹಿಂಬಾಗಿಲಿನ ದರೋಡೆಯನ್ನು ಸರ್ಕಾರೇತರ ಸಂಸ್ಥೆಗಳನ್ನು ಬಯಲಿಗೆಳೆದ ಸಂಪನ್ಮೂಲ ಶಿಕ್ಷಕರು ಕೇಂದ್ರ, ರಾಜ್ಯ ಸರ್ಕಾರವೇ ಈ ಮಹತ್ತರ ಯೋಜನೆಯನ್ನು ನಡೆಸಬೇಕೆಂದು ಒತ್ತಾಯಿಸಿದರು. ಕೇಂದ್ರ ಸರ್ಕಾರ ತಕ್ಷಣವೇ ಬಣ್ಣ ಬದಲಾಯಿಸಿದಂತೆ ಯೋಜನೆಯಲ್ಲಿ ಕೆಲ ಮಾರ್ಪಾಡು ಮಾಡಿ ಬೇರೆ ಹೆಸರಿನಲ್ಲಿ ಈ ಯೋಜನೆಯನ್ನು ನಡೆಸಲು ಅನುವು ಮಾಡಿಕೊಟ್ಟು ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿತ್ತಲ್ಲದೆ. ಈ ಹಿಂದೆ ದುಡಿಯುತ್ತಿದ್ದ ಶಿಕ್ಷಕರನ್ನು 'ಸರ್ವ ಶಿಕ್ಷಣ ಅಭಿಯಾನ' ದಡಿಯಲ್ಲಿ ಸೇರಿಸಿಕೊಳ್ಳಬಹುದೆಂಬ ಉದಾಸೀನತೆಯ ಕಾಗದವನ್ನು ರಾಜ್ಯ ಸರ್ಕಾರಗಳಿಗೆ ಒತ್ತಾಗಿತ್ತು.

ನಮ್ಮ ರಾಜ್ಯ ಸರ್ಕಾರ ನಮಗೂ, ನಿಮಗೂ (ಸಂಪನ್ಮೂಲ ಶಿಕ್ಷಕರಿಗೂ) ಎತ್ತಲಿಂದ ಎತ್ತ ಸಂಬಂಧವೆಂಬಂತೆ 2 ವರ್ಷಗಳಿಂದ ದೂರ ಸರಿಯಿತು. ನೆರೆಯ ಕೇರಳ, ತಮಿಳುನಾಡು ಸರ್ಕಾರ ಸರ್ಕಾರಗಳು ಬಹುವಿಧ ವಿಕಲಚೇತನ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಿ ಈ ಹಿಂದೆ ಇದ್ದ ಶಿಕ್ಷಕರನ್ನು ಉಳಿಸಿಕೊಂಡು ಮೇಲ್ದರ್ಜೆಗೇರಿಸಿಕೊಂಡು ಸಾಮಾನ್ಯ ಶಿಕ್ಷಕರಿಗೆ ಸಿಗುವಂತಹ ಅನುಕೂಲಗಳಿಗೆ ಆದ್ಯತೆ ನೀಡಿವೆ. ಆದರೆ ನಮ್ಮ ರಾಜ್ಯ ಸರ್ಕಾರ ಈಗ ಬೀದಿಗೆ ಬಿದ್ದಿರುವ ಈ 1022 ಸಂಪನ್ಮೂಲ ಶಿಕ್ಷಕರಿಂದಲೇ ಸರ್ಕಾರಿ ಸಾಮಾನ್ಯ ಶಿಕ್ಷಕರಿಗೆ 20 ರಿಂದ 40 ದಿವಸ ತರಬೇತಿಗೊಳಿಸಿ ಈ 1022ರ ಸಂಪನ್ಮೂಲ ಶಿಕ್ಷಕರಿಗೆ ಮೀಸಲಿಟ್ಟ ಹಣವನ್ನು ಸಾಮಾನ್ಯ ಶಿಕ್ಷಕರಿಗೆ (ಸರ್ಕಾರಿ ಶಿಕ್ಷಕರಿಗೆ) ನೀಡುತ್ತಿದೆ. ಜೊತೆಗೆ ವಿಕಲಚೇತನ ಮಕ್ಕಳಿಗೆ ವೈಜ್ಞಾನಿಕವಾಗಿ ಕೊಡಬೇಕಿರುವ ಶಿಕ್ಷಣ ನೀತಿಗಳನ್ನು ಅನುಸರಿಸದೇ ಶೈಕ್ಷಣಿಕ ಕಾನೂನುಗಳನ್ನು ರಾಜ್ಯ ಸರ್ಕಾರ ಕಡೆಗಣಿಸಿದೆ. ಹೀಗಾಗಿ 1022 ಶಿಕ್ಷಕರ ಉದ್ಯೋಗದ ಭದ್ರತೆಯ ಹಿಂದೆ ಲಕ್ಷಾಂತರ ಬಡ ಬಹುವಿಧ ಮಕ್ಕಳ ಭವಿಷ್ಯಕ್ಕಾಗಿ ವೈಜ್ಞಾನಿಕ ಶಿಕ್ಷಣದ ಅತ್ಯವಶ್ಯವೂ ಇದೆ. ಹೀಗಾಗಿ ಮುಂದೆ ಯುವಜನ ಸಂಘಟನೆ (ಡಿವೈಎಫ್‌ಐ) ಅಂಗವಿಕಲ ಮಕ್ಕಳ ಮತ್ತು ಪಾಲಕರ ಹಾಗೂ ಸಂಪನ್ಮೂಲ ಶಿಕ್ಷಕರ ಚಳುವಳಿಯು ಮುಂದುವರೆಯಬೇಕಿದೆ. ಪ್ರಜ್ಞಾವಂತರೆಲ್ಲಾ ಬೆಂಬಲಿಸಬೇಕಾಗಿದೆ.

ಯಾವ 'ಟಿ ವಿ' ಯಾರ ಕೈಗೋ?

ಪುಟ 7ರಿಂದ

ಆ ಕ್ಷೇತ್ರದಲ್ಲಿ ಯಾವೊಂದು ಗಂಧ ಗಾಳಿಯೂ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಅವರ ನೆರವಿಗೆ ನಿಲ್ಲುವವರೇ ಈ ಖ್ಯಾತ ನಾಮ ಸಂಪಾದಕರು ಅಥವಾ ಹೆಸರಾಂತ ಮಾದ್ಯಮಗಳ ಮುಖ್ಯಸ್ಥರು.

ಇವತ್ತಿನ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇತ್ತೀಚಿನ ವರ್ಷಗಳವರೆಗೆ ಒಂದು ಪತ್ರಿಕೆ ಅಥವಾ ಟಿ.ವಿ. ಚಾನಲ್‌ನ ಮುಖ್ಯಸ್ಥನ ಅತಿ ಹೆಚ್ಚಿನ ಸಂಬಳವೆಂದರೆ ಎಷ್ಟೇ ಲೆಕ್ಕ ಹಾಕಿದರೂ 30 ರಿಂದ 40 ಸಾವಿರ ದಾಟಿರಲಿಲ್ಲ. ಆದರೆ ಈಗ ಲಕ್ಷ ಲಕ್ಷ ಎಂಬಂತೆ ಏರಿಕೆಯಾಗುತ್ತಿದೆ. ಈಗ ವರದಿಗಾರರು/ ಸುದ್ದಿ ಸಂಪಾದಕರ ಸಂಬಳಗಳು ಭಾರೀ ಏರಿಕೆ ಕಂಡಿವೆ. ಒಂದು ಪತ್ರಿಕೆ/ ಚಾನಲ್ ಬಿಟ್ಟು ಮತ್ತೊಂದು ವಾಹಿನಿ/ ಪತ್ರಿಕೆ ಸೇರಿದರೆ ಸಾಕು. ಅವರ ಸಂಬಳ ದುಪ್ಪಟ್ಟಾಗಿರುತ್ತದೆ. ತಮ್ಮ ಸಂಬಳ ಸೌಲತ್ತುಗಳನ್ನು ಏರಿಸಿಕೊಳ್ಳುವುದಕ್ಕಾಗಿಯೇ ಹೊಸ ಹೊಸ ಪತ್ರಿಕೆ/ ವಾಹಿನಿ ಆರಂಭಿಸಲು ದುಡ್ಡಿನ ದಣಿಗಳಿಗೆ ಹಲವಾರು ಹಿರಿಯ ಪತ್ರಕರ್ತರೇ ಪ್ರೇರಣೆ ನೀಡುತ್ತಿದ್ದಾರೆ ಎಂಬುದು ದಿನಕಳೆದಂತೆ ಸ್ಪಷ್ಟಗೊಳ್ಳುತ್ತಿದೆ. ಮತ್ತೊಂದೆಡೆ ಹಲವಾರು ಟಿ.ವಿ. ವಾಹಿನಿಗಳ ಮುಖ್ಯಸ್ಥರು ಅಥವಾ ಹಿರಿಯ ಪತ್ರಕರ್ತರೆನಿಸಿಕೊಂಡವರು ಕೇವಲ ಮುಖ್ಯಸ್ಥರಾಗಿ ಮಾತ್ರ ಉಳಿದಿಲ್ಲ. ಬದಲಾಗಿ ಅವರವರ ಮಾಲೀಕರನ್ನು ನಿಯಂತ್ರಿಸುವ ಅಥವಾ ಅವರೊಂದಿಗೆ ಸೇರಿ ಬಂಡವಾಳ ಹೂಡುವ ಮಟ್ಟಕ್ಕೂ ಬೆಳೆದಿದ್ದಾರೆ.

ಒಟ್ಟಾರೆ ಮಾದ್ಯಮ ಕ್ಷೇತ್ರದ ದೃಷ್ಟಿಕೋನ, ಮಾರುಕಟ್ಟೆ ಕೇಂದ್ರಿತ ಮತ್ತು ವ್ಯಾಪಾರ ಅಥವಾ ಉದ್ಯಮವಾಗಿ ಮಾರ್ಪಟ್ಟಿರುವುದರಿಂದ ಇಲ್ಲಿ ಸಾಮಾಜಿಕ ಕಳಕಳಿ ಎಂಬುದಾಗಲಿ, ರೈತರ, ಕಾರ್ಮಿಕರ ಬವಣೆಗಳಿಗೆ ಸ್ಪಂದನೆಯೆಂದಾಗಲಿ ಮಾದ್ಯಮದಲ್ಲಿ ಪ್ರಾಶಸ್ತ್ಯ ಪಡೆಯುತ್ತಿಲ್ಲ. ಬದಲಾಗಿ ಇತ್ತೀಚೆಗೆ ಹಿರಿಯ ಪತ್ರಕರ್ತರೊಬ್ಬರು ಸುದ್ದಿ ಮಾದ್ಯಮಗಳಲ್ಲಿನ ಎಲ್ಲಾ ಕಾಲಂಗಳನ್ನು, ಸುದ್ದಿಗಳನ್ನು ಮಾರುಕಟ್ಟೆಯೇ ನಿಯಂತ್ರಿಸುತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೌದು ಅವರ ಅಭಿಪ್ರಾಯ ವಾಸ್ತವದಲ್ಲಿ ಇವತ್ತಿನ ಮಾಧ್ಯಮಗಳ ಕಾರ್ಯವಿಧಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಯುಪಿಎ ದರ್ಬಾರ್....

ಪುಟ 13 ರಿಂದ

ಯುಪಿಎ-2 ಹಣಕಾಸು ಮಂತ್ರಿಗಳು 'ಸಂಸತ್ ಸದಸ್ಯರ ಸ್ಥಳೀಯ ಅಭಿವೃದ್ಧಿ ನಿಧಿ'(ಎಂಪಿಎಲ್ ಎಡಿ) ಯನ್ನು 2 ಕೋಟಿಯಿಂದ 5ಕೋಟಿ ರೂ.ಗಳಿಗೆ ಏರಿಸಿದ್ದಾರೆ. ಇದರಿಂದ ಈ ಬಾಬ್ತಿಗೆ ನೀಡುವ ಹಣದಲ್ಲಿ 2,370 ಕೋಟಿ ರೂ. ಹೆಚ್ಚಳವಾದಂತಾಗಿದೆ.. ಇದೇ ಹಣಕಾಸು ಮಂತ್ರಿಗಳು ತಮ್ಮ ಬಜೆಟಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ನೀಡಿರುವ ಹಣದಲ್ಲಿ 2,000 ಕೋಟಿ ರೂ. ಖೋತಾ ಮಾಡಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬೇಕು.

ನಿರೀಕ್ಷಿಸಿದಂತೆ, ಎಡಪಕ್ಷಗಳ ಸದಸ್ಯರನ್ನು ಬಿಟ್ಟು ಬೇರೆಲ್ಲ ಪಕ್ಷಗಳ ಸಂಸತ್ ಸದಸ್ಯರಿಗೆ ಇದರಿಂದ ಮಹದಾನಂದವಾಗಿದೆ. ಇವು ಸಂಸತ್ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಅಲ್ಲಿನ ಚುನಾಯಿತ ಸಂಸ್ಥೆಗಳ ಅಭಿವೃದ್ಧಿ ಆದ್ಯತೆಗಳನ್ನು ನಿರ್ಲಕ್ಷಿಸಿ ನೇರವಾಗಿ ಖರ್ಚು ಮಾಡಲೆಂದು ಕೊಡುವ ಹಣ. ವಾಸ್ತವವಾಗಿ ಯೋಜಿತ ಅಭಿವೃದ್ಧಿಗೆ ಬಳಕೆಯಾಗುವಂತಹ ಹಣ ಇದಲ್ಲ, ಸಂಸತ್ ಸದಸ್ಯ ತನ್ನ ವೈಯಕ್ತಿಕ ಪ್ರಭಾವ ಹೆಚ್ಚಿಸಿಕೊಳ್ಳಲು ಬಳಕೆಯಾಗುವ ಸಾಧ್ಯತೆಗಳೇ ಹೆಚ್ಚು. ಸಹಜವಾಗಿಯೇ ಈ ಹಣದ ದುರ್ಬಳಕೆಯ ಹಲವಾರು ದೂರುಗಳು ಸರಕಾರದ ಬಳಿ ಬಂದಿವೆ. ಇದಕ್ಕೆ ಬೂರ್ಜ್ವಾ ಪಕ್ಷಗಳ ಮತ್ತು ಸ್ವತಃ ಸರಕಾರದ ಸಬೂಬು- ಯಾವ ಯೋಜನೆಯಲ್ಲಿ ಹಣದ ದುರುಪಯೋಗ ಇಲ್ಲ? ಬೂರ್ಜ್ವಾ ನೈತಿಕತೆ ಎಂದರೆ ಇದೇ ತಾನೇ?

ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಜನಾಂದೋಲನ

ಪುಟ 8 ರಿಂದ

ಮೂರು ನಾಲ್ಕು ಕುಟುಂಬಗಳಿಗೆ ಪ್ರತ್ಯೇಕ ಕಾರ್ಡುಗಳು ಸಿಕ್ಕಿಲ್ಲ. ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ತಾತ್ಕಾಲಿಕ ರೇಷನ್ ಕಾರ್ಡುಗಳಿಗೆ ಕಳೆದ ಕೆಲವು ತಿಂಗಳಿಗಳಿಂದ ರೇಷನ್ ಕೊಡಲಾಗುತ್ತಿಲ್ಲ. ಎ.ಪಿ.ಎಲ್. ಮತ್ತು ಬಿ.ಪಿ.ಎಲ್. ಎಂಬ ಬೇಧವನ್ನೇ ತೆಗೆದುಹಾಕಿ, ಎಲ್ಲ ಕುಟುಂಬಗಳಿಗೂ ರೇಷನ್ ಕಾರ್ಡುಗಳನ್ನು ಒದಗಿಸುವ ಮೂಲಕ ಸಮಸ್ಯೆಗೆ, ಶಾಶ್ವತ ಪರಿಹಾರ ಕಂಡುಕೊಳ್ಳಬಹುದಾಗಿದೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಜನತೆಯ ಆಹಾರ ಹಕ್ಕನ್ನು ದಮನ ಮಾಡಲು ಹೊರಟಿದೆ.

ವಸತಿರಹಿತರ ಸಮಸ್ಯೆ :

ವಾಸಕ್ಕೆ ಸ್ವಂತ ಮನೆ ಇಲ್ಲದವರ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದೆ. ರಾಜ್ಯದ ವಸತಿರಹಿತರ ಸಮೀಕ್ಷೆ ನಡೆಸುವ ಬಜೆಟ್ ಪ್ರಸ್ತಾವ ಸ್ವಾಗತಾರ್ಹವಾಗಿದೆ. ಆದರೆ ಸರ್ಕಾರ ತನ್ನ ಮಾತನ್ನು ಈಡೇರಿಸುತ್ತದೆ ಎಂಬ ಯಾವ ಭರವಸೆಯೂ ಇಲ್ಲದಂತಾಗಿದೆ. ಈ ಸಮೀಕ್ಷೆಗೆ ಕಾಲಮಿತಿ ಘೋಷಣೆ ಮಾಡಲಾಗಿಲ್ಲ ಮಾತ್ರವಲ್ಲ. ಅದಕ್ಕಾಗಿ ಹಣವನ್ನು ಮೀಸಲಿಟ್ಟಿಲ್ಲ. ಈಗಾಗಲೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ/ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ವಸತಿರಹಿತರ ಸಾವಿರಾರು ಅರ್ಜಿಗಳು ಇತ್ಯರ್ಥವಾಗದೆ ಕೊಳೆಯುತ್ತಿದೆ. ಒಂದೇ ಮನೆಯಲ್ಲಿ ಮೂರು ನಾಲ್ಕು ಕುಟುಂಬಗಳು ವಾಸ ಮಾಡುತ್ತಿದ್ದು ರಾತ್ರಿ ಹೊತ್ತು ನಿದ್ದೆ ಮಾಡಲು ಗುಡಿ ಗುಂಡಾರಗಳಲ್ಲಿ ಆಶ್ರಯ ಪಡೆಯುವ ದೃಶ್ಯ ಪ್ರತಿಯೊಂದು ಹಳ್ಳಿಯಲ್ಲಿ ಸಾಮಾನ್ಯವಾಗಿದೆ. ಇದರ ಜೊತೆಯಲ್ಲಿ ದಲಿತ ಕೇರಿಗಳು, ನಗರದಲ್ಲಿ ಬೆಳೆಯುತ್ತಿರುವ ಕೊಳಚೆ ಪ್ರದೇಶ ಸ್ಥಿತಿಗತಿಗಳು ಚಿಂತಾಜನಕವಾಗಿವೆ. ಸರಿಯಾದ ರಸ್ತೆಗಳಿಲ್ಲ, ಕುಡಿಯುವ ನೀರು, ಬೀದಿ ದೀಪಗಳ ವ್ಯವಸ್ಥೆಯಿಲ್ಲ, ಒಳಚರಂಡಿ ನಿರ್ವಹಣೆಯಿಲ್ಲ. ಸಾರ್ವಜನಿಕ ಶೌಚಾಲಯಗಳಿಲ್ಲ, ಇದಕ್ಕಾಗಿ ರಾಜ್ಯ ಸರ್ಕಾರ ಹಣವನ್ನು ತೆಗೆದಿಟ್ಟಿಲ್ಲ. ವಸತಿರಹಿತರಿಗಾಗಿ ಮನೆಗಳನ್ನು ಕಟ್ಟಲು ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಲು ಒದಗಿಸುವುದಾಗಿ ಹೇಳಿರುವ 67 ಕೋಟಿ ರೂ.ಗಳು ಯಾವ ಮೂಲೆಗೂ ಸಾಲದು. ಮಳೆಯಿಂದ ಮನೆಗಳನ್ನು ಕಳೆದುಕೊಂಡು ಸಂತ್ರಸ್ತರಾದವರಿಗಾಗಿ ಮನೆ ಕಟ್ಟಲು ಕೇಂದ್ರ ಸರ್ಕಾರದಿಂದ ಹಾಗೂ ಸಾರ್ವಜನಿಕರಿಂದ ಕೋಟಿಗಟ್ಟಲೆ ರೂ. ಹಣ ಹರಿದುಬಂದಿದ್ದರೂ ಮನೆಗಳ ನಿರ್ಮಾಣ ಕಾರ್ಯ ಆಮೆಗತಿಯಿಂದ ನಡೆಯುತ್ತಿದ್ದು ಮನೆಗಳ ನಿರ್ಮಾಣ ಅತ್ಯಂತ ಕಳಪೆ ಗುಣಮಟ್ಟದ್ದಾಗಿದೆ.

ಇನ್ನು ಸರ್ಕಾರಿ ಜಾಗೆಯಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಅನೇಕ ವರ್ಷಗಳಿಂದ ವಾಸ ಮಾಡುತ್ತಿರುವ ಬಡವರಿಗೆ ಹಕ್ಕುಪತ್ರಗಳನ್ನು ಕೊಡಲು ಸರ್ಕಾರ ಮುಂದಾಗುತ್ತಿಲ್ಲ. ಅಂತಹ 20 ಲಕ್ಷ ಮನೆಗಳಿಗೆ ನನ್ನ ಮನೆ, ನನ್ನ ಸ್ವತ್ತು ಹೆಸರಿನಲ್ಲಿ ಹಕ್ಕುಪತ್ರ ಕೊಡುವ ಭರವಸೆಯ ಬಗ್ಗೆ ಜನರಿಗೆ ಭರವಸೆಯೇ ಇಲ್ಲವಾಗಿದೆ. ಅದರಂತೆಯೇ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಬಳಸಿಕೊಂಡು ಅರಣ್ಯ ಪ್ರದೇಶದಲ್ಲಿ ಮನೆ ಕಟ್ಟಿಕೊಂಡು ವಾಸ ಇರುವ ಬಡವರ ಹಕ್ಕುಪತ್ರಗಳನ್ನು ನೀಡುವ ಪ್ರಕ್ರಿಯೆಗೆ ರಾಜ್ಯದಲ್ಲಿ ಇದುವರೆಗೆ ಚಾಲನೆಯೇ ದೊರೆತಿರುವುದಿಲ್ಲ.

ಅನಧಿಕೃತ ಭೂಸಾಗುವಳಿ ಸಕ್ರಮಗೊಳಿಸುವ ಪ್ರಶ್ನೆ :

ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿರುವ ಬಡವರ ಪ್ರಶ್ನೆ ಅನೇಕ ವರ್ಷಗಳಿಂದ ನೆನಗುದಿಗೆ ಬಿದ್ದಿದೆ. ನಮೂನೆ 50 ಮತ್ತು 53 ರಲ್ಲಿ ಸಲ್ಲಿಸಲಾದ ಲಕ್ಷಾಂತರ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. ಅಥವಾ ಇತ್ಯರ್ಥವಾಗದೆ ಉಳಿದಿವೆ. ಈ ಭೂಮಿಯನ್ನೇ ಅವಲಂಭಿಸಿರುವ ಬಡವರಿಗೆ ತಮ್ಮ ಭೂಮಿಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಯಾವುದೇ ಯೋಜನೆಯ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ. ಅದರಂತೆಯೇ ಅರಣ್ಯ ಭೂಮಿ ಎಂದು ಕರೆದುಕೊಳ್ಳುವ ಮರಗಳೇ ಇಲ್ಲದ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದಿರುವವರಿಗೆ ನ್ಯಾಯ ದೊರೆತಿಲ್ಲ. 2006 ರ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಗೆ ಬಂದ ನಂತರವು ರಾಜ್ಯ ಸರ್ಕಾರದ ಅನಾಸಕ್ತಿಯಿಂದ ಬಡವರಿಗೆ ಕಾಯ್ದೆಯ ಪ್ರಯೋಜನ ದೊರೆಯದಂತಾಗಿದೆ. 2006 ರ ಅರಣ್ಯ ಹಕ್ಕುಗಳ ಕಾಯ್ದೆ ಕೇವಲ ಆದಿವಾಸಿ/ ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಮಾತ್ರ ಅನುಕೂಲಕರವಾಗಿದ್ದು, ಪರಿಶಿಷ್ಟ ಜಾತಿಯವರಿಗಾಗಲಿ, ಹಿಂದುಳಿದ ಮತ್ತು ಇತರ ಸಮುದಾಯಗಳ ಭೂರಹಿತ ಬಡವರಿಗಾಗಲಿ ಇದರ ಪ್ರಯೋಜನ ಸಿಗುತ್ತಿಲ್ಲ. ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ ಉಳಿದ ಸಮುದಾಯಗಳು ಈ ಕಾಯ್ದೆಯ ಅಡಿಯಲ್ಲಿ ಅರಣ್ಯ ಭೂಮಿಯ ಹಕ್ಕನ್ನು ಪಡೆಯಬೇಕಾದರೆ ಕಳೆದ 75 ವರ್ಷಗಳಿಂದ ಅವರು ಸದರಿ ಭೂಮಿಯಲ್ಲಿ ಬೇಸಾಯ ಮಾಡಿಕೊಂಡು ಬಂದವರಾಗಿರಬೇಕೆಂಬ ಷರತ್ತು ವಿಧಿಸಲಾಗಿರುವುದು ದುರದೃಷ್ಟಕರವಾಗಿದೆ. ಅದರ ತಿದ್ದುಪಡಿಗಾಗಿ ಒತ್ತಾಯಿಸಲು ರಾಜ್ಯ ಸರ್ಕಾರ ಮುಂದಾಗಬೇಕಾಗಿದೆ. ಆದರೆ ಯಡಿಯೂರಪ್ಪ ಸರ್ಕಾರಕ್ಕೆ ಇದೊಂದು ಆದ್ಯತೆಯ ಪ್ರಶ್ನೆ ಆಗಿರುವುದಿಲ್ಲ. ಹೀಗಾಗಿ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಡವರನ್ನು ಅರಣ್ಯ ಇಲಾಖೆಯವರು ಆಗಾಗ ಅವರು ಬೆಳೆದ ಪೈರನ್ನು ಧ್ವಂಸ ಮಾಡುತ್ತಾ ಅವರನ್ನು ಒಕ್ಕಲೆಬ್ಬಿಸುತ್ತಿರುತ್ತಾರೆ. ಆದರೆ ಅದೇ ಸಮಯದಲ್ಲಿ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಮಾಡುವ ಲೂಟಿಕೋರರೊಂದಿಗೆ ಕೈಜೋಡಿಸಿಕೊಂಡಿರುತ್ತಾರೆ.

ಇಂತಹ ಜನವಿರೋಧಿ, ಜನರ ಪ್ರಶ್ನೆಗಳಿಗೆ ಕುರುಡಾಗಿರುವ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ವ್ಯಾಪಕವಾದ ಜನಾಂದೋಲನವನ್ನು ನಡೆಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ನಿರ್ಧರಿಸಿದೆ. ಏಪ್ರಿಲ್ ತಿಂಗಳಲ್ಲಿ ನಡೆಯುವ ಈ ಚಳುವಳಿಯ ಕುರಿತು ಈ ಲೇಖನದ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಯುಪಿಎ 'ಹಸಿರುಕ್ರಾಂತಿ'....

ಪುಟ 9 ರಿಂದ

ಪ್ರ: ಆರ್ಥಿಕ ಬೆಳವಣಿಗೆ ಆಗುತ್ತಿರುವಾಗಲೂ ದೇಶ ಅಪೌಷ್ಠಿಕತೆಯಿಂದೇಕೆ ಬಳಲುತ್ತಿದೆ?

ಉ: ಹೆಚ್ಚಿನ ಆರ್ಥಿಕ ಬೆಳವಣಿಗೆ ಹೆಚ್ಚಿದ ಆಹಾರ ಸೇವನೆಯನ್ನಾಗಲಿ ರೈತರ ಶ್ರೀಮಂತಿಕೆಯನ್ನಾಗಲಿ ಬಿಂಬಿಸುವುದಿಲ್ಲ. ದೇಶದ ಒಟ್ಟು ಉತ್ಪಾದನೆ ಹೆಚ್ಚುತ್ತಿರಬಹುದು. ಆದರೆ ಅದರಲ್ಲಿ ಕೃಷಿಯ ಪಾಲು ಕುಗ್ಗುತ್ತಿದೆ. ಕೃಷಿಯ ಮೇಲೆ ಅವಲಂಬಿತರಾದವರ ಸಂಖ್ಯೆ ಹೆಚ್ಚುತ್ತಿದೆ. ಹಿಡುವಳಿಯ ಗಾತ್ರ ಕಡಿಮೆಯಾಗುತ್ತಿದೆ. ಪೌಷ್ಟಿಕತೆಯನ್ನು ಹೆಚ್ಚಿಸಲು ಸರ್ಕಾರದ ಬಳಿ ಯೋಜನೆಗಳ ದೊಡ್ಡ ಪಟ್ಟಿಯೇ ಇದೆ. ಆದರೆ ಈ ಯೋಜನೆಗಳಿಂದ ಪೌಷ್ಟಿಕತೆ ಹೆಚ್ಚುವಂತೆ ಕಾಣುವುದಿಲ್ಲ. ಇವುಗಳಲ್ಲಿ ಸಮಗ್ರ ದೃಷ್ಟಿಕೋನ ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ.

ಕಡಲ ತಡಿ....

ಪುಟ 6 ರಿಂದ

ಉಪಸ್ಥಿತರಿದ್ದರು.

ಮಂಗಳೂರು ಪುರಭವನದಲ್ಲಿ ಮಾರ್ಚ್ 7 ರಂದು ನಡೆದ ದಕ್ಷಿಣ ಕನ್ನಡ ಜಿಲ್ಲಾ ಭವಿಷ್ಯ ನಿಧಿ ಪಿಂಚಣಿದಾರರ ಸಮಾವೇಶದ ಅಧ್ಯಕ್ಷತೆಯನ್ನು ಆಲ್ ಇಂಡಿಯಾ ಬೀಡಿ ವರ್ಕರ್ಸ್ ಫೆಡರೇಷನ್‌ನ ರಾಷ್ಟ್ರಾಧ್ಯಕ್ಷರಾದ ಬಿ.ಮಾಧವ ವಹಿಸಿದ್ದರು. ಸಮಾವೇಶವನ್ನು ಉದ್ದೇಶಿಸಿ ಕೇರಳ ರಾಜ್ಯ ಭವಿಷ್ಯನಿಧಿ ಪಿಂಚಣಿದಾರರ ಸಂಘದ ಅಧ್ಯಕ್ಷ ಕೆ.ಪವಿತ್ರನ್ ಕೂಡಾ ಮಾತನಾಡಿದರು. ಕೇರಳ ರಾಜ್ಯ ಸಂಘದ ಕಾರ್ಯದರ್ಶಿ ಕೆ.ಟಿ.ಮಾಧವನ್, ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕ ಸುಕುಮಾರ್, ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣಶೆಟ್ಟಿ, ವಸಂತ ಆಚಾರಿ, ಕೆ.ಆರ್.ಶ್ರೀಯಾನ್ ಹಾಗೂ ಜಿಲ್ಲೆಯ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಸಮಾವೇಶದಲ್ಲಿ ಭಾಗವಹಿಸಿದ್ದರು. ಒಂದು ಸಾವಿರದ ಇನ್ನೂರು ಮಂದಿಗೆ ಅವಕಾಶವುಳ್ಳ ಮಂಗಳೂರು ಪುರಭವನವು ಪಿಂಚಣಿದಾರ ಕಾರ್ಮಿಕರಿಂದ ತುಂಬಿ ತುಳುಕುತ್ತಿತ್ತು. ಸಮಾವೇಶವು ಕೆಲವು ನಿರ್ಣಯಗಳನ್ನು ಕೈಗೊಂಡಿದ್ದು ಅದರಲ್ಲಿ ಮಾಸಿಕ ರೂ.1500 ಕನಿಷ್ಠ ಪಿಂಚಣಿ ನಿಗದಿಗೊಳಿಸುವಂತೆ ನೌಕರರ ಪಿಂಚಣಿ ಕಾಯಿದೆ 1995 ಕ್ಕೆ ತಿದ್ದುಪಡಿ ಮಾಡಬೇಕು; ಪಿಂಚಣಿ ಪಾವತಿಯನ್ನು ಗ್ರಾಹಕ ಬೆಲೆ ಸೂಚ್ಯಾಂಕಕ್ಕೆ ಜೋಡಿಸಬೇಕು; 100 ತಿಂಗಳುಗಳ ಪಿಂಚಣಿಯ ಮೂರನೇ ಒಂದು ಭಾಗವನ್ನು ಏಕಗಂಟಿನಲ್ಲಿ ಮುಂಗಡವಾಗಿ ನೀಡುವ ಕಮ್ಯೂಟೇಶನ್ ಪದ್ಧತಿಯನ್ನು ಮರಳಿ ಅನುಷ್ಠಾನಕ್ಕೆ ತರಬೇಕು ಎಂದು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳು ಮುಖ್ಯವಾಗಿವೆ.

ಮಂಗಳೂರು ಸಮಾವೇಶವು ದಕ್ಷಿಣಕನ್ನಡ ಜಿಲ್ಲಾ ಭವಿಷ್ಯನಿಧಿ ಪಿಂಚಣಿದಾರರ ಸಂಘವನ್ನು ಆಯ್ಕೆ ಮಾಡಿದ್ದು, ವಸಂತ ಆಚಾರಿ ಅಧ್ಯಕ್ಷರಾಗಿಯೂ ಸುಕುಮಾರ್ ಕಾರ್ಯದರ್ಶಿಯಾಗಿಯೂ, ಜೆ.ಬಾಲಕೃಷ್ಣ ಶೆಟ್ಟಿ ಖಜಾಂಚಿಯಾಗಿಯೂ ಆಯ್ಕೆಯಾಗಿರುತ್ತಾರೆ. ಬರುವ ಮಾರ್ಚ್ 29 ಕ್ಕೆ ಮಂಗಳೂರಿನ ಭವಿಷ್ಯನಿಧಿ ಕಚೇರಿಯ ಮುಂದೆ ಪ್ರತಿಭಟನಾ ಪ್ರದರ್ಶನ ಮಾಡಲು ಸಮಾವೇಶ ಕರೆಕೊಟ್ಟಿರುತ್ತದೆ.

ಮಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ

ಬೆಲೆ ಏರಿಕೆಯನ್ನು ತಡೆಗಟ್ಟಬೇಕು, ಆಹಾರದ ಹಕ್ಕನ್ನು ಮೂಲಭೂತ ಹಕ್ಕಾಗಿಸಬೇಕು ಹಾಗೂ ಶಾಸನಸಭೆಗಳಲ್ಲಿ 33 ಶೇಕಡಾ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ಅನುಷ್ಠಾನಗೊಳಿಸಬೇಕು ಎಂಬ ಬೇಡಿಕೆಗಳನ್ನು ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆಯು ರಾಷ್ಟ್ರಾದ್ಯಂತ ಪ್ರದರ್ಶನಗಳನ್ನು ಹಮ್ಮಿಕೊಂಡುದರ ಭಾಗವಾಗಿ ಮಂಗಳೂರಿನಲ್ಲಿ ಮಾರ್ಚ್ 9ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ದಕ್ಷಿಣಕನ್ನಡ ಜಿಲ್ಲಾ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಸುಕನ್ಯಾ ಬೆಳ್ತಂಗಡಿ ಅವರು ಕೇಂದ್ರ, ರಾಜ್ಯ ಸರಕಾರಗಳು ಮಹಿಳೆಯರ ಸಮಸ್ಯೆಗಳನ್ನು ಕಡೆಗಣಿಸುತ್ತಿವೆ; ಗರ್ಭಿಣಿ ಸ್ತ್ರೀಯರ ತೀವ್ರತರದ ಅಪೌಷ್ಠಿಕತೆ, ಅವಶ್ಯಕ ಪೌಷ್ಠಿಕ ಆಹಾರವನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಬಡಜನರಿಗೆ ನೀಡದಿರುವುದು, ರೂ.2 ಕ್ಕೆ ಕೆ.ಜಿ. ಅಕ್ಕಿ ನೀಡುವ ವಾಗ್ದಾನವನ್ನು ಮರೆತಿರುವುದಕ್ಕೆ ಸರಕಾರಗಳ ಮೇಲೆ ತೀವ್ರ ವಾಗ್ದಾಳಿ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಮೂಡಬಿದ್ರಿ ಪುರಸಭಾ ಉಪಾಧ್ಯಕ್ಷೆ ರಮಣಿ, ಮಂಗಳೂರು ಮಹಾನಗರ ಪಾಲಿಕೆ ಸದಸ್ಯೆ ಜಯಂತಿ ಬಿ.ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ಪದ್ಮಾವತಿ ಶೆಟ್ಟಿ ಮಾತನಾಡಿದರು. ಸಿಐಟಿಯು ಮುಖಂಡ ವಸಂತ ಆಚಾರಿ, ಡಿವೈಎಫ್‌ಐನ ಮುನೀರ್ ಕಾಟಿಪಳ್ಳ, ಸಮುದಾಯದ ವಾಸುದೇವ ಉಚ್ಚಿಲ್, ಜನವಾದಿ ಸಂಘಟನೆಯ ವಸಂತ ಕುಪ್ಪೆ ಪದವು, ಭಾರತಿ ಬೋಳಾರ, ಕಿರಣಪ್ರಭಾ, ವಿಲಾಸಿನಿ ತೊಕ್ಕೊಟ್ಟು ಮೊದಲಾದವರು ಭಾಗವಹಿಸಿದ್ದರು.

JANASHAKTHI KANNADA VARA PATRIKE MARCH 27, 2011 Price : Rs. 5/- RNI No. KARKAN /2006/17926 . Posted on every Satuarday Postal Reg. No.
Posted at MBC Bangalore GPO

ಜಗದಗಲ ಮಹಿಳಾ ದಿನದ ಶತಮಾನೋತ್ಸವದ ಝಲಕ್



ಮಹಿಳಾ ದಿನದ ಶತಮಾನೋತ್ಸವ ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ವ್ಯಾಪಕವಾಗಿ ಆಚರಿಸಲಾಯಿತು. ರಶ್ಯಾ, ಉಕ್ರೇನ್, ವಿಯೇಟ್ನಾಂ, ಜಾಂಬಿಯ ಮುಂತಾದ 25 ದೇಶಗಳಲ್ಲಿ ಅಂದು ರಜಾದಿನವಾಗಿತ್ತು. ವಿಶ್ವಸಂಸ್ಥೆಯ ಹೊಸ ಮಹಿಳಾ ಸಂಘಟನೆ, ಕಾರ್ಮಿಕ ಸಂಘಟನೆ ಐಎಲ್‌ಒ, ಆರೋಗ್ಯ ಸಂಘಟನೆ ಡಬ್ಲ್ಯೂಎಚ್‌ಒ ಮುಂತಾದ ಇತರ ಹೆಚ್ಚಿನ ಸಂಘಟನೆಗಳು ಜಗತ್ತಿನಾದ್ಯಂತ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ವಿಶ್ವಸಂಸ್ಥೆಯ ಶತಮಾನೋತ್ಸವ ಥೀಮ್ "ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ಎಲ್ಲಾ ರೀತಿಯ ಹಿಂಸಾಚಾರ ನಿಲ್ಲಿಸಲು, ಪುರುಷರು ಮತ್ತು ಮಹಿಳೆಯರು". ಅಲ್ಲದೆ ಮಹಿಳಾ, ಕಾರ್ಮಿಕ, ಸರ್ಕಾರ, ಸರ್ಕಾರೇತರ ಸಂಘಟನೆಗಳು ಸಹ ವ್ಯಾಪಕ ರ್‍ಯಾಲಿ, ಪ್ರದರ್ಶನ, ವಿಚಾರಸಂಕಿರಣ ಮುಂತಾದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ಅದರ ಒಂದು ಝಲಕ್ ಇಲ್ಲಿದೆ.



ವಸಂತರಾಜ ಎನ್.ಕೆ.



ಚಂಡೀಗಢದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ರ್‍ಯಾಲಿ



ಢಾಕಾದಲ್ಲಿ ಮಹಿಳಾ ರ್‍ಯಾಲಿಯಲ್ಲಿ ಒಬ್ಬ ಕಾರ್ಮಿಕ ಮಹಿಳೆ



ಲಂಡನ್‌ನಲ್ಲಿ "ಮಹಿಳೆಯರ ಪ್ರಾಣಕ್ಕಾಗಿ" ಬೃಹತ್ ರ್‍ಯಾಲಿ



ಇರಾನಿನ ಟೆಹರಾನಿನಲ್ಲಿ ಮಹಿಳಾ ರ್‍ಯಾಲಿ



ಸುಡಾನಿ ಮಹಿಳೆಯರು ಉತ್ತರ ದರಫುರಿನ ರ್‍ಯಾಲಿಯಲ್ಲಿ




ಅರ್ಜೆಂಟಿನಾದಲ್ಲಿ ಮಿಲಿಟರಿ ಸರ್ವಾಧಿಕಾರಿಗಳು ಕಾಣೆ ಮಾಡಿದ ಮಕ್ಕಳನ್ನು ಹುಡುಕಿ ಅಂತ ಹಲವು ವರ್ಷಗಳಿಂದ ಪ್ರತಿ ವಾರ ಪ್ರತಿಭಟನೆ ಮಾಡುತ್ತಿರುವ ಮಹಿಳಾ ಸಂಘಟನೆಯ ಪ್ರದರ್ಶನ



ಕೆನ್ಯಾದಲ್ಲಿ ಒಂದು ಮಹಿಳಾ ಪ್ರದರ್ಶನ



ಮಹಿಳಾ ಹೋರಾಟದ ಒಂದು 'ಫ್ಲಾಶ್-ಬ್ಯಾಕ್'



ಲೆಬನಾನಿನ ಬೈರುತಿನಲ್ಲಿ 'ರಸ್ತೆಯಲ್ಲಿ ಮಹಿಳೆಯರಿಗೆ ಸುರಕ್ಷಿತವಾಗಿ ನಡೆದಾಡಲು ಬಿಡಿ' ನಡಿಗೆ



ಆಸ್ಟ್ರೇಲಿಯಾ ಹೊರಡಿಸಿದ ವಿಶೇಷ ಅಂಚೆ ಚೀಟಿ

International Women's Day Korea 2011

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor; S.Y.GURUSHANTH